

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಆಗಸ್ಟ್ 24 ಶನಿವಾರ 2024

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 45 | ಸಂಚಿಕೆ: 129 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4



ಮುಡಾ ರಕ್ಷಣೆಗೆ 'ಮನೆ' ಮಾದೇಗೌಡರೆ ಮುಂದಾದರು...!

ಈಗಾಗಲೇ ನಿವೇಶನ ಹಂಚಿಕೆ ಹಗರಣದಿಂದಾಗಿ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ(ಮುಡಾ) ದೇಶದಾದ್ಯಂತ ರಾಜಕೀಯವಾಗಿ ಸದ್ದು ಮಾಡಿದೆ. ರಾಜ್ಯದ ಮುಖ್ಯಮಂತ್ರಿ ಸಿದ್ದರಾಮಯ್ಯನವರ ಪತ್ನಿಯೂ ಇಂತಹ ನಿವೇಶನಗಳ ಫಲಾನುಭವಿ ಎಂಬುದೇ ಸ್ಫೋಟಕ ತಿರುವು ಪಡೆಯಲು ಕಾರಣವಾಗಿದೆ. ನಿವೇಶನ ಹಗರಣ ಮಾತ್ರವೇ ಸುದ್ದಿಯಲ್ಲಿದೆ. ಆದರೆ, ರಾಜ್ಯದ ಮುಖ್ಯಮಂತ್ರಿಯಾದಿಯಾಗಿ ಯಾವ ರಾಜಕೀಯ ನಾಯಕರು ಹಾಗೂ ಮುತ್ಸದ್ದಿಗಳು ಮುಡಾ ಶುದ್ಧೀಕರಿಸುವ ನಿಟ್ಟಿನಲ್ಲಿ ಚಿಂತನೆ ನಡೆಸಿದ್ದೇ ಇಲ್ಲ. ಹಾಗಾಗಿ ಮುಡಾದ ಪಳೆಯುಳಿಕೆಯಾದ ಮೈಸೂರು ನಗರಾಭಿವೃದ್ಧಿ ವಿಶ್ವಸ್ಥ ಮಂಡಳಿ (ಸಿಐಟಿಬಿ) ಅಧ್ಯಕ್ಷರಾಗಿ, 'ಆಶಾ ಮಂದಿರ'ದಂತಹ ಮಹತ್ವದ ನೂರು ಯೋಜನೆಗೆ ಕಾರಣ ಕರ್ತರು, 'ಮನೆ ಮಾದೇಗೌಡ' ಎಂಬ ಅನ್ವರ್ಥಕ ನಾಮಾಂಕಿತರಾದ ಡಿ. ಮಾದೇಗೌಡರೇ ಮುಂದೆ ಬಂದು ಇದರ ಬಗ್ಗೆ ಈಗ ದನಿ ಎತ್ತಬೇಕಾಯಿತು. ಮುಡಾದ ನಿವೇಶನ ಹಗರಣಗಳಿಗೆ ಅಂತ್ಯ ಹಾಡುವುದು ಹಾಗೂ ಅದನ್ನು ಶುದ್ಧೀಕರಿಸುವ ಮಾರ್ಗೋಪಾಯ ಕುರಿತಾಗಿ ಗೌಡರು, ರಾಜ್ಯದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಸುದೀರ್ಘ ಬಹಿರಂಗ ಪತ್ರವೊಂದನ್ನು ಬರೆದಿದ್ದಾರೆ. ಆ ಪತ್ರದ ಪೂರ್ಣ ಪಾಠವನ್ನು 4ನೇ ಪುಟದಲ್ಲಿ ಪ್ರಕಟಿಸಲಾಗಿದೆ. –ಸಂಪಾದಕ

ಅರಮನೆ ಆವರಣದಲ್ಲಿ ಬೀಡು ಬಿಟ್ಟ ಅಭಿಮನ್ಯು ಪಡೆ

● ತುಲಾ ಲಗ್ನದಲ್ಲಿ ಜಯಮಾರ್ತಾಂಡ ದ್ವಾರದ ಮೂಲಕ ಅರಮನೆ ಅಂಗಳ ಪ್ರವೇಶಿಸಿದ ದಸರಾ ಗಜಪಡೆ


ಮೈಸೂರು ಅರಮನೆಯ ಜಯಮಾರ್ತಾಂಡ ದ್ವಾರದಲ್ಲಿ ದಸರಾ ಗಜಪಡೆಗೆ ಸಾಂಪ್ರದಾಯಿಕವಾಗಿ ಪೂಜೆ ಸಲ್ಲಿಸಿ, ಅರಮನೆ ಆವರಣಕ್ಕೆ ಬರಮಾಡಿಕೊಳ್ಳಲಾಯಿತು.

ಮೈಸೂರು, ಆ.23(ಎಂಟಿವೈ)– ದಸರಾ ಮಹೋತ್ಸವದಲ್ಲಿ ಪಾಲ್ಗೊಳ್ಳಲು ಮೊದಲ ತಂಡದಲ್ಲಿ ಮೈಸೂರಿಗೆ ಆಗಮಿಸಿದ್ದ ಅಂಬಾರಿ ಆನೆ ಅಭಿಮನ್ಯು ನೇತೃತ್ವದ 9 ಆನೆಗಳು ಶುಕ್ರವಾರ ಮೈಸೂರು ಅರಮನೆ ಆವರಣ ಪ್ರವೇಶಿಸಿದವು.

ಪ್ರಸಕ್ತ ಸಾಲಿನ ದಸರಾ ಮಹೋತ್ಸವದಲ್ಲಿ ಭಾಗವಹಿಸುವ 14 ಆನೆಗಳಲ್ಲಿ ಮೊದಲ ತಂಡದಲ್ಲಿ 9 ಆನೆಗಳು ಆ.21ರಂದು ಗಜಪಯಣದ ಮೂಲಕ ಮೈಸೂರಿನ ಅಶೋಕಪುರಂನಲ್ಲಿರುವ ಅರಣ್ಯ ಭವನದ ಆವರಣ ತಲುಪಿ ಬೀಡು ಬಿಟ್ಟಿದ್ದವು. ಇಂದು ಬೆಳಗ್ಗೆ ರಾಜಬೀದಿಗಳಲ್ಲಿ ಸಾಗಿ ಅರಮನೆಯ ಜಯಮಾರ್ತಾಂಡ ದ್ವಾರದ ಬಳಿ ಆಗಮಿಸಿದ ಗಜಪಡೆಗೆ ಬೆಳಗ್ಗೆ 10.30ಕ್ಕೆ ತುಲಾ ಲಗ್ನದಲ್ಲಿ ಸಾಂಪ್ರದಾಯಿಕ ಸ್ವಾಗತ ಕೋರಲಾಯಿತು. 9 ಆನೆಗಳಿಗೂ ಚಾಮುಂಡಿಬೆಟ್ಟದ ಚಾಮುಂಡೇಶ್ವರಿ ದೇವಾಲಯದ ಪ್ರಧಾನ ಆಗಮಿಕ ಡಾ.ಎನ್.ಶಶಿಶೇಖರ್ ದೀಕ್ಷಿತ್ ಹಾಗೂ ಅರ್ಚಕ ಎಸ್.ವಿ.ಪ್ರಹ್ಲಾದ್‌ರಾವ್ ಸಂಪ್ರದಾಯದಂತೆ ಪೂಜೆ ಸಲ್ಲಿಸಿ, ಮಂಗಳಾರತಿ ಬೆಳಗಿದರು. ಅರಮನೆ ಮಂಡಳಿ ವತಿಯಿಂದ ಆಯೋಜಿಸಿದ್ದ ಗಜಪಡೆಗೆ ಸ್ವಾಗತ ■ 3ನೇ ಪುಟಕ್ಕೆ

ಕುಶಾಲನಗರ ಸುತ್ತಮುತ್ತ ಭೂಮಿ ಕಂಪಿಸಿದ ಅನುಭವ

ಮಡಿಕೇರಿ, ಆ.23–ಕುಶಾಲನಗರ ಪಟ್ಟಣದ ಕೆಲಭಾಗ ಸೇರಿದಂತೆ ಸುತ್ತಮುತ್ತಲ ಗ್ರಾಮಗಳಲ್ಲಿ ನಿಗೂಢ ಶಬ್ದ ಸಹಿತ ಕೆಲ ಸೆಕೆಂಡ್ ಭೂಮಿ ಕಂಪಿಸಿದ ಅನುಭವವಾಗಿದ್ದು, ಜನರಲ್ಲಿ ಆತಂಕ ಮೂಡಿಸಿದೆ. ಈ ಘಟನೆ ಶುಕ್ರವಾರ ಬೆಳಗ್ಗೆ ನಡೆದಿದೆ.

ಕುಶಾಲನಗರ, ಹೆಬ್ಬಾಲೆ, ಹಕ್ಕೆ, ಕೂಡು ಮಂಗಳೂರು, ಮುಳ್ಳುಸೋಗೆ, ಕೊಪ್ಪ ಗ್ರಾಮಗಳ ವ್ಯಾಪ್ತಿಯಲ್ಲಿ ಬೆಳಗ್ಗೆ ಸುಮಾರು 6.30ರ ಸಮಯದಲ್ಲಿ 3 ಸೆಕೆಂಡ್ ಭೂಮಿ ಕಂಪಿಸಿದೆ ಎಂದು ತಮ್ಮ ಅನುಭವವನ್ನು ಗ್ರಾಮಸ್ಥರು ಹಂಚಿಕೊಂಡಿದ್ದಾರೆ. ■ 5ನೇ ಪುಟಕ್ಕೆ

ಸಿಎಂ ಸಿದ್ದರಾಮಯ್ಯರಿಗೆ ಹೈಕಮಾಂಡ್ ಅಭಯ

● ಕಾನೂನು, ರಾಜಕೀಯ ಹೋರಾಟಕ್ಕೆ ಗ್ರೀನ್ ಸಿಗ್ನಲ್ ● ಅವಶ್ಯವಿದ್ದರೆ ರಾಜ್ಯಪಾಲರ ವರ್ತನೆ ವಿಚಾರವಾಗಿ ರಾಷ್ಟ್ರಪತಿಯವರ ಭೇಟಿಗೂ ಚಿಂತನೆ ● ಬುಲಾವ್ ಮೇರೆಗೆ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಲೋಕಸಭೆ ವಿಪಕ್ಷ ನಾಯಕ ರಾಹುಲ್ ಗಾಂಧಿ ಭೇಟಿಯಾದ ಸಿಎಂ ಸಿದ್ದರಾಮಯ್ಯ, ಡಿಸಿಎಂ ಡಿ.ಕೆ.ಶಿವಕುಮಾರ್


ಮುಖ್ಯಮಂತ್ರಿ ಸಿದ್ದರಾಮಯ್ಯ, ಡಿಸಿಎಂ ಡಿ.ಕೆ.ಶಿವಕುಮಾರ್ ದೆಹಲಿಯಲ್ಲಿ ಶುಕ್ರವಾರ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನಖರ್ಗೆ, ಲೋಕಸಭಾ ವಿಪಕ್ಷ ನಾಯಕ ರಾಹುಲ್‌ಗಾಂಧಿ ಅವರೊಂದಿಗೆ ಚರ್ಚೆ ನಡೆಸಿದರು. ಕರ್ನಾಟಕ ಕಾಂಗ್ರೆಸ್ ಉಸ್ತುವಾರಿ ರಣದೀಪ್‌ಸಿಂಗ್ ಸುರ್ಜೇವಾಲ, ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ.ವೇಣುಗೋಪಾಲ್ ಉಪಸ್ಥಿತರಿದ್ದರು.

ಹೊಸದಿಲ್ಲಿ, ಆ.23–ಮುಡಾ ಪ್ರಕರಣದಲ್ಲಿ ಇಕ್ಕಟ್ಟಿಗೆ ಸಿಲುಕಿರುವ ಮುಖ್ಯಮಂತ್ರಿ ಸಿದ್ದರಾಮಯ್ಯಗೆ ಕಾಂಗ್ರೆಸ್ ಹೈಕಮಾಂಡ್ ಅಭಯ ನೀಡಿದ್ದು, ಕಾನೂನು ಹಾಗೂ ರಾಜಕೀಯ ಹೋರಾಟ ಮುಂದುವರೆಸುವಂತೆ ಗ್ರೀನ್ ಸಿಗ್ನಲ್ ಕೊಟ್ಟಿದೆ. ಅಲ್ಲದೆ ಕರ್ನಾಟಕ ರಾಜ್ಯಪಾಲರ ವರ್ತನೆ ವಿರುದ್ಧ ಕಾಂಗ್ರೆಸ್ ನಿಯೋಗ ರಾಷ್ಟ್ರಪತಿ ಯವರನ್ನು ಭೇಟಿ ಮಾಡಲು ಚಿಂತನೆ ನಡೆಸುವುದಾಗಿ ತಿಳಿಸಿದೆ.

ಮುಡಾ ಪ್ರಕರಣ ದೇಶಾದ್ಯಂತ ಸದ್ದು ಮಾಡುತ್ತಿದ್ದಂತೆಯೇ ಕಾಂಗ್ರೆಸ್ ಹೈಕಮಾಂಡ್ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪ ಮುಖ್ಯಮಂತ್ರಿಗಳೂ ಆದ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಅವರನ್ನು ದೆಹಲಿಗೆ ಬರುವಂತೆ ಬುಲಾವ್ ನೀಡಿತ್ತು. ಈ ಹಿನ್ನೆಲೆಯಲ್ಲಿ ಸಿದ್ದರಾಮಯ್ಯನವರು ನಿನ್ನೆ (ಆ.22) ಸಂಜೆ ವಿಧಾನಸೌಧದ ಸಮ್ಮೇಳನ ಸಭಾಂಗಣದಲ್ಲಿ ಕಾಂಗ್ರೆಸ್ ಶಾಸಕಾಂಗ ಪಕ್ಷದ ಸಭೆ ಕರೆದಿದ್ದರು. ಈ ಸಭೆಯಲ್ಲಿ ಎಲ್ಲಾ ಶಾಸಕರು ಒಕ್ಕೊರಲಿನಿಂದ ಸಿದ್ದರಾಮಯ್ಯ ಅವರಿಗೆ ಬೆಂಬಲ ಸೂಚಿಸಿ ನಿರ್ಣಯ ಕೈಗೊಂಡಿದ್ದರು. ಹಿರಿಯ ಶಾಸಕ ಆರ್.ವಿ.ದೇಶಪಾಂಡೆ ಈ ನಿರ್ಣಯವನ್ನು ಪ್ರಸ್ತಾಪಿಸಿದರೆ, ಶಾಸಕ ತನ್ವೀರ್ ಸೇಠ್ ಅನುಮೋದಿಸಿದ್ದರು. ■ 5ನೇ ಪುಟಕ್ಕೆ

ಸಂಪುಟ ಪುನರ್‌ರಚನೆ, ಕೆಪಿಸಿಸಿ ಅಧ್ಯಕ್ಷ ಬದಲಾವಣೆ ವಿಚಾರ ಪ್ರಸ್ತಾಪ

ನವದೆಹಲಿ, ಆ.23–ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ದೆಹಲಿಯಲ್ಲಿ ಕಾಂಗ್ರೆಸ್ ವರಿಷ್ಠರ ಜೊತೆ ನಡೆಸಿದ ಸಭೆಯಲ್ಲಿ ಸಂಪುಟ ಪುನರ್ ರಚನೆ ಹಾಗೂ ಕೆಪಿಸಿಸಿ ಅಧ್ಯಕ್ಷರ ಬದಲಾವಣೆ ಸಂಬಂಧ ಚರ್ಚೆ ನಡೆದಿದೆ ಎಂದು ಮೂಲಗಳು ತಿಳಿಸಿವೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ತಮ್ಮ ಸಂಪುಟದ 5 ರಿಂದ 6 ಸಚಿವರನ್ನು ಕೈಬಿಟ್ಟು ಹೊಸಬರಿಗೆ ಅವಕಾಶ ನೀಡುವ ಬಗ್ಗೆ ವರಿಷ್ಠರ ಮುಂದೆ ಪ್ರಸ್ತಾಪ ಸಲ್ಲಿಸಿದರು. ಅದೇ ವೇಳೆ ಡಿ.ಕೆ.ಶಿವಕುಮಾರ್ ಅವರ ಕೆಪಿಸಿಸಿ ಅಧ್ಯಕ್ಷ ಸ್ಥಾನದ ಅವಧಿ ಮುಗಿದಿರುವ ಕಾರಣ ರಾಜ್ಯದಲ್ಲಿ ಕೆಪಿಸಿಸಿ ಅಧ್ಯಕ್ಷ ಬದಲಾವಣೆ ಬಗ್ಗೆಯೂ ಪ್ರಸ್ತಾಪಿಸಿದರು ಎಂದು ಹೇಳಲಾಗಿದೆ. ■ 5ನೇ ಪುಟಕ್ಕೆ

ಪ್ರಜ್ವಲ್ ರೇವಣ್ಣ ವಿರುದ್ಧದ ಅತ್ಯಾಚಾರ ಪ್ರಕರಣ: ಎರಡು ಸಾವಿರ ಪುಟಗಳ ಚಾರ್ಜ್‌ಶೀಟ್ ಸಲ್ಲಿಕೆ

ಬೆಂಗಳೂರು, ಆ. 23–ಮಾಜಿ ಸಂಸದ ಪ್ರಜ್ವಲ್ ರೇವಣ್ಣ ವಿರುದ್ಧದ



ಅತ್ಯಾಚಾರ ಕೇಸ್‌ಗೆ ಸಂಬಂಧಿಸಿದಂತೆ ಎಸ್‌ಐಟಿ ಅಧಿಕಾರಿಗಳು ತನಿಖೆ ನಡೆಸಿ ಇಂದು ಜನಪ್ರತಿನಿಧಿಗಳ ವಿಶೇಷ ಕೋರ್ಟ್‌ಗೆ ತನಿಖಾಧಿಕಾರಿ ಸುಮಾರಾಣಿ ಅವರಿಂದ ದೋಷಾರೋಪಣೆ ಪಟ್ಟಿ ಸಲ್ಲಿಸಲಾಗಿದೆ. ಆ ಮೂಲಕ ಪ್ರಜ್ವಲ್ ರೇವಣ್ಣ ವಿರುದ್ಧ ಮೊದಲ ಚಾರ್ಜ್‌ಶೀಟ್ ಇದಾಗಿದೆ.

ಹಾಸನದಲ್ಲಿ ಪ್ರಜ್ವಲ್ ರೇವಣ್ಣ ವಿರುದ್ಧ ದಾಖಲಾಗಿದ್ದ ಅತ್ಯಾಚಾರ ಕೇಸ್ ನಂತರ ಸಿಐಡಿಗೆ ವರ್ಗಾವಣೆ ಆಗಿತ್ತು. ತನಿಖೆ ಕೈಗೆತ್ತಿಕೊಂಡು ಎಸ್‌ಐಟಿ ಅಧಿಕಾರಿಗಳು 123 ಸಾಕ್ಷ್ಯಗಳನ್ನು ಸಂಗ್ರಹಿಸಿದ್ದಾರೆ. ಸುಮಾರು 2 ಸಾವಿರ ಪುಟಗಳ ಚಾರ್ಜ್‌ಶೀಟ್‌ನ್ನು ಅಧಿಕಾರಿಗಳು ಸಲ್ಲಿಸಿದ್ದಾರೆ. ■ 5ನೇ ಪುಟಕ್ಕೆ

ಮುಂದುವರೆದ ಮುಡಾ ನಿವೇಶನ ಹಂಚಿಕೆ ಹಗರಣದ ಪುರಾಣ

ಭೂ ಮಾಲೀಕರ ಕೋರಿಕೆ ನಿರಾಕರಿಸಿ 2ನೇ ಖರೀದಿದಾರನಿಗೆ ಬೇರೆ ಬಡಾವಣೆಯಲ್ಲಿ ಬೆಲೆ ಬಾಳುವ ನಿವೇಶನ ಮಂಜೂರು

ದೇವನೂರು ಗ್ರಾಮದ 1.21 ಎಕರೆ ಜಮೀನಿಗೆ ಪರಿಹಾರವಾಗಿ ಬೋಗಾದಿ, ಜೆ.ಪಿ.ನಗರ ಬಡಾವಣೆಗಳಲ್ಲಿ ಶೇ.50:50ರಡಿ 8 ಕೋಟಿ ರೂ. ಮೌಲ್ಯದ ನಿವೇಶನ ಹಂಚಿದ ಮುಡಾ ಅಧಿಕಾರಿಗಳು

ಎಸ್.ಟಿ.ರವಿಕುಮಾರ್

ಮೈಸೂರು, ಆ.23–ರೈತರ ಸಹಭಾಗಿತ್ವದಲ್ಲಿ ವಸತಿ ಬಡಾವಣೆ ರಚಿಸಲು ಅನುವಾಗುವಂತೆ 2015ರಲ್ಲಿ ಸರ್ಕಾರ ಅನುಷ್ಠಾನಗೊಳಿಸಿದ ಶೇ.50:50ರ ಅನುಪಾತದ ನಿವೇಶನ ಹಂಚಿಕೆ ಪ್ರಕ್ರಿಯೆಯನ್ನು ದುರ್ಬಳಕೆ ಮಾಡಿಕೊಂಡು ಮುಡಾ ಅಧಿಕಾರಿಗಳ ಬ್ರಹ್ಮಾಂಡ ಭ್ರಷ್ಟಾಚಾರಕ್ಕೆ ಇದೀಗ ಮತ್ತೊಂದು ಪ್ರಕರಣ ಬೆಳಕಿಗೆ ಬಂದಿದೆ.

ಮೂಲ ಭೂ ಮಾಲೀಕರು ಈ ಯೋಜನೆಯನ್ವಯ ಪರಿಹಾರವಾಗಿ ನಿವೇಶನ ನೀಡುವಂತೆ ಕೋರಿ ಹಲವು ಬಾರಿ ಅರ್ಜಿ ಸಲ್ಲಿಸಿದರೂ ತಾಂತ್ರಿಕ ಕಾರಣ ನೀಡಿ ತಿರಸ್ಕರಿಸುವ ಅಧಿಕಾರಿಗಳು, ಅಂದು ಶಾಸಕರು ಹಾಗೂ ಮುಡಾ ಸದಸ್ಯರಾಗಿದ್ದ ಎಲ್.ನಾಗೇಂದ್ರ ಅವರು ಶಿಫಾರಸು ಮಾಡಿದ್ದ ಹಿನ್ನೆಲೆಯಲ್ಲಿ ಜಮೀನಿನ 2ನೇ ಖರೀದಿದಾರನ ಹೆಸರಿಗೆ ಅಭಿವೃದ್ಧಿಪಡಿಸಿದ ಜೆ.ಪಿ.ನಗರ, ಬೋಗಾದಿ ಬಡಾವಣೆಗಳಲ್ಲಿ ಶೇ.50:50 ಅನುಪಾತದಡಿ 16,607 ಚದರ ಅಡಿ ವಿಸ್ತೀರ್ಣದ ಒಟ್ಟು 7 ನಿವೇಶನಗಳನ್ನು ಮಂಜೂರು ಮಾಡಿದ್ದಾರೆ.

ಮೈಸೂರು ತಾಲೂಕು, ಕಸಬಾ ಹೋಬಳಿ ದೇವನೂರು ಗ್ರಾಮದ ಸರ್ವೆ ನಂಬರ್ 81/1ರ



ಪೈಕಿ 1.21 ಎಕರೆ ಜಮೀನನ್ನು ಈ ಹಿಂದೆ ನಗರ ಅಭಿವೃದ್ಧಿ ವಿಶ್ವಸ್ಥ ಮಂಡಳಿ (ಸಿಐಟಿಬಿ)ಯು ವಸತಿ ಬಡಾವಣೆಗಾಗಿ ಭೂ ಸ್ವಾಧೀನ ಪ್ರಕ್ರಿಯೆಗೊಳಪಡಿಸದೇ ಬಳಸಿಕೊಂಡಿತ್ತು.

ಮೂಲತಃ ನಿಜಗುಣ ಉ. ನಿಜಗುಣಮ್ಮ ಮತ್ತು ಹರೀಶ್ ಎಂಬುವರ ಹಿಸ್ಸೆಗೆ ಬಂದಿದ್ದ 1.21 ಎಕರೆ ಜಮೀನನ್ನು ಬಡಾವಣೆ ನಿರ್ಮಾಣಕ್ಕಾಗಿ ಬಳಸಿಕೊಂಡಿರುವುದರಿಂದ ಅದಕ್ಕೆ ಬದಲಾಗಿ ಪರಿಹಾರ ರೂಪದಲ್ಲಿ ಸರ್ಕಾರ ಜಾರಿಗೆ ತಂದಿರುವ ಶೇ.50:50ರಡಿ ನಿವೇಶನ ನೀಡುವಂತೆ 2020ರಲ್ಲಿ ಮುಡಾಗೆ ಅರ್ಜಿ ಸಲ್ಲಿಸಿದ್ದರಾದರೂ, ಕೆಲ ತಾಂತ್ರಿಕ ಕಾರಣ ನೀಡಿ ತಿರಸ್ಕರಿಸಿದ್ದ ಅಧಿಕಾರಿಗಳು, ಸೂಕ್ತ ಹಿಂಬರಹ ನೀಡಿದ್ದರು.

ಮುಂದೆಯೂ ಹೋರಾಟಕ್ಕೆ ನಿಂತ ನಿಜಗುಣ ಮತ್ತು ಹರೀಶ್ ಅವರು 2020ರ ಮೇ 20ರಂದು ಎಸ್.ತಾರಾ ಎಂಬುವರಿಗೆ ಸದರಿ ಜಮೀನನ್ನು ಶುದ್ಧ ಕ್ರಯಕ್ಕೆ ಮಾರಾಟ ಮಾಡಿದ್ದು, ಮೈಸೂರು ಉತ್ತರ ಉಪ ನೋಂದಣಾಧಿಕಾರಿ ಕಚೇರಿಯಲ್ಲಿ ನೋಂದಣಿಯಾಗಿ ನಂತರ ಸ್ವತ್ತಿನ ಖಾತೆಯನ್ನು ಮೈಸೂರು ತಾಲೂಕು ತಹಶೀಲ್ದಾರ್ ಕಚೇರಿಯಲ್ಲಿ ಖಾತೆ ನಂ.144, ಎಂಆರ್. ಹೆಚ್2/2020–21ರ ರೀತ್ಯಾ ಆರ್‌ಟಿಸಿಯಲ್ಲಿ ನಮೂದಾಗುತ್ತದೆ. ಬಳಿಕ ಬೋಗಾದಿಯ ವಿ.ವೆಂಕಟೇಶ್ ಎಂಬುವರಿಗೆ ತಾರಾ ಅವರು ಸದರಿ ಜಮೀನನ್ನು 2021ರ ಮಾರ್ಚ್ 1ರಂದು ಶುದ್ಧ ಕ್ರಯಕ್ಕೆ ಮಾರಾಟ ಮಾಡಿದ್ದರಿಂದ ಅವರ ಹೆಸರಿಗೆ ಖಾತೆಯೂ ವರ್ಗಾವಣೆಯಾಗುತ್ತದೆ.

ವಿ.ವೆಂಕಟೇಶ್ ಅವರು ಮುಡಾಗೆ ಅರ್ಜಿ ಸಲ್ಲಿಸಿ ಈಗಾಗಲೇ ತಮ್ಮ ಜಮೀನಿನಲ್ಲಿ ಬಡಾವಣೆ ನಿರ್ಮಿಸಿರುವುದರಿಂದ ಬದಲಿ ಜಮೀನು ನೀಡಬೇಕೆಂದು ಕೋರಿದ್ದರ ಮೇರೆಗೆ ಶಾಸಕರೂ ಆದ ಓರ್ವ ಸದಸ್ಯರು ■ 5ನೇ ಪುಟಕ್ಕೆ

ಕಳೆದ 24 ಗಂಟೆಯಲ್ಲಿ ರಾಜ್ಯದಲ್ಲಿ 199 ಜನರಿಗೆ ಡೆಂಗ್ಯೂ


ಬೆಂಗಳೂರು, ಆ.23(ಬಿಎಲ್‌ಯು)– ರಾಜ್ಯದಲ್ಲಿ ಡೆಂಗ್ಯೂ ಸೋಂಕಿತರ ಸಂಖ್ಯೆ ಹೆಚ್ಚಾಗುತ್ತಿದ್ದು, ಕಳೆದ 24 ಗಂಟೆ ಅವಧಿಯಲ್ಲಿ 199 ಜನರಲ್ಲಿ ಡೆಂಗ್ಯೂ ಕಂಡು ಬಂದಿದೆ. ರಾಜ್ಯದಲ್ಲಿ ಜನವರಿ 1ರಿಂದ ಆಗಸ್ಟ್ ತನಕ 21ರವರೆಗೆ ಪತ್ತೆಯಾಗಿರುವ ಡೆಂಗ್ಯೂ ಸೋಂಕಿತರ ಸಂಖ್ಯೆ ಸೇರಿದಂತೆ ಹಲವು ಮಾಹಿತಿಯನ್ನು ಆರೋಗ್ಯ ಇಲಾಖೆ ನೀಡಿದೆ.

ಕಳೆದ ಎಂಟು ತಿಂಗಳ ಅವಧಿಯಲ್ಲಿ ರಾಜ್ಯದಲ್ಲಿ 1,61,937 ಜನರ ರಕ್ತದ ಮಾದರಿಯನ್ನು ಪರೀಕ್ಷಿಸಲಾಗಿತ್ತು. ಇದರಲ್ಲಿ 23,163 ಜನರಲ್ಲಿ ಡೋಂಗ್ಯೂ ಸೋಂಕು ಪತ್ತೆಯಾಗಿತ್ತು. ಚಿಕಿತ್ಸೆ ಫಲಕಾರಿಯಾಗದೆ ಈ ತನಕ 10 ಜನರು ಮೃತಪಟ್ಟಿದ್ದಾರೆ. ಮೈಸೂರು ಜಿಲ್ಲೆಯಲ್ಲಿ 762, ಚಾಮರಾಜನಗರ ಜಿಲ್ಲೆಯಲ್ಲಿ 110, ಮಂಡ್ಯ ಜಿಲ್ಲೆಯಲ್ಲಿ 801, ಹಾಸನ ಜಿಲ್ಲೆಯಲ್ಲಿ 810 ಜನರಲ್ಲಿ ಡೆಂಗ್ಯೂ ಪ್ರಕರಣ ಪತ್ತೆಯಾಗಿತ್ತು. ಆದರೆ ಕೊಡಗು ಜಿಲ್ಲೆಯಲ್ಲಿ ಒಂದು ಪ್ರಕರಣ ಪತ್ತೆಯಾಗಿಲ್ಲ.

ಡೆಂಗ್ಯೂ ಸೋಂಕು ಇರುವ ಮೈಸೂರಿನ ಒಬ್ಬ ವ್ಯಕ್ತಿ ಹಾಗೂ ಹಾಸನದ ಇಬ್ಬರು ಮೃತಪಟ್ಟಿದ್ದಾರೆ ಎಂದು ಆರೋಗ್ಯ ಇಲಾಖೆ ಮಾಹಿತಿ ನೀಡಿದೆ. ಬೆಂಗಳೂರಿನಲ್ಲಿ ಇಡೀ ರಾಜ್ಯದಲ್ಲಿ ಅತಿ ಹೆಚ್ಚು ಅಂದರೆ 10,511 ಜನರಲ್ಲಿ ಡೆಂಗ್ಯೂ ಪತ್ತೆಯಾಗಿದೆ. ಇಡೀ ದೇಶದಲ್ಲೆ ಅತಿ ಹೆಚ್ಚು ಡೆಂಗ್ಯೂ ಸೋಂಕಿತರ ನಗರದಲ್ಲಿ ಬೆಂಗಳೂರು ಮೊದಲ ಸ್ಥಾನದಲ್ಲಿದೆ.

ದುಡ್ಡು ಮಾಡಲು ಎಲೆಕ್ಷನ್ ಅಡ್ಡ ಬರಲ್ಲ, ಜನರ ಕೆಲಸ ಮಾಡಲು ಎಲೆಕ್ಷನ್ ಅಡ್ಡ ಬರುತ್ತಾ...:

ಅಧಿಕಾರಿಗಳಿಗೆ ಕಂದಾಯ ಸಚಿವ ಕೃಷ್ಣ ಭೈರೇಗೌಡ ತೀವ್ರ ತರಾಟೆ



ಬೆಂಗಳೂರು, ಆ.23(ಬಿಎಲ್‌ಯು)– ದುಡ್ಡು ಮಾಡಲು ಎಲೆಕ್ಷನ್ ಅಡ್ಡ ಬರಲ್ಲ, ಆದರೆ ಜನರ ಕೆಲಸ ಮಾಡಲು ಮಾತ್ರ ಎಲೆಕ್ಷನ್ ಅಡ್ಡ ಬರುತ್ತಾ ಎಂದು ಕಂದಾಯ ಸಚಿವ ಕೃಷ್ಣ ಭೈರೇಗೌಡ ಉಪ ವಿಭಾಗಾಧಿಕಾರಿಗಳನ್ನು ತೀವ್ರ ತರಾಟೆಗೆ ತೆಗೆದುಕೊಂಡಿದ್ದಾರೆ.


ಬೆಂಗಳೂರಿನ ವಿಕಾಸಸೌಧದಲ್ಲಿ ಇಂದು ಮೈಸೂರು, ಮಂಡ್ಯ, ಚಾಮರಾಜನಗರ, ಹಾಸನ, ಕೊಡಗು ಸೇರಿದಂತೆ ರಾಜ್ಯದ ಎಲ್ಲಾ ಜಿಲ್ಲೆಗಳ ಉಪ ವಿಭಾಗಾಧಿಕಾರಿಗಳು ಹಾಗೂ ವಲಯ ಆಯುಕ್ತರ ಜೊತೆ ನಡೆಸಿದ ವಿಡಿಯೋ ಕಾನ್ಫರೆನ್ಸ್‌ನಲ್ಲಿ ಮಾತನಾಡಿದ ಅವರು, ನಾವು ಒಳ್ಳೆಯ ಮಾತಿನಿಂದ ಹೇಳಿದರೆ ನಿಮ್ಮ ತಲೆಗೆ ಹೋಗುವುದಿಲ್ಲ. ನಿಮಗೆ ನಿಮ್ಮ ಭಾಷೆಯಲ್ಲೇ ಹೇಳಬೇಕು ಎಂದು ಎಚ್ಚರಿಸಿದರು.

ರಾಜ್ಯಾದ್ಯಾಂತ ಎಸಿ ನ್ಯಾಯಾಲಯಗಳಲ್ಲಿ 36,430 ಪ್ರಕರಣ ಬಾಕಿ ಇವೆ. ಈ ಪ್ರಕರಣಗಳನ್ನು ಬೇಗ ಇತ್ಯರ್ಥ ಮಾಡಿ ಅಂದರೆ ಎಲೆಕ್ಷನ್ ಕೆಲಸ ಇತ್ತು ಎಂದು ಸಬೂಬು ಹೇಳುತ್ತೀರಾ. ದುಡ್ಡು ಮಾಡಲು ಎಲೆಕ್ಷನ್ ಅಡ್ಡ ಬರಲ್ಲ, ಆದರೆ ಜನರ ಕೆಲಸ ಮಾಡಲು ಮಾತ್ರ ಎಲೆಕ್ಷನ್ ಅಡ್ಡ ಬರುತ್ತಾ ಎಂದು ಕಿಡಿಕಾರಿದರು.

ಹಲವು ವರ್ಷಗಳಿಂದ ಎಸಿ ನ್ಯಾಯಾಲಯಗಳಿಗೆ ಅಲೆದಾಡಿ ಜನರು ತೊಂದರೆ ಅನುಭವಿಸುತ್ತಿದ್ದಾರೆ. ಕಳೆದ ಒಂದು ವರ್ಷದಿಂದ ರಾಜ್ಯಾದ್ಯಾಂತ ಪ್ರವಾಸ ಮಾಡಿ ಎಸಿ ನ್ಯಾಯಾಲಯಗಳ ಪ್ರಕರಣ ಇತ್ಯರ್ಥಕ್ಕೆ ಗುರಿ ನಿಗದಿ ಮಾಡಿದ್ದೆ. ಆದರೆ ಕಳೆದ ಮಾರ್ಚ್‌ನಿಂದ ಪ್ರಕರಣಗಳ ವಿಲೇವಾರಿ ಕೆಲಸ ಮತ್ತೆ ನಿಂತ ನೀರಾಗಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಮಾರ್ಚ್ ನಂತರ ವೇಗ ಕಳೆದುಕೊಳ್ಳಲು ಏನು ಕಾರಣ ಎಂದ ಪ್ರಶ್ನಿಸಿದ ಕೃಷ್ಣ ಭೈರೇಗೌಡ, ಮತ್ತೆ ಹಳೆಯ ರೀತಿ ಏಕೆ ವರ್ತಿಸುತ್ತಿದ್ದೀರಾ ಎಂದು ತರಾಟೆಗೆ ತೆಗೆದುಕೊಂಡರು. ಇನ್ನು ಮುಂದೆ ನಿರ್ಲಕ್ಷ್ಯ ತೋರಿದರೆ ನಾವು ಸಹಿಸುವುದಿಲ್ಲ. ಈ ಹಿನ್ನೆಲೆ ಎಸಿ ನ್ಯಾಯಾಲಯದಲ್ಲಿ ಬಾಕಿ ಇರುವ ಪ್ರಕರಣಗಳ ಇತ್ಯರ್ಥಕ್ಕೆ ಮುಂದಾಗದ ಅಧಿಕಾರಿಗಳಿಗೆ ನೋಟಿಸ್ ಜಾರಿಗೊಳಿಸಿ ಕಠಿಣ ಕ್ರಮ ಕೈಗೊಳ್ಳಬೇಕು ಎಂದು ಸರ್ಕಾರದ ಪ್ರಧಾನ ಕಾರ್ಯದರ್ಶಿ ರಾಜೇಂದ್ರ ಕುಮಾರ್ ಕಟಾರಿಯಾಗೆ ಕೃಷ್ಣ ಭೈರೇಗೌಡ ಸೂಚಿಸಿದರು. ಕಂದಾಯ ಇಲಾಖೆ ಆಯುಕ್ತ ಸುನೀಲ್ ಕುಮಾರ್, ಪ್ರಾದೇಶಿಕ ಆಯುಕ್ತ ಆದಿತ್ಯ ಬಿಸ್ವಾಸ್ ಸೇರಿದಂತೆ ಹಲವು ಅಧಿಕಾರಿಗಳು ಸಭೆಯಲ್ಲಿ ಉಪಸ್ಥಿತರಿದ್ದರು.

ಶ್ರೀ ಸುತ್ತೂರು ಮಠದಿಂದ ಮೃಗಾಲಯಕ್ಕೆ ಕೊಡುಗೆ



ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ 109ನೆಯ ಜಯಂತಿ ಅಂಗವಾಗಿ ಶ್ರೀ ಚಾಮರಾಜೇಂದ್ರ ಮೃಗಾಲಯದ ಪ್ರಾಣಿ–ಪಕ್ಷಿಗಳ ಆಹಾರದ ನಿರ್ವಹಣೆಗಾಗಿ ಒಂದು ಲಕ್ಷ ರೂ.ಗಳ ಚೆಕ್ಕನ್ನು ಮೃಗಾಲಯದ ಕಾರ್ಯ ನಿರ್ವಾಹಕ ನಿರ್ದೇಶಕ ಡಿ.ಮಹೇಶ್‌ಕುಮಾರ್‌ಗೆ ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾರ್ಯದರ್ಶಿ ಎಸ್.ಶಿವಕುಮಾರಸ್ವಾಮಿಯವರು ನೀಡಿದರು. ಬಿ.ನಿರಂಜನಮೂರ್ತಿ, ಪ್ರೊ. ಆರ್.ಮೂಗೇಶಪ್ಪ, ಡಾ. ಹೆಚ್.ವಿ.ಸಂತೃಪ್ತ್ ಇದ್ದಾರೆ.


ಮೈಸೂರು, ಆ.23– ಆ.25ರಂದು ನಡೆಯಲಿರುವ ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ 109ನೆಯ ಜಯಂತಿಯ ಅಂಗವಾಗಿ ಶ್ರೀಮಠದಿಂದ ಪ್ರತಿವರ್ಷದಂತೆ ಮೈಸೂರು ಶ್ರೀ ಚಾಮರಾಜೇಂದ್ರ ಮೃಗಾಲಯದ ಪ್ರಾಣಿ–ಪಕ್ಷಿಗಳ ಆಹಾರದ ನಿರ್ವಹಣೆಗಾಗಿ ಒಂದು ಲಕ್ಷ ರೂ.ಗಳ ಚೆಕ್ಕನ್ನು ಶುಕ್ರವಾರ ಮೃಗಾಲಯದ ಕಾರ್ಯನಿರ್ವಾಹಕ ನಿರ್ದೇಶಕ ಡಿ. ಮಹೇಶ್‌ಕುಮಾರ್ ಅವರಿಗೆ ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾರ್ಯದರ್ಶಿ ಎಸ್.ಶಿವಕುಮಾರಸ್ವಾಮಿ ನೀಡಿದರು.

ಈ ಸಂದರ್ಭದಲ್ಲಿ ಮಾತನಾಡಿದ ಮಹೇಶಕುಮಾರ್, ಕಳೆದ 15 ವರ್ಷಗಳಿಂದ ಪ್ರತಿವರ್ಷವೂ ರಾಜೇಂದ್ರ ಶ್ರೀಗಳ ಜಯಂತಿಯಂದು ಮೃಗಾಲಯದ ಪ್ರಾಣಿಪಕ್ಷಿಗಳ ಆಹಾರ ನಿರ್ವಹಣೆಗಾಗಿ ಕೊಡುಗೆ ನೀಡುತ್ತಿರುವುದು ಮಾದರಿ ಕಾರ್ಯವಾಗಿದೆ. ಇದರಿಂದ ಮೃಗಾಲಯಕ್ಕೆ ಬಹಳ ಅನುಕೂಲವಾಗುತ್ತದೆ. ಪರಮಪೂಜ್ಯ ಸುತ್ತೂರು ಶ್ರೀಗಳು ಪ್ರಾಣಿ ಪಕ್ಷಿಗಳ ಮೇಲೆ ಅಪಾರ ಕಾಳಜಿಯನ್ನು ಹೊಂದಿರುವುದನ್ನು ಸೂಚಿಸುತ್ತದೆ. ಇದೇ ರೀತಿ ಬೇರೆ ಬೇರೆ ಸಂಘ ಸಂಸ್ಥೆಗಳು ಸಹಾಯಹಸ್ತ ಚಾಚಬೇಕು ಎಂದು ಕೋರಿದರು.

ಜಯಂತಿ ಮಹೋತ್ಸವ ಸಮಿತಿಯ ಸಂಚಾಲಕರಾದ ಪ್ರೊ. ಆರ್. ಮೂಗೇಶಪ್ಪ, ಶ್ರೀ ಬಿ. ನಿರಂಜನಮೂರ್ತಿ, ಗೋಪಾಲಗೌಡ ಆಸ್ಪತ್ರೆಯ ಡಾ. ಹೆಚ್.ವಿ. ಸಂತೃಪ್ತ್ ಹಾಗೂ ಮೃಗಾಲಯದ ಸಿಬ್ಬಂದಿವರ್ಗದವರು ಉಪಸ್ಥಿತರಿದ್ದರು.

ನಿಧನ


ಬೂದಬಾಳು ವೆಂಕಟ್ಟಸ್ವಾಮಿ



ಕೊಳ್ಳೇಗಾಲ, ಆ.23– ಕೊಳ್ಳೇಗಾಲ ತಾಲೂಕಿನ ಬೂದಬಾಳು ಗ್ರಾಮದ ವಿ.ವೆಂಕಟ್ಟಸ್ವಾಮಿ(61) ಮೈಸೂರಿನ ಖಾಸಗಿ ಆಸ್ಪತ್ರೆಯಲ್ಲಿ ಮಂಗಳವಾರ ಸಂಜೆ ನಿಧನರಾದರು.

ಇವರು ಬಿಜೆಪಿ ರಾಷ್ಟ್ರೀಯ ಪರಿಷತ್ ಸದಸ್ಯರು, ದೇವರಾಜ ಅರಸ್ ಹಿಂದುಳಿದ ವರ್ಗಗಳ ಅಧ್ಯಕ್ಷರಾಗಿ ಹಾಗೂ ಹನೂರು ಬಿಜೆಪಿ ಮಂಡಲ ಅಧ್ಯಕ್ಷರಾಗಿ ಕಾರ್ಯ ನಿರ್ವಹಿಸಿದ್ದರು. ಮೃತರು ಪತ್ನಿ, ಓರ್ವ ಪುತ್ರ, ಪುತ್ರಿ ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಬುಧವಾರ ಹುಟ್ಟೂರು ಬೂದಬಾಳು ಗ್ರಾಮದ ರುದ್ರಭೂಮಿಯಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ. ಶಾಸಕ ನಿರಂಜನ್ ಕುಮಾರ್, ಮಾಜಿ ಶಾಸಕಿ ಪರಿಮಳ ನಾಗಪ್ಪ, ವಿಧಾನಪರಿಷತ್ ಮಾಜಿ ಸದಸ್ಯ ಪ್ರೊ. ಆರ್.ಮಲ್ಲಿಕಾರ್ಜುನಪ್ಪ, ಜನಧ್ವನಿ ವೆಂಕಟೇಶ್ ಸೇರಿದಂತೆ ಇತರ ಮುಖಂಡರು ಅಂತಿಮ ದರ್ಶನ ಪಡೆದರು.

ಶ್ರೀನಿವಾಸ್



ಮೈಸೂರು, ಆ. 23– ಕಾಂಗ್ರೆಸ್ ಮುಖಂಡ ಶ್ರೀನಿವಾಸ್ ಶುಕ್ರವಾರ ನಿಧನರಾದರು. ಮೃತರು ಪತ್ನಿ, ಇಬ್ಬರು ಮಕ್ಕಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ನಾಳೆ (ಆ.24) ಕೆ.ಆರ್. ಮಿಲ್ ಕಾಲೋನಿಯ ರುದ್ರಭೂಮಿಯಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ದೇಶದಲ್ಲಿ ಹೆಣ್ಣು ಮಕ್ಕಳ ಮೇಲೆ ದೌರ್ಜನ್ಯ ಖಂಡಿಸಿ ಮಾಜಿ ಸೈನಿಕರು, ಸಂಘ–ಸಂಸ್ಥೆಗಳಿಂದ ವಾರ್ ಮೊಮೋರಿಯಲ್ ಮೈದಾನದಲ್ಲಿ ಪ್ರತಿಭಟನೆ



ಹೆಣ್ಣು ಮಕ್ಕಳ ಮೇಲಿನ ನಿರಂತರ ಲೈಂಗಿಕ ದೌರ್ಜನ್ಯವನ್ನು ಖಂಡಿಸಿ ಮೈಸೂರು ಸಶಸ್ತ್ರ ಪಡೆಗಳ ಮಾಜಿ ಸೈನಿಕರ ಸಂಘ ಹಾಗೂ ಮೈಸೂರಿನ ಇತರೆ ಸಂಘ–ಸಂಸ್ಥೆಗಳ ಪದಾಧಿಕಾರಿಗಳು ವಾರ್ ಮೊಮೊರಿಯಲ್ ಮೈದಾನದಲ್ಲಿ ಶುಕ್ರವಾರ ಪ್ರತಿಭಟನೆ ನಡೆಸಿದರು.

ಮೈಸೂರು, ಆ.23(ಎಸ್‌ಪಿಎನ್)– ಕೊಲ್ಕತ್ತಾ ವೈದ್ಯೆ ಸೇರಿದಂತೆ ದೇಶದ ಇತರೆಡೆ ಹೆಣ್ಣು ಮಕ್ಕಳ ಮೇಲಿನ ನಿರಂತರ ಲೈಂಗಿಕ ದೌರ್ಜನ್ಯವನ್ನು ಖಂಡಿಸಿ ಮೈಸೂರು ಸಶಸ್ತ್ರ ಪಡೆಗಳ ಮಾಜಿ ಸೈನಿಕರ ಸಂಘ ಹಾಗೂ ಮೈಸೂರಿನ ಇತರೆ ಸಂಘ–ಸಂಸ್ಥೆಗಳ ಪದಾಧಿಕಾರಿಗಳು ಹಳೇ ಡಿಸಿ ಕಚೇರಿ ಮುಂಭಾಗದಲ್ಲಿ ಹೊಸದಾಗಿ ನಿರ್ಮಾಣಗೊಳ್ಳುತ್ತಿರುವ ವಾರ್ ಮೊಮೊರಿಯಲ್ ಮೈದಾನದಲ್ಲಿ ಶುಕ್ರವಾರ ಪ್ರತಿಭಟನೆ ನಡೆಸಿದರು.

ಪ್ರತಿಭಟನೆಯ ನೇತೃತ್ವವನ್ನು ಮೈಸೂರು ಸಶಸ್ತ್ರ ಪಡೆಗಳ ಮಾಜಿ ಸೈನಿಕರ ಸಂಘದ ಅಧ್ಯಕ್ಷ ನಿವೃತ್ತ ಹವಾಲ್ದಾರ್ ಪಿ.ಕೆ.ಬಿದ್ದಪ್ಪ ವಹಿಸಿ, ಅತ್ಯಾಚಾರಿಗಳ ವಿರುದ್ಧ ಕಠಿಣ ಕ್ರಮಕ್ಕೆ ಆಗ್ರಹಿಸಿ ವಿವಿಧ ಫಲಕಗಳನ್ನು ಪ್ರದರ್ಶಿಸಿದರು. ನಂತರ ಮಾತನಾಡಿದ ಅವರು, ದೇಶದ ಯಾವುದೇ ಭಾಗದಲ್ಲಿ ವೈದ್ಯ ಸೇವೆಯಲ್ಲಿ ತೊಡಗಿರುವ ಹೆಣ್ಣು ಮಕ್ಕಳಿಗೆ ಪೊಲೀಸ್ ರಕ್ಷಣೆ ಒದಗಿಸಬೇಕು. ಇದಕ್ಕೆ ಕೇಂದ್ರ ಮತ್ತು ಆಯಾಯ ರಾಜ್ಯ ಸರ್ಕಾರಗಳು ಕ್ರಮವಹಿಸಬೇಕು ಎಂದು ಆಗ್ರಹಿಸಿದರು.

ಕೊಲ್ಕತ್ತಾದಲ್ಲಿ ಅತ್ಯಾಚಾರಕ್ಕೊಳಗಾಗಿ ಕೊಲೆಯಾದ ವೈದ್ಯೆ ಹಾಗೂ ಜಾರ್ಖಂಡ್‌ನ ಸರ್ಕಾರಿ ಬಸ್‌ನಲ್ಲಿ ಅಪ್ರಾಪ್ತೆ ಮೇಲೆ ನಡೆಸಿರುವ ಅತ್ಯಾಚಾರ, ಬೆಂಗಳೂರಿನಲ್ಲಿ ಆಟೋ ಚಾಲಕನೊಬ್ಬ ಮಹಿಳಾ ಉದ್ಯೋಗಿ ಮೇಲೆ ನಡೆಸಿರುವ ಅತ್ಯಾಚಾರ, ಮಹಾರಾಷ್ಟ್ರ ದಲ್ಲಿ ಅಪ್ರಾಪ್ತೆ ಮೇಲೆ ನಡೆದಿರುವ ಅತ್ಯಾಚಾರ ಪ್ರಕರಣಗಳನ್ನು ಖಂಡಿಸಿದರಲ್ಲದೆ, ಸಾರ್ವಜನಿಕವಾಗಿ ಹೆಣ್ಣು ಮಕ್ಕಳಿಗೆ ಭದ್ರತೆ ನೀಡುವ ವಿಚಾರ ಪೊಲೀಸ್ ಇಲಾಖೆ ಗಂಭೀರವಾಗಿ ಪರಿಗಣಿಸಬೇಕು ಎಂದು ಒತ್ತಾಯಿಸಿದರು.

ಉತ್ತರ ಭಾರತದಲ್ಲಿ ಸೈನಿಕನೊರ್ವನ ಮೇಲೆ ಪೊಲೀಸರು ದೌರ್ಜನ್ಯ ನಡೆಸಿರುವುದನ್ನು ಖಂಡಿಸಿರುವುದಲ್ಲದೆ, ಅತ್ಯಾಚಾರ ಪ್ರಕರಣದಲ್ಲಿ ಸಾವಿಗೀಡಾದ ಹೆಣ್ಣು ಮಕ್ಕಳ ಆತ್ಮಕ್ಕೆ ಶಾಂತಿ ಸಿಗಲಿ ಎಂದು ಮೊಂಬತ್ತಿ ಬೆಳಗಿ ಶ್ರದ್ಧಾಂಜಲಿ ಅರ್ಪಿಸಿದರು. ಪ್ರತಿಭಟನೆಯಲ್ಲಿ ಮೈಸೂರು ಸಶಸ್ತ್ರ ಪಡೆಗಳ ಮಾಜಿ ಸೈನಿಕರ ಸಂಘದ ಉಪಾಧ್ಯಕ್ಷ ನರಸೇಗೌಡ, ಕಾರ್ಯದರ್ಶಿ ಎಸ್.ಆರ್.ರವಿಕುಮಾರ್, ಜಂಟಿ ಕಾರ್ಯದರ್ಶಿ ಕೆ.ಎಸ್.ಸುರೇಶ್, ಖಜಾಂಚಿ ಬಿ.ಎಂ.ಗೋಪಾಲ್, ಮಿಲಿಟರಿ ವೆಟರನ್ಸ್ ವೆಲ್‌ಫೇರ್ ಅಸೋಸಿಯೇಷನ್‌ನ ಬ್ರಿಗೇಡಿಯರ್ ಅಡಪ್ಪ ಸ್ಕ್ವಾಡನ್ ಲೀಡರ್ ಕೆ.ಎಂ.ಶೆಣೈ, ನಿವೃತ್ತ ಸುಬೇದಾರ್ ಮೇಜರ್ ಕೆ.ಯು.ಭೀಮಯ್ಯ, ಹವಾಲ್ದಾರ್ ಬಸಪ್ಪ ಮೈಸೂರು ಉತ್ತರ ರೋಟರಿ ಸಮುದಾಯ ದಳ(ಇಲವಾಲ)ದ ರೋ.ನಾಗೇಶ್, ಪದಾಧಿಕಾರಿಗಳಾದ ಗೋವಿಂದಸ್ವಾಮಿ, ಸಂತೋಷ್‌ಕುಮಾರ್, ಶಿವಕುಮಾರ್, ಚಂದ್ರಕುಮಾರ್, ಭರತ್ ಗೌಡ, ಮೈಸೂರು ಬ್ಯೂಟಿಷಿಯನ್ ವೆಲ್‌ಫೇರ್ ಅಸೋಸಿಯೇಷನ್ ವೇದರಾಯ್, ಲಯನ್ಸ್ ಕ್ಲಬ್ ಆಫ್ ಮೈಸೂರು ಅಂಬಾಸಿಡರ್ಸ್ 517ಜಿ ಅಧ್ಯಕ್ಷ ಲಯನ್ ಶ್ರೀಧರ್, ಪ್ರಾಂತೀಯ ಅಧ್ಯಕ್ಷ ಲಯನ್ಸ್ ಕೆ.ಆರ್.ಭಾಸ್ಕರಾನಂದ, ಲಯನ್ಸ್ ಕೆ.ಎಂ.ಯಶೋಧರಮ್ಮ, ಮೈಸೂರು ಜನಪರ ವೇದಿಕೆಯ ಬೀರಿಹುಂಡಿ ಶ್ರೀನಿವಾಸ್ ಸೇರಿದಂತೆ ಇತರರಿದ್ದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

23.08.2024 ಶುಕ್ರವಾರ, ಮಳೆ ನಕ್ಷತ್ರ: ಮಖ 17.08.2024 ರಿಂದ 30.08.2024
ಕ್ರೋಧಿನಾಮ ಸಂವತ್ಸರ, ದಕ್ಷಿಣಾಯನ, ವರ್ಷ ಋತು, ಶ್ರಾವಣ ಮಾಸ, ಕೃಷ್ಣ ಪಕ್ಷ,
ತಿಥಿ: ಚೌತಿ, ನಕ್ಷತ್ರ: ರೇವತಿ, ರಾಹುಕಾಲ : ಬೆಳಗ್ಗೆ 10.30 ರಿಂದ 12 ರವರೆಗೆ

■ **ಶ್ರೀ ಶನೇಶ್ವರಸ್ವಾಮಿ ಭಕ್ತ ಮಂಡಲಿ :** 15ನೇ ವರ್ಷದ ಶ್ರೀ ಶನೇಶ್ವರಸ್ವಾಮಿಯ ಶ್ರಾವಣ ಮಾಸದ ಆರಾಧನಾ ಮಹೋತ್ಸವ, ಬೆಳಗ್ಗೆ 4.30 ರಿಂದ ಶ್ರೀ ಸ್ವಾಮಿಗೆ ಪಂಚಾಮೃತಾಭಿಷೇಕ, ತಿಲಕಾಭಿಷೇಕ, ಫಲಪಂಚಾಮೃತಾಭಿಷೇಕ, ನವಗ್ರಹ ಸಹಿತ ಶ್ರೀ ಶನೇಶ್ವರ ಹಾಗೂ ಪರಿವಾರ ದೇವತೆಗಳ ಹೋಮ ಹವನ, ಪೂರ್ಣಾಹುತಿ, ಮಹಾಮಂಗಳಾರತಿ, ತೀರ್ಥ ಪ್ರಸಾದ ವಿನಿಯೋಗ, ಮಧ್ಯಾಹ್ನ 1ಕ್ಕೆ ಅನ್ನಸಂತರ್ಪಣೆ, ರಾತ್ರಿ 9ಕ್ಕೆ ಶನಿಪ್ರಭಾವ ಅಥವಾ ರಾಜಾವಿಕ್ರಮ ಹರಿಕಥೆ, ಸ್ಥಳ: ಸಜ್ಜೆಹುಂಡಿ, ವರುಣಾ ಹೋಬಳಿ.

■ **ವೀರಭದ್ರಸ್ವಾಮಿ ಹಾಗೂ ಚಾಮರಾಜೇಶ್ವರ ಸ್ವಾಮಿ ದೇವಸ್ಥಾನ:** ಶ್ರೀ ವೀರಭದ್ರೇಶ್ವರಸ್ವಾಮಿಯ ಜಯಂತ್ಯುತ್ಸವ, ಮಹಾರಥೋತ್ಸವ ಹಾಗೂ ಶ್ರಾವಣ ಮಾಸದ ಪೂಜಾ ಕಾರ್ಯಕ್ರಮ, ಸ್ಥಳ: ದೇವಸ್ಥಾನದ ಪ್ರಾಂಗಣ, ಡಿ.ಬನುಮಯ್ಯ ರಸ್ತೆ, ಕೆ.ಆರ್.ಮೊಹಲ್ಲಾ, ಬೆಳಗ್ಗೆಯಿಂದ.

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ:** ಹೈಪೋಥೈರಾಯ್ಡಿಸಮ್ ಚಿಕಿತ್ಸಾ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ಲಲಿತಾದ್ರಿಪುರ ರಸ್ತೆ, ಬೆಳಗ್ಗೆ 9 ರಿಂದ.

■ **ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮ :** ಶ್ರೀ ದತ್ತ ವಿಜಯಾನಂದ ತೀರ್ಥ ಸ್ವಾಮೀಜಿಯವರ 21ನೇ ಚಾತುರ್ಮಾಸ್ಯ ವ್ರತದೀಕ್ಷಾ ಮಹೋತ್ಸವ, ಶ್ರಾವಣ ಶನಿವಾರ ಪ್ರಯುಕ್ತ ಶ್ರೀ ದತ್ತ ವೆಂಕಟೇಶ್ವರ ಸ್ವಾಮಿಗೆ ವಿಶೇಷ ಅರ್ಚನೆ, ಶ್ರೀ ಭೂ ಸಮೇತ ಶ್ರೀ ದತ್ತ ವೆಂಕಟರಮಣಸ್ವಾಮಿಯವರ ದಿವ್ಯ ಕಲ್ಯಾಣ, ಸ್ಥಳ: ಆಶ್ರಮದ ಸಭಾಂಗಣ, ನಂಜನಗೂಡು ರಸ್ತೆ.

■ **ಬೋಧಿ ವೃಕ್ಷ ಸೊಸೈಟಿ ಫಾರ್ ಡೆವಲಪ್‌ಮೆಂಟ್, ಕರ್ನಾಟಕ ಜಾನಪದ ಅಕಾಡೆಮಿ, ಸಮಾಜ ಕಾರ್ಯ ವಿಭಾಗ, ಮೈಸೂರು ವಿವಿ, ಆಕಾಶವಾಣಿ, ಮೈಸೂರು ಎಫ್‌ಎಂ 100.6:** ಪರಂಜ್ಯೋತಿ ಮಂಟೇಸ್ವಾಮಿ ಒಂದು ಮರುದರ್ಶನ ಕುರಿತು ರಾಷ್ಟ್ರೀಯ ವಿಚಾರ ಸಂಕಿರಣ, ಸಾನ್ನಿಧ್ಯ : ಶ್ರೀಮಂಟೇ ಸ್ವಾಮಿ ಮಠದ ಮಠಾಧಿಪತಿ ಶ್ರೀ ಎಂ.ಎಲ್.ವರ್ಚಸ್ವೀ ಶ್ರೀಕಂಠ ಸಿದ್ದಲಿಂಗರಾಜೇ ಅರಸ್, ಕೊಡೇಕಲ್ಲು ಬಸವ ಪೀಠಾಧಿಪತಿ ವೃಷಭೇಂದ್ರ ಅಪ್ಪನವರು, ಉದ್ಘಾಟನೆ: ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ, ಪುಸ್ತಕ ಬಿಡುಗಡೆ: ವಿಧಾನ ಪರಿಷತ್ ಸದಸ್ಯ ಯತೀಂದ್ರ ಸಿದ್ದರಾಮಯ್ಯ, ಮುಖ್ಯ ಅತಿಥಿಗಳು : ಕರ್ನಾಟಕ ಜಾನಪದ ಅಕಾಡೆಮಿ ಅಧ್ಯಕ್ಷ ಗೊಲ್ಲಹಳ್ಳಿ ಶಿವಪ್ರಸಾದ್, ಆಕಾಶವಾಣಿ ನಿಲಯದ ಮುಖ್ಯಸ್ಥ ಎಸ್.ಎಸ್. ಉಮೇಶ್, ಸಂಸ್ಕೃತಿ ಚಿಂತಕ ಡಾ. ಬಂಜಗೆರೆ ಜಯಪ್ರಕಾಶ್, ಅಹಿಂದ ಜವರಪ್ಪ, ಡಾ. ಚಂದ್ರಮೌಳಿ, ಅಧ್ಯಕ್ಷತೆ : ನಾಟಕಕಾರ ಪ್ರೊ. ಎಚ್.ಎಸ್. ಶಿವಪ್ರಕಾಶ್, ಉಪಸ್ಥಿತರು : ಬೋಧಿ ಪ್ರಕಾಶನ ಅಧ್ಯಕ್ಷ ಮೈಸೂರ್ ಸತೀಶ್‌ಚಂದ್ರ, ಡಾ. ಶಂಕನಪುರ ಮಹಾದೇವ, ಡಾ. ಉಮೇಶ್ ಮೈಸೂರು, ಡಾ. ಮೈಸೂರು ಗುರುರಾಜ್, ಸ್ಥಳ: ವಿಜ್ಞಾನ ಭವನ ಸಭಾಂಗಣ, ಮಾನಸಗಂಗೋತ್ರಿ, ಬೆಳಗ್ಗೆ 9.30ಕ್ಕೆ.

■ **ಮೈಸೂರು ಜಿಲ್ಲಾ ಪತ್ರಕರ್ತರ ಸಂಘ :** ಪತ್ರಕರ್ತರ ಕ್ರೀಡಾಕೂಟ, ಉದ್ಘಾಟನೆ : ಶಾಸಕ ಅನಿಲ್ ಚಿಕ್ಕಮಾದು, ಕ್ರೀಡಾಕೂಟಕ್ಕೆ ಚಾಲನೆ : ಅಂತಾರಾಷ್ಟ್ರೀಯ ಈಜುಪಟು ಎಸ್. ತಾನ್ಯಾ, ಅಧ್ಯಕ್ಷತೆ : ಸಂಘದ ಅಧ್ಯಕ್ಷ ಕೆ. ದೀಪಕ್, ಮುಖ್ಯ ಅತಿಥಿಗಳು : ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ವಿಷ್ಣುವರ್ಧನ್, ದೈಹಿಕ ಶಿಕ್ಷಣ ವಿಭಾಗದ ಮುಖ್ಯಸ್ಥ ಡಾ.ಸಿ. ವೆಂಕಟೇಶ್, ರೋಹಿತ್ ಎಂ. ಪಾಟೀಲ್, ಎ.ಪಿ. ನಾಗೇಶ್, ರಾಜ್ಯ ಹೋಟೆಲ್ ಮಾಲೀಕರ ಸಂಘದ ಉಪಾಧ್ಯಕ್ಷ ರವಿಶಾಸ್ತ್ರಿ, ರಾಜು ಕಾರ್ಯ, ಸ್ಥಳ: ಓವಲ್ ಮೈದಾನ, ಕ್ರಾಫರ್ಡ್ ಹಾಲ್ ಎದುರು, ಬೆಳಗ್ಗೆ 9.30ಕ್ಕೆ.

■ **ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮ, ಸಿ.ಹೆಚ್. ವಿಜಯಶಂಕರ್ ಅಭಿನಂದನಾ ಸಮಿತಿ :** ಮೇಘಾಲಯ ರಾಜ್ಯಪಾಲ ಸಿ.ಹೆಚ್.ವಿಜಯಶಂಕರ್ ಅವರಿಗೆ ನಾಗರಿಕ ಸನ್ಮಾನ ಸಮಾರಂಭ, ಸಾನ್ನಿಧ್ಯ: ಶ್ರೀ ದತ್ತ ವಿಜಯಾನಂದ ತೀರ್ಥ ಸ್ವಾಮೀಜಿ, ಅಧ್ಯಕ್ಷತೆ: ಕಾದಂಬರಿಕಾರ ಡಾ.ಎಸ್.ಎಲ್.ಭೈರಪ್ಪ, ಅಭಿನಂದನಾ ಭಾಷಣ: ಮಾಜಿ ಶಾಸಕ ವೈ.ಎಸ್.ವಿ.ದತ್ತ, ಮುಖ್ಯ ಅತಿಥಿಗಳು: ಶಾಸಕರಾದ ತನ್ವೀರ್ ಸೇಠ್, ಟಿ.ಎಸ್. ಶ್ರೀವತ್ಸ, ಮಾಜಿ ಶಾಸಕ ಈ. ಮಾರುತಿರಾವ್ ಪವಾರ್, ಸ್ಥಳ: ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮ, ಬೆಳಗ್ಗೆ 10ಕ್ಕೆ.

■ **ಕರ್ನಾಟಕ ರಾಜ್ಯ ಡಾ. ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯ, ಕರ್ನಾಟಕ ನಾಟಕ ಅಕಾಡೆಮಿ :** ಸುವರ್ಣ ಕರ್ನಾಟಕ : ನಾಟಕ–50, ರಾಷ್ಟ್ರೀಯ ವಿಚಾರ ಸಂಕಿರಣ, ಉದ್ಘಾಟನೆ : ಜಿಲ್ಲಾ ಉಸ್ತುವಾರಿ ಸಚಿವ ಡಾ. ಹೆಚ್.ಸಿ. ಮಹದೇವಪ್ಪ, ಮುಖ್ಯ ಅತಿಥಿಗಳು : ಹಿರಿಯ ನಟಿ ಶ್ರೀಮತಿ ಉಮಾಶ್ರೀ, ಉಪಸ್ಥಿತರು : ಸಂಗೀತ ವಿವಿ ಕುಲಪತಿ ಡಾ. ನಾಗೇಶ್ ವಿ. ಬೆಟ್ಟಕೋಟೆ, ಅಧ್ಯಕ್ಷತೆ : ಕರ್ನಾಟಕ ನಾಟಕ ಅಕಾಡೆಮಿ ಅಧ್ಯಕ್ಷ ಕೆ.ವಿ. ನಾಗರಾಜಮೂರ್ತಿ, ಸ್ಥಳ: ಸಂಗೀತ ವಿವಿ ಸಭಾಂಗಣ, ಬೆಳಗ್ಗೆ 10ಕ್ಕೆ

■ **ರೋಟರಿ ಕ್ಲಬ್ ಆಫ್ ಮೈಸೂರು ಸೌತ್ ಈಸ್ಟ್ :** ರೋಟರಿ ಜಿಲ್ಲಾ ಇಂಟರ್‍ಯಾಕ್ಟ್ ಸಭೆ, ಉದ್ಘಾಟನೆ : ರೋ. ವಿಕ್ರಮ್ ದತ್ತ, ಸ್ಥಳ: ಮೈಸೂರು ಸ್ಕೌಟ್ಸ್ ಅಂಡ್ ಗೈಡ್ಸ್ ಸಭಾಂಗಣ, ಬೆಳಗ್ಗೆ 10ಕ್ಕೆ.

■ **ವಿಶ್ವಪ್ರಜ್ಞ ವಿದ್ಯಾಸಂಸ್ಥೆಗಳು :** ಸಂಸ್ಕೃತೋತ್ಸವ ಕಾರ್ಯಕ್ರಮ, ಉದ್ಘಾಟನೆ : ವಿಪಿಇಐ ಕಾರ್ಯಾಧ್ಯಕ್ಷ ಎಂ.ಎನ್. ಕೃಷ್ಣಸ್ವಾಮಿ, ಮುಖ್ಯ ಅತಿಥಿಗಳು : ಸಂಸ್ಕೃತ ವಿದ್ವಾನ್ ಡಾ. ಹೆಚ್.ವಿ. ನಾಗರಾಜರಾವ್, ಪ್ರಸ್ತಾವನೆ : ಶ್ರೀ ವೆಂಕಟರಮಣ ಹೆಗಡೆ, ಅಧ್ಯಕ್ಷತೆ : ಶ್ರೀ ಗಣೇಶ ಸಂಸ್ಕೃತಿ ಜ್ಯೋತಿಷ ಪಾಠಶಾಲಾ ಕಾರ್ಯದರ್ಶಿ ಎಲ್.ಎನ್. ಹೆಗಡೆ, ಸ್ಥಳ: ವಿಶ್ವಪ್ರಜ್ಞ ವಿದ್ಯಾಸಂಸ್ಥೆ ಆವರಣ, ಬೆಳಗ್ಗೆ 10ಕ್ಕೆ.

■ **ಸಪ್ತರ್ಷಿ ಸೌಹಾರ್ದ ಪತ್ತಿನ ಸಹಕಾರ ಸಂಘ ನಿಯಮಿತ :** ರಜತ ಮಹೋತ್ಸವ ಸಮಾರಂಭ, ಉದ್ಘಾಟನೆ : ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ, ಶ್ರೀ ದತ್ತ ವಿಜಯಾನಂದ ತೀರ್ಥ ಸ್ವಾಮೀಜಿ, ಅಧ್ಯಕ್ಷತೆ : ಸಂಘದ ಅಧ್ಯಕ್ಷ ಎಂ.ಎಸ್. ಚಂದ್ರಶೇಖರ್, ಸಪ್ತರ್ಷಿ ಸವಿ ಸಂಚಿಕೆ ಬಿಡುಗಡೆ : ಸಂಸದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್, ಉಪಸ್ಥಿತರು : ಶಾಸಕ ಜಿ.ಟಿ. ದೇವೇಗೌಡ, ಜಿ. ನಂಜನಗೌಡ, ಶಾಸಕ ಟಿ.ಎಸ್. ಶ್ರೀವತ್ಸ, ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ. ರಾಜೀವ್, ಸ್ಥಳ: ಶಾರದಾ ವಿಲಾಸ ಶತಮಾನೋತ್ಸವ ಸಭಾಂಗಣ, ಕೃಷ್ಣಮೂರ್ತಿಪುರಂ, ಬೆಳಗ್ಗೆ 10.15ಕ್ಕೆ.

■ **ಶರಣ ಸಾಹಿತ್ಯ ಪರಿಷತ್ತು, ಮೈಸೂರು ನಗರ ಘಟಕ :** ರಸಪ್ರಶ್ನೆ ಹಾಗೂ ಉಪನ್ಯಾಸ, ಉದ್ಘಾಟನೆ : ಸಾಹಿತಿ ಪ್ರೊ. ಎಸ್.ಪಿ. ಉಮಾದೇವಿ, ಉಪಸ್ಥಿತರು : ಜೆಎಸ್‌ಎಸ್ ಪಬ್ಲಿಕ್ ಶಾಲೆ ಪ್ರಾಂಶುಪಾಲರಾದ ಶ್ರೀಮತಿ ಎಂ. ಆಶಾ, ಅಧ್ಯಕ್ಷತೆ : ಶರಣ ಸಾಹಿತ್ಯ ಪರಿಷತ್ತು ಅಧ್ಯಕ್ಷ ಮ.ಗು. ಸದಾನಂದಯ್ಯ, ಸ್ಥಳ: ಜೆಎಸ್‌ಎಸ್ ಪಬ್ಲಿಕ್ ಶಾಲೆ, ಸರಸ್ವತಿಪುರಂ, ಬೆಳಗ್ಗೆ 10.30ಕ್ಕೆ

■ **ಡಾ. ಬಿ.ಆರ್. ಅಂಬೇಡ್ಕರ್ ಸಂಶೋಧನಾ ಮತ್ತು ವಿಸ್ತರಣಾ ಕೇಂದ್ರ :** ಮೀಸಲಾತಿ ಮತ್ತು ವರ್ಗೀಕರಣ ಕುರಿತ ಕಾರ್ಯಾಗಾರ, ಉದ್ಘಾಟನೆ: ಪ್ರೊ. ರವಿವರ್ಮ ಕುಮಾರ್, ಅಧ್ಯಕ್ಷತೆ: ನ್ಯಾಷನಲ್ ಲಾ ಸ್ಕೂಲ್ ವಿಶ್ರಾಂತ ಕುಲಪತಿ ಪ್ರೊ. ಜಿ. ಮೋಹನ್ ಗೋಪಾಲ್, ಸ್ಥಳ: ವಿಶ್ವಜ್ಞಾನಿ ಸಭಾಂಗಣ, ಮಾನಸಗಂಗೋತ್ರಿ, ಬೆಳಗ್ಗೆ 10.30ಕ್ಕೆ.

■ **ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು :** ಬೆಳವಡಿ ಮಲ್ಲಮ್ಮ ಪ್ರಶಸ್ತಿ ಪ್ರದಾನ ಸಮಾರಂಭ, ಸಾನ್ನಿಧ್ಯ : ಸಾಲಿಗ್ರಾಮ ಸ್ವಾಮೀಜಿ, ಉದ್ಘಾಟನೆ: ಕವಿ ಜಯಪ್ಪ ಹೊನ್ನಾಳಿ, ಅಧ್ಯಕ್ಷತೆ: ಕಸಾಪ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಉಪಸ್ಥಿತರು: ಬನ್ನೂರು ಕೆ.ರಾಜು, ಅಂಬಳೆ ಶಿವಣ್ಣ, ಟಿ.ಸುರೇಶ್, ಸ್ಥಳ: ನಮನ ಕಲಾಮಂಟಪ, ಬೆಳಗ್ಗೆ 11ಕ್ಕೆ

■ **ಕೆ. ಪುಟ್ಟಸ್ವಾಮಿ ಪ್ರಥಮ ದರ್ಜೆ ಕಾಲೇಜು :** ಪಠ್ಯೇತರ ಚಟುವಟಿಕೆಗಳ ಉದ್ಘಾಟನಾ ಸಮಾರಂಭ, ಉದ್ಘಾಟನೆ : ಕೈಗಾರಿಕೋದ್ಯಮಿ ಹೆಚ್.ಆರ್. ಕೇಶವ್, ಅಧ್ಯಕ್ಷತೆ : ವಿದ್ಯಾವರ್ಧಕ ಸಂಘದ ಅಧ್ಯಕ್ಷ ಗುಂಡಪ್ಪಗೌಡ, ಮುಖ್ಯ ಅತಿಥಿಗಳು: ಪಿ.ವಿಶ್ವನಾಥ್, ಶ್ರೀ ಶೈಲರಾಮಣ್ಣವರ್, ಪ್ರಿನ್ಸಿಪಾಲ್ ಡಾ. ಎಂ. ಶಿವಲಿಂಗೇಗೌಡ, ಸ್ಥಳ: ಸೆಮಿನಾರ್ ಹಾಲ್, ಕಾಲೇಜು ಆವರಣ, ಬೆಳಗ್ಗೆ 11.30ಕ್ಕೆ.

■ **ಅಥರ್ವ ಲೈಫ್ ಸ್ಕಿಲ್ ಫೌಂಡೇಷನ್ :** ಸ್ವಾತಂತ್ರ್ಯ ದಿನಾಚರಣೆ ಅಂಗವಾಗಿ ಮಕ್ಕಳಿಗೆ ಚಿತ್ರಕಲಾ ಸ್ಪರ್ಧೆ, ಮುಖ್ಯ ಅತಿಥಿಗಳು : ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ನಾರಾಯಣಗೌಡ, ಡಾ. ಎಸ್.ಪಿ. ಯೋಗಣ್ಣ, ನಗರ ಮತ್ತು ಜಿಲ್ಲಾ ಬ್ರಾಹ್ಮಣ ಸಂಘದ ಅಧ್ಯಕ್ಷ ಡಿ.ಟಿ.ಪ್ರಕಾಶ್, ಜೀವಧಾರ ರಕ್ತನಿಧಿ ಕೇಂದ್ರದ ನಿರ್ದೇಶಕ ಗಿರೀಶ್, ಸ್ಥಳ: ಕುವೆಂಪುನಗರದ ಕಚೇರಿ, ಆದಿಚುಂಚನಗಿರಿ ರಸ್ತೆ, ಮಧ್ಯಾಹ್ನ 3ಕ್ಕೆ

■ **ಕರ್ನಾಟಕ ಜಾನಪದ ಅಕಾಡೆಮಿ, ಬೆಂಗಳೂರು, ಪ್ರಾದೇಶಿಕ ಜಾನಪದ ಅಧ್ಯಯನ ಮತ್ತು ಜನಪದ ಕಲಿಕಾ ಕೇಂದ್ರ, ಕರ್ನಾಟಕ ಜಾನಪದ ವಿಶ್ವವಿದ್ಯಾನಿಲಯ, ಏಕತಾರಿ ಸಾಂಸ್ಕೃತಿಕ ಸಂಘಟನೆ :** ಶಾಲಾ ಮತ್ತು ಕಾಲೇಜು ವಿದ್ಯಾರ್ಥಿಗಳಿಗೆ ಜನಪದ ನೃತ್ಯಗಳು ಮತ್ತು ಜನಪದ ಗೀತೆಗಳ ಕಲಿಕಾ ತರಬೇತಿ ಶಿಬಿರ, ಸ್ಥಳ: ಕಿರು ರಂಗಮಂದಿರ ಆವರಣ, ಕಲಾಮಂದಿರ, ಸಂಜೆ 4 ರಿಂದ.

■ **ಜೆಎಸ್‌ಎಸ್ ಮಹಾವಿದ್ಯಾಪೀಠ :** ಸುವರ್ಣ ಮಹೋತ್ಸವ ವಿಶೇಷ ಉಪನ್ಯಾಸ, ವಿಶೇಷ ಉಪನ್ಯಾಸ ಮಾಲೆಯ ಕೃತಿಗಳ ಲೋಕಾರ್ಪಣೆ, ಸಾನ್ನಿಧ್ಯ: ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ವಿಶೇಷ ಉಪನ್ಯಾಸ: ಸದ್ಗುರು ಶ್ರೀ ಮಧುಸೂದನ ಸಾಯಿ, ಅಧ್ಯಕ್ಷತೆ : ಪ್ರಾದೇಶಿಕ ಆಯುಕ್ತ ಡಿ.ಎಸ್. ರಮೇಶ್, ಕೃತಿಗಳ ಲೋಕಾರ್ಪಣೆ: ವಿಶ್ರಾಂತ ಕುಲಪತಿ ಪ್ರೊ. ಜೆ. ಶಶಿಧರ ಪ್ರಸಾದ್, ಸ್ಥಳ: ಶ್ರೀ ರಾಜೇಂದ್ರ ಶತಮಾನೋತ್ಸವ ಸಭಾಂಗಣ, ಜೆಎಸ್‌ಎಸ್ ಆಸ್ಪತ್ರೆ, ಸಂಜೆ 4ಕ್ಕೆ.

■ **ಮೈಸೂರು ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆ :** ಮೇಘಾಲಯದ ನೂತನ ರಾಜ್ಯಪಾಲ ಸಿ.ಹೆಚ್. ವಿಜಯಶಂಕರ್ ಅವರಿಗೆ ಗೌರವ ಸಮರ್ಪಣಾ ಸಮಾರಂಭ, ಮುಖ್ಯ ಅತಿಥಿಗಳು : ಸಂಸದ ಕೋಟಾ ಶ್ರೀನಿವಾಸ ಪೂಜಾರಿ, ಮಾಜಿ ಸಚಿವ ಸಾ.ರಾ. ಮಹೇಶ್, ಅಭಿನಂದನಾ ಭಾಷಣ : ಕರ್ನಾಟಕ ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆಗಳ ಒಕ್ಕೂಟದ ಮಾಜಿ ಅಧ್ಯಕ್ಷ ಸುಧಾಕರ್ ಎಸ್. ಶೆಟ್ಟಿ, ಅಧ್ಯಕ್ಷತೆ : ಮೈಸೂರು ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆ ಅಧ್ಯಕ್ಷ ಕೆ.ಬಿ. ಲಿಂಗರಾಜು, ಉಪಸ್ಥಿತರು : ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ಸಿ. ನಾರಾಯಣಗೌಡ, ದಿ ಮೈಸೂರು ಮರ್ಚೆಂಟ್ ಕೋಆಪರೇಟಿವ್ ಬ್ಯಾಂಕ್ ಅಧ್ಯಕ್ಷ ಆರ್. ಆನಂದ್, ಹೋಟೆಲ್ ಮಾಲೀಕರ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ನಾರಾಯಣ ವಿ. ಹೆಗಡೆ, ದಕ್ಷಿಣ ಕನ್ನಡ ಮತ್ತು ಕರಾವಳಿ ಜಿಲ್ಲಾ ಸಂಘಗಳ ಒಕ್ಕೂಟದ ಅಧ್ಯಕ್ಷ ಗ್ರೇಷಿಯನ್ ರೋಡ್ರಿಗಸ್, ಶಾಸಗಿ ಶಾಲೆಗಳ ಸಂಘ, ಮೈಸೂರು ವಿಭಾಗದ ಅಧ್ಯಕ್ಷ ವೆಂಕಟೇಶ್, ಸ್ಥಳ: ಚೇತನ ಸಭಾಂಗಣ, ಜ್ಞಾನ ಸರೋವರ ಅಂತಾರಾಷ್ಟ್ರೀಯ ವಸತಿ ಶಾಲೆ, ಸಂಜೆ 5ಕ್ಕೆ.

■ **ಸ್ಕಾಲರ್ಸ್ ಎಜುಕೇಷನಲ್ ಅಂಡ್ ಕಲ್ಚರಲ್ ಟ್ರಸ್ಟ್ :** ಗಾಯಕ ಆರ್. ಕೃಷ್ಣಮೂರ್ತಿ (ಡಬಲ್ ವಾಯ್ಸ್) ಅವರ ಸಾರಥ್ಯದಲ್ಲಿ ಮಧುರ ಗಾನ ಕಾರ್ಯಕ್ರಮ, ಸ್ಥಳ: ನಾದಬ್ರಹ್ಮ ಸಂಗೀತ ಸಭಾಂಗಣ, ಜೆಎಲ್‌ಬಿ ರಸ್ತೆ, ಸಂಜೆ 5ಕ್ಕೆ.

■ **ಬಸವ ಭಾರತ ಪ್ರತಿಷ್ಠಾನ, ಸಮಸ್ತ ಬಸವಪರ ಸಂಘಟನೆಗಳ ಸಹಭಾಗಿತ್ವ :** ಬಸವ ಧರ್ಮ ಜಾಗೃತಿ, ಅಭಿಯಾನ, ಇಷ್ಟಲಿಂಗ ಧಾರಣೆ ಶಿವಯೋಗ, ವಚನ ಪಠಣ, ಶ್ರಾವಣ ಮಾಸದ ಪ್ರವಚನ ಕಾರ್ಯಕ್ರಮ, ವಿಶ್ವ ಬಸವ ಸೇನೆ ಸಂಸ್ಥಾಪಕ ಅಧ್ಯಕ್ಷ ಬಸವ ಯೋಗೇಶ್ ಅವರಿಂದ ಬಸವತತ್ವ ಅನುಷ್ಠಾನದಲ್ಲಿ ಯುವಕರ ಪಾತ್ರ ಕುರಿತು ಉಪನ್ಯಾಸ, ಸ್ಥಳ: ಚಿಕ್ಕವೀರ ದೇಶಿಕೇಂದ್ರಸ್ವಾಮಿ, ಉಚಿತ ವಿದ್ಯಾರ್ಥಿ ನಿಲಯ, ಸಂಜೆ 5.30ಕ್ಕೆ

■ **ಶರಣ ಸಾಹಿತ್ಯ ಪರಿಷತ್ತು (ಮೈಸೂರು ನಗರ ಘಟಕ) ಕದಳಿ ಮಹಿಳಾ ವೇದಿಕೆ :** ವಚನ–ಶ್ರಾವಣ, ಮನೆ ಮನೆಗೆ ಶ್ರಾವಣ ಮಾಸದ ಶರಣ ಸಂದೇಶ, ಸಹ ಪ್ರಾಧ್ಯಾಪಕ ಡಾ.ಎಚ್.ಬಿ. ಬೆಟ್ಟಸ್ವಾಮಿ ಅವರಿಂದ ಪೈರಿಗೆ ನೀರು ಬೇಕೆಂಬಲ್ಲಿ ಉಚಿತವರಿದು ಬಿಡಬೇಕು – ಒಕ್ಕಲಿಗ ಮುದ್ದಣ್ಣ ಕುರಿತು ಉಪನ್ಯಾಸ, ಸ್ಥಳ: ಶ್ರೀಮತಿ ಸುದರ್ಶಿನಿ ಚಂದ್ರಪ್ಪ, ರಂಗರಾವ್ ಕಾಲೋನಿ, ರಾಮಕೃಷ್ಣನಗರ, ಸಂಜೆ 5.30ಕ್ಕೆ.

■ **ಶ್ರೀರಾಮಕೃಷ್ಣ ಆಶ್ರಮ :** ಸ್ವಾಮಿ ಇಷ್ಟನಾಥಾನಂದ ಅವರಿಂದ ಆತ್ಮಬೋಧ ಕುರಿತು ಉಪನ್ಯಾಸ, ಸ್ಥಳ: ಸ್ವಾಮಿ ಶಾಂಭವಾನಂದಜಿ ಸ್ಮಾರಕ ಸಭಾಂಗಣ, ಸಂಜೆ 6 ರಿಂದ.

■ **ಶ್ರೀ ಸುತ್ತೂರು ಮಠ, ಮೈಸೂರು ಶಾಖೆ :** ಶ್ರಾವಣಮಾಸ ಪೂಜಾನುಷ್ಠಾನ ಮತ್ತು ಪ್ರವಚನ, ಮಹಾರಾಣಿ ಕಲಾ ಕಾಲೇಜು ಪ್ರಾಂಶುಪಾಲ ಡಾ.ಬಿ.ವಿ. ವಸಂತಕುಮಾರ್ ಅವರಿಂದ ಪ್ರವಚನ, ವಿದುಷಿ ವಸಂತ ವೆಂಕಟೇಶ್ ಅವರಿಂದ ವಾಚನ, ಸಂಜೆ 6ಕ್ಕೆ ಸಾಮೂಹಿಕ ಪ್ರಾರ್ಥನೆ, ಸಂಜೆ 6.30ಕ್ಕೆ ಪ್ರವಚನ, ಸ್ಥಳ: ಶ್ರೀ ಸುತ್ತೂರು ಮಠ, ಚಾಮುಂಡಿಬೆಟ್ಟದ ತಪ್ಪಲು, ಸಂಜೆ 6.30 ರಿಂದ.

■ **ಶ್ರೀ ರಾಮಾಭ್ಯುದಯ ಸಭಾ ಚಾರಿಟಬಲ್ ಟ್ರಸ್ಟ್ :** ವಿದ್ವಾನ್ ಗುರುಪ್ರಸಾದ್ ಮತ್ತು ತಂಡದವರಿಂದ ಕರ್ನಾಟಕ ಶೈಲಿ ಸ್ಯಾಕ್ಸೋಫೋನ್ ವಾದನ, ಸ್ಥಳ: ಶ್ರೀರಾಮಮಂದಿರದ ಆವರಣ, ಶಿವರಾಂಪೇಟೆ, ಸಂಜೆ 6.30ಕ್ಕೆ

■ **ಯಕ್ಷರಂಗ, ಕದಂಬ ರಂಗ ವೇದಿಕೆ :** ಏಳು ಸಮುದ್ರಚಾಚೆ (ಮೂಡಲಪಾಯ ಯಕ್ಷಗಾನ ಆಟ), ಉದ್ಘಾಟನೆ : ರಂಗಾಯಣ ನಿರ್ದೇಶಕ ಸತೀಶ್ ತಿಪಟೂರು, ಮುಖ್ಯ ಅತಿಥಿಗಳು : ಡಾ. ಚಂದ್ರ ಕಾಳೇನಹಳ್ಳಿ, ಡಾ. ಹೆಚ್.ಆರ್. ಚೇತನ, ಕದಂಬ ರಂಗ ವೇದಿಕೆ ಅಧ್ಯಕ್ಷ ಡಾ. ರಾಜಶೇಖರ ಕದಂಬ, ರಂಗ ಪಣತ ಅಧ್ಯಕ್ಷ ಯು.ಎಸ್. ರಾಮಣ್ಣ, ಯಕ್ಷರಂಗದ ಡಿ. ತಿಪ್ಪಣ್ಣ, ಸ್ಥಳ: ಕಿರು ರಂಗಮಂದಿರ, ಕಲಾಮಂದಿರ ಆವರಣ, ಸಂಜೆ 6.30ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 CFTRI ಶೋಧ – ಅನುಶೋಧ– ಪ್ರಾಯೋಜಿತ ಬಾನುಲಿ ಸರಣಿ, ಪ್ರಾಯೋಜಕರು : CSIR, CFTRI, Mysuru, 6.40 ಅರಿವಿನ ಶಿಖರ : ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, 6.50 ರೈತರಿಗೆ ಸಲಹೆ, 7.15 ಭಾವಗೀತೆಗಳು, 8.30'ಹಾದಿಯಲ್ಲಿ ಕಂಡ ಮುಖ' ಬಾನುಲಿ ಸರಣಿ, ಪ್ರಸ್ತುತಿ : ಅಬ್ದುಲ್ ರಶೀದ್, 9.00 ರಾಷ್ಟ್ರೀಯ ಬಾಹ್ಯಾಕಾಶ ದಿನದ ಸಂದರ್ಭದಲ್ಲಿ ವಿಶೇಷ ಕಾರ್ಯಕ್ರಮ ಸರಣಿ 'ಬಾಹ್ಯಾಕಾಶ ವಿಸ್ಮಯ', 10.00 ಕರ್ನಾಟಕ ಶಾಸ್ತ್ರೀಯ ಸಂಗೀತ : ಮಾಂಬಲಂ ಎಂ. ಕೆ. ಶಿವ ಮತ್ತು ತಂಡ – ನಾಗಸ್ವರ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ 'ನಮ್ಮೂರ್ ಹೆಸರು', ಪ್ರಸ್ತುತಿ : ಡಾ. ಮೈಸೂರು ಉಮೇಶ್

ಮಧ್ಯಾಹ್ನ : 12.00 ಆಯುಷ್ಯವಾಣಿ–ಪ್ರಾಯೋಜಿತ ಕಾರ್ಯಕ್ರಮ, ಪ್ರಾಯೋಜಕರು : ಆಯುಷ್ ಇಲಾಖೆ, ಕರ್ನಾಟಕ ಸರ್ಕಾರ, 12.30 ದೇವರನಾಮ–ಲಕ್ಷ್ಮೀ. ಹೆಚ್.ಎಂ, 12.45 ಜನಪದ ಸಂಗೀತ, 1.20 ಭಾವಗೀತೆಗಳು – ವೃಂದಗಾನ, 3.00 ಹಳ್ಳಿ ಹಾಡು, 3.30 ಮಕ್ಕಳ ಮಂಟಪ– ಸದ್ವಿದ್ಯಾ ಪ್ರೌಢಶಾಲೆಯ ಮಕ್ಕಳಿಂದ ಕಾರ್ಯಕ್ರಮ ವೈವಿಧ್ಯ, 4.00 ನಾಟಕ, 4.30 ನೆನಪಿನಂಗಳ (ಧ್ವನಿ ಭಂಡಾರದಿಂದ) ಹಿರಿಯ ಸ್ವಾತಂತ್ರ್ಯ ಹೋರಾಟಗಾರ ತಗಡೂರು ರಾಮಚಂದ್ರರಾಯರೊಂದಿಗೆ ಎಂ. ಎನ್. ಜೋಯಿಸ್ ಅವರು ನಡೆಸಿದ್ದ ಸಂವಾದ, 6.50 ಕೃಷಿರಂಗ : ಕಿಸಾನ್‌ವಾಣಿ– ಭಾರತ ಸರ್ಕಾರದ ಕೃಷಿ ಹಾಗೂ ರೈತ ಕಲ್ಯಾಣ ಸಚಿವಾಲಯ ಪ್ರಾಯೋಜಿತ ಕಾರ್ಯಕ್ರಮ ಸಮಗ್ರ ಕೃಷಿಯ ಪ್ರಾಮುಖ್ಯತೆ ಕುರಿತು ಸಂವಾದ. ಭಾಗವಹಿಸುತ್ತಾರೆ: ಹೆಚ್. ಡಿ ಕೋಟೆ ತಾಲೂಕು ಹಂಪಾಪುರ ಹೋಬಳಿ ಪುರ ಗ್ರಾಮದ ಕೃಷಿಕ ದಂಪತಿ ಸುರೇಶ್ ದೇವಾಂಗ್ ಮತ್ತು ಸ್ಮಿತಾ ದೇವಾಂಗ್, ಪ್ರಸ್ತುತಿ : ಎನ್.ಕೇಶವಮೂರ್ತಿ, 8.00 ಯುವವಾಣಿ, 9.30 ಸವಿನೆನಪು–ಹಳೆಯ ಕನ್ನಡ ಚಿತಗೀತೆಗಳು, 10.00 ರಾಷ್ಟ್ರೀಯ ಸಂಗೀತ ಕಾರ್ಯಕ್ರಮ, ಮಾರುತಿ ಪ್ರಸಾದ್ – ಹಾಡುಗಾರಿಕೆ

ಮೈಸೂರು ಮಿತ್ರ

ಅರಮನೆ ಆವರಣದಲ್ಲಿ ಬೀಡು ಬಿಟ್ಟ ಅಭಿಮನ್ಯು ಪಡೆ

ಒಂದನೇ ಪುಟದಿಂದ

ಕಾರ್ಯಕ್ರಮದಲ್ಲಿ ಶಾಸಕರುಗಳಾದ ತನ್ವೀರ್‌ಸೇಠ್, ಕೆ.ಹರೀಶ್‌ಗೌಡ, ಟಿ.ಎಸ್.ಶ್ರೀವತ್ಸವ ಗಜಪಡೆಗೆ ಪೂಜೆ ಸಲ್ಲಿಸಿ, ಪುಷ್ಪಾರ್ಚನೆ ನೆರವೇರಿಸಿ, ಗಜಪಡೆಯನ್ನು ಅರಮನೆ ಆವರಣಕ್ಕೆ ಬರಮಾಡಿಕೊಂಡರು. ಇದೇ ವೇಳೆ ನಗರ ಪೊಲೀಸ್ ಇಲಾಖೆ ವತಿಯಿಂದ ಗಜಪಡೆಗೆ ಗಾಡ್ ಆಫ್ ಹಾನರ್ ನೀಡಿ ಗೌರವ ವಂದನೆ ಸಲ್ಲಿಸಲಾಯಿತು. ಬಳಿಕ ಅಶ್ವರೋಹಿ ಪಡೆ, ಕಳಸಹೊತ್ತ ಮುತ್ತೈದೆಯರು, ಮಂಗಳವಾದ್ಯ, ಡೊಳ್ಳು ಕುಣಿತ, ಪೊಲೀಸ್ ಬ್ಯಾಂಡ್, ಪೂಜಾ ಕುಣಿತ, ಕಂಸಾಳೆ, ಗೊಂಬೆ ಕುಣಿತ, ಪಾರಂಪರಿಕಾ ಧಿರಿಸು ಧರಿಸಿದ್ದ ಅರಮನೆ ಸಿಬ್ಬಂದಿಗಳೊಂದಿಗೆ ಗಜಪಡೆಯನ್ನು ಮೆರವಣಿಗೆಯಲ್ಲಿ ಅರಮನೆಯ ಆನೆ ಬಾಗಿಲಿನ ಬಳಿ ಕರೆದೊಯ್ಯಲಾಯಿತು. ಬಳಿಕ ಮತ್ತೆ ಆನೆಗಳಿಗೆ ಪೂಜೆ ಸಲ್ಲಿಸಿ, ಪುಷ್ಪವೃಷ್ಟಿಗೈಯ್ಯಲಾಯಿತು.

ಕಿಟ್ ವಿತರಣೆ: ಪೂಜೆ ಪೂರ್ಣಗೊಂಡ ಬಳಿಕ ಮೊದಲ ತಂಡದ 9 ಆನೆಗಳ ಮಾವುತ, ಕಾವಾಡಿಗಳಿಗೆ ಅಗತ್ಯ ವಸ್ತುಗಳುಳ್ಳ ಕಿಟ್ ವಿತರಿಸಲಾಯಿತು. ಶರ್ಟ್, ಲುಂಗಿ, ಸೀರೆ, ಕಂಬಳಿ, ಜಮಖಾನ, ಬನಿಯನ್, ಟವೆಲ್, ರಗ್ಗು, ಬಕೇಟ್, ಜಗ್ಗು, ಗ್ಯಾಸ್ ಸ್ಟೌವ್, ಗ್ಯಾಸ್ ಪೈಪ್, ರೆಗ್ಯುಲೇಟರ್, ಲೈಟರ್ ಸೇರಿದಂತೆ ಇನ್ನಿತರ ವಸ್ತುಗಳು ಕಿಟ್‌ನಲ್ಲಿದ್ದವು.

ತಂಗುದಾಣಕ್ಕೆ ತೆರಳಿದ ಆನೆ: ದಸರಾ ಆನೆಗಳಿಗಾಗಿ ನಿರ್ಮಿಸಿರುವ ತಂಗುದಾಣಕ್ಕೆ ಆನೆಗಳನ್ನು ಕರೆದೊಯ್ದು ಕಟ್ಟಿ ಹಾಕಲಾಯಿತು. ಕ್ಯಾಪ್ಟನ್ ಅಭಿಮನ್ಯು ಹಾಗೂ ಲಕ್ಷ್ಮಿ ಆನೆಯನ್ನು ಕೋಡಿ ಸೋಮೇಶ್ವರ ದೇವಾಲಯದ ಮುಂಭಾಗದ ಶೆಡ್‌ನಲ್ಲಿ ಪ್ರತ್ಯೇಕವಾಗಿ ಕಟ್ಟಿದರೆ, ಉಳಿದ ಆನೆಗಳನ್ನು ಶಾಶ್ವತ ಶೆಡ್‌ನಲ್ಲಿ ಕಟ್ಟಿ ಹಾಕಲಾಯಿತು.

ನೀರಾಟದಲ್ಲಿ ಮಿಂದೆದ್ದ ಆನೆಗಳು: ಅರಣ್ಯ ಭವನದಿಂದ ಮೆರವಣಿಗೆ ಮೂಲಕ ಆಗಮಿಸಿದ ಆನೆಗಳು ದಣಿದಿದ್ದವು. ಅರಮನೆ ಪ್ರವೇಶಿಸಿದ ನಂತರ ಎಲ್ಲಾ ಆನೆಗಳಿಗೆ ಸ್ನಾನ ಮಾಡಿಸಲಾಯಿತು.

ವಿರಮಿಸಿದ ಆನೆಗಳು: ಸ್ನಾನದ ಬಳಿಕ ಅಂಬಾರಿ ಆನೆ ಅಭಿಮನ್ಯು, ಭೀಮ, ಗೋಪಿ, ಧನಂಜಯ, ಕಂಜನ್, ರೋಹಿತ, ಲಕ್ಷ್ಮೀ, ವರಲಕ್ಷ್ಮೀ ಹಾಗೂ ಏಕಲವ್ಯ ಆನೆಗಳು ವಿಶ್ರಾಂತಿಗೆ ಜಾರಿದವು. ಅರಮನೆಗೆ ಆಗಮಿಸಿದ್ದ ಪ್ರವಾಸಿಗರು ದಸರಾ ಗಜಪಡೆ ಕಂಡು ಪುಳಕಿತರಾದರು.



ಸಚಿವ, ಸಂಸದರ ಗೈರು: ಗಜಪಡೆ ಸ್ವಾಗತ ಕಾರ್ಯಕ್ರಮದಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ, ಕೆ.ವೆಂಕಟೇಶ್ ಹಾಗೂ ಸಂಸದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಪಾಲ್ಗೊಳ್ಳಬೇಕಾಗಿತ್ತು. ಆದರೆ, ಶಾಸಕರಾದ ತನ್ವೀರ್ ಸೇಠ್, ಕೆ.ಹರೀಶ್‌ಗೌಡ, ಟಿ.ಎಸ್.ಶ್ರೀವತ್ಸ, ಕೆ.ವಿವೇಕಾನಂದ ಹೊರತುಪಡಿಸಿ ಉಳಿದ ಯಾವ ಜನಪ್ರತಿನಿಧಿಗಳು ಬರಲಿಲ್ಲ. ಮುಡಾ ಅಧ್ಯಕ್ಷ ಕೆ.ಮರೀಗೌಡ, ಕಾಡಾ ಅಧ್ಯಕ್ಷ ಮರಿಸ್ವಾಮಿ, ರಾಜ್ಯ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷೆ ಡಾ.ಪುಷ್ಪಾ ಅಮರನಾಥ್, ಎಪಿಸಿಸಿಎಫ್ ಕುಮಾರ್ ಪುಷ್ಕರ್, ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತ್ ರೆಡ್ಡಿ, ಹುಲಿ ಯೋಜನೆಯ ನಿರ್ದೇಶಕ ಡಾ.ಪಿ.ರಮೇಶ್‌ಕುಮಾರ್, ಮೈಸೂರು ವೃತ್ತದ ಸಿಎಫ್ ಡಾ.ಮಾಲತಿ ಪ್ರಿಯಾ, ಡಿಸಿಎಫ್ ಪ್ರಭುಗೌಡ, ನಗರ ಪೊಲೀಸ್ ಆಯುಕ್ತೆ ಸೀಮಾ ಲಾಟ್ಕರ್, ಎಸ್‌ಪಿ ವಿಷ್ಣುವರ್ಧನ್, ಜಿಪಂ ಸಿಇಒ ಕೆ.ಎಂ.ಗಾಯತ್ರಿ, ಅರಮನೆ ಮಂಡಳಿ ಉಪನಿರ್ದೇಶಕ ಟಿ.ಎಸ್.ಸುಬ್ರಹ್ಮಣ್ಯ, ಡಿಸಿಪಿಗಳಾದ ಮುತ್ತುರಾಜ್, ಜಾಹ್ನವಿ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.



ಅರಮನೆಯ ಜಯಮಾರ್ತಾಂಡ ದ್ವಾರದಲ್ಲಿ ದಸರಾ ಗಜಪಡೆಗೆ ಪೂರ್ಣಕುಂಭ ಸ್ವಾಗತ.



ಗಜಪಡೆಯ ಮಾವುತ, ಕಾವಾಡಿಗಳಿಗೆ ಅಗತ್ಯ ವಸ್ತುಗಳ ಸಾಮಗ್ರಿಯುಳ್ಳ ಕಿಟ್ ವಿತರಿಸಲಾಯಿತು.

ಅದ್ಧೂರಿ ದಸರಾ ಆಚರಣೆ

ಮೈಸೂರು, ಆ.23(ಎಂಟಿವೈ)– ನಾಡಿನಾದ್ಯಂತ ಈ ಬಾರಿ ಉತ್ತಮ ಮಳೆಯಾಗಿ ಜಲಾಶಯಗಳು ಭರ್ತಿಯಾಗಿರುವುದರಿಂದ ದಸರಾ ಮಹೋತ್ಸವವನ್ನು ಅದ್ದೂರಿಯಾಗಿ ಆಚರಿಸಲು ಕ್ರಮ ಕೈಗೊಳ್ಳಲಾಗಿದೆ ಎಂದು ಶಾಸಕ ತನ್ವೀರ್ ಸೇಠ್ ತಿಳಿಸಿದ್ದಾರೆ.

ಅರಮನೆ ಆವರಣದಲ್ಲಿ ಗಜಪಡೆಗೆ ಪೂಜೆ ಸಲ್ಲಿಸಿದ ಬಳಿಕ ಮಾತನಾಡಿದ ಅವರು, ಈ ಸಾಲಿನ ದಸರಾ ಮಹೋತ್ಸವವನ್ನು ಅದ್ದೂರಿಯಾಗಿ ಆಚರಿಸಲು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸೂಚಿಸಿದ್ದಾರೆ. ನಾಡಿನಾದ್ಯಂತ ಉತ್ತಮ ಮಳೆಯಾಗಿದೆ. ಜಲಾಶಯಗಳು ತುಂಬಿವೆ. ಕೃಷಿ ಚಟುವಟಿಕೆಗಳು ಉತ್ತಮವಾಗಿವೆ. ಈ ಹಿನ್ನೆಲೆಯಲ್ಲಿ ನಾಡಿನ ಅಧಿದೇವತೆ ಚಾಮುಂಡೇಶ್ವರಿ ಉತ್ಸವವೂ ಆಗಿರುವ ದಸರಾ ಮಹೋತ್ಸವವನ್ನು ಸಂಭ್ರಮದಿಂದ ಆಚರಿಸಲು ನಿರ್ಧರಿಸಲಾಗಿದೆ. ಈಗಾಗಲೇ ಸಿದ್ಧತಾ ಕಾರ್ಯ ಆರಂಭಿಸಲಾಗಿದೆ ಎಂದರು. ಇಂದು ಗಜಪಡೆಯನ್ನು ಅರಮನೆಗೆ ಸ್ವಾಗತಿಸ ಲಾಗಿದೆ. ಗಜಪಡೆ ಮೈಸೂರಿಗೆ ಬಂತೆಂದರೆ ದಸರಾ ಮಹೋತ್ಸವದ ಚಟುವಟಿಕೆ ಆರಂಭವಾದಂತೆ. ಈ ಹಿನ್ನೆಲೆಯಲ್ಲಿ ಸಾಂಸ್ಕೃತಿಕ ನಗರಿ ಮೈಸೂರಲ್ಲಿ ದಸರಾ ಸಂಭ್ರಮ ಆರಂಭವಾಗಿದೆ ಎಂದು ಅಭಿಪ್ರಾಯ ಪಟ್ಟರು. ಪ್ರಸಕ್ತ ಸಾಲಿನ ದಸರಾ ಮಹೋತ್ಸವದಲ್ಲಿ ನಡೆಯುವ ಕಾರ್ಯಕ್ರಮಗಳು ಜನರನ್ನು ಆಕರ್ಷಿಸಲಿವೆ. ಅಲ್ಲದೆ, ಈ ಬಾರಿ 21 ದಿನ ದೀಪಾಲಂಕಾರದ ವ್ಯವಸ್ಥೆ ಮಾಡಲಾಗಿದೆ. ಇದರಿಂದ ಮೈಸೂರಿಗೆ ಬರುವ ಪ್ರವಾಸಿಗರ ಸಂಖ್ಯೆ ಹೆಚ್ಚಾಗಲಿದೆ ಎಂದು ತಿಳಿಸಿದರು.

ಸಿಎಂ ವಿರುದ್ಧ ಪ್ರಾಸಿಕ್ಯೂಷನ್‌ಗೆ ಅನುಮತಿ ಖಂಡಿಸಿ ರಾಷ್ಟ್ರಪತಿಗಳ ಮುಂದೆ ಕಾಂಗ್ರೆಸ್ ಶಾಸಕರ ಪೆರೇಡ್‌ಗೆ ಚಿಂತನೆ

ಶಾಸಕ ತನ್ವೀರ್ ಸೇಠ್ ಹೇಳಿಕೆ

ಮೈಸೂರು, ಆ.23(ಎಂಟಿವೈ)–ಮುಡಾ ನಿವೇಶನ ಹಂಚಿಕೆ ಕುರಿತಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಯಾವುದೇ ತಪ್ಪು ಮಾಡದೇ ಇದ್ದರೂ, ರಾಜ್ಯಪಾಲರು ಪ್ರಾಸಿಕ್ಯೂಷನ್‌ಗೆ ಅನುಮತಿ ನೀಡಿರುವುದನ್ನು ಖಂಡಿಸಿ ಹಾಗೂ ರಾಜ್ಯಪಾಲರ ನಡೆಯಿಂದ ಸಂವಿಧಾನಕ್ಕೆ ಧಕ್ಕೆಯಾಗಿರುವುದರಿಂದ ರಾಷ್ಟ್ರಪತಿಯನ್ನು ಭೇಟಿ ಮಾಡಲು ಕಾಂಗ್ರೆಸ್ ಶಾಸಕರು ದೆಹಲಿ ಪೆರೇಡ್ ನಡೆಸಲು ಚರ್ಚೆ ನಡೆದಿದೆ ಎಂದು ಶಾಸಕ ತನ್ವೀರ್ ಸೇಠ್ ತಿಳಿಸಿದ್ದಾರೆ.

ಅರಮನೆಯಲ್ಲಿ ಶುಕ್ರವಾರ ಗಜಪಡೆಯ ಸ್ವಾಗತ ಕಾರ್ಯಕ್ರಮದ ಬಳಿಕ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ದೆಹಲಿಗೆ ಕಾಂಗ್ರೆಸ್ ಶಾಸಕರೆಲ್ಲ ತೆರಳಿ ರಾಷ್ಟ್ರಪತಿ ಮುಂದೆ ಪರೇಡ್ ನಡೆಸುವ ಕುರಿತು ಚರ್ಚೆಯಾಗುತ್ತಿದೆ. ಯಾವತ್ತು ಏನು ಎಂಬುದು ಇನ್ನೂ ತೀರ್ಮಾನ ಆಗಿಲ್ಲ. ಬಿಜೆಪಿ ರಾಜಭವನವನ್ನು ಪಕ್ಷದ ಕಚೇರಿಯಾಗಿ ಬಳಸುತ್ತಿದೆ. ರಾಜ್ಯಪಾಲರು ಒಂದು ಪಕ್ಷದ ಪರವಾಗಿ ಕೆಲಸ ಮಾಡುತ್ತಿದ್ದಾರೆ. ಕಾನೂನಾತ್ಮಕವಾಗಿ ಇರುವ ಎಲ್ಲ ಅವಕಾಶಗಳನ್ನು ಬಳಸಿಕೊಳ್ಳುವುದು ಅನಿವಾರ್ಯ. ಆದ್ದರಿಂದ ನಮ್ಮ ರಕ್ಷಣೆಗೆ ರಾಷ್ಟ್ರಪತಿ ಮಧ್ಯಪ್ರವೇಶ ಅಗತ್ಯವಿದೆ. ಈಗ ನಮಗೆ ರಾಷ್ಟ್ರಪತಿ ಬಳಿಗೆ ಹೋಗಬೇಕಾದ ಸ್ಥಿತಿ ಬಂದಿದೆ ಎಂದರು. ಬದಲಿ ನಿವೇಶನಕ್ಕಾಗಿ ಸಿಎಂ ಪತ್ನಿ ಮುಡಾಕ್ಕೆ ಕೊಟ್ಟಿರುವ ಪತ್ರದಲ್ಲಿ ವೈಟ್ನರ್ ಹಾಕಿದ ವಿಚಾರದ ಕುರಿತು ಪ್ರತಿಕ್ರಿಯಿಸಿದ ಅವರು, ಪತ್ರದಲ್ಲಿ ಹೇಳಬೇಕಾಗಿರುವುದನ್ನು ಸರಿಯಾಗಿ ಹೇಳಿದ್ದಾರೆ. ಅದರಲ್ಲಿ ಯಾವ ತಪ್ಪು ಇಲ್ಲ. ಸಮಾನಾಂತರ ಬಡಾವಣೆಯಲ್ಲಿ ನಿವೇಶನ ಕೇಳಿದ್ದಾರೆಯೇ ಹೊರತು, ಇಂತಹದ್ದೇ ನಿವೇಶನ ಕೊಡಿ ಎಂದು ಕೋರಿಲ್ಲ. ಬರೆಯುವಾಗ ಏನೋ ತಪ್ಪಾಗಿದೆ, ಅದಕ್ಕಾಗಿ ವೈಟ್ನರ್ ಹಾಕಿರಬಹುದು. ತನಿಖೆಯಲ್ಲಿ ಯಾರು ವೈಟ್ನರ್ ಹಾಕಿದ್ದು ಎಂಬುದೂ ತಿಳಿಯುತ್ತದೆ. ನಾನು ಶಾಸಕನಾಗಿ ಮುಡಾದ ಎಲ್ಲ ಸಭೆಯಲ್ಲಿ ಭಾಗಿಯಾಗಿದ್ದು, ಸಿಎಂ ಪತ್ನಿಗೆ ನಿವೇಶನ ಕೊಟ್ಟಿರುವ ಬಗ್ಗೆ ತನಿಖೆ ನಡೆಯುತ್ತಿದೆ. ಈ ಹಂತದಲ್ಲಿ ಒಂದೊಂದು ರೀತಿಯ ವಿಶ್ಲೇಷಣೆ ಸರಿಯಲ್ಲ ಎಂದು ಹೇಳಿದರು.

ಮುಖ್ಯಮಂತ್ರಿ ಬದಲಾವಣೆ ಬಗ್ಗೆ ಹೈಕಮಾಂಡ್ ಮಟ್ಟದಲ್ಲಿ ಚರ್ಚೆ ಆಗ್ತಿದೆ

ಹುಬ್ಬಳ್ಳಿ, ಆ. 23–ಮುಡಾ ಹಗರಣದ ತೀವ್ರ ಸ್ವರೂಪ ಪಡೆಯುತ್ತಿದ್ದಂತೆಯೇ ಇದೀಗ ಹೈಕಮಾಂಡ್ ಎಂಟ್ರಿಯಾಗಿದೆ. ಹೀಗಾಗಿ ಈ ಪ್ರಕರಣ ರಾಷ್ಟ್ರ ರಾಜಧಾನಿ ದೆಹಲಿಗೆ ಶಿಫ್ಟ್ ಆಗಿದೆ.



ವಿಜಯೇಂದ್ರ

ಸಚಿವರ ಬೆಂಬಲ, ಶಾಸಕರ ಬಲ, ಮುಡಾ ದಾಖಲೆಯೊಂದಿಗೆ ಸಿಎಂ ಸಿದ್ದರಾಮಯ್ಯ ಮತ್ತು ಡಿಸಿಎಂ ಡಿ.ಕೆ.ಶಿವಕುಮಾರ್ ಹೈಕಮಾಂಡ್ ನಾಯಕರನ್ನ ಭೇಟಿ ಮಾಡಲು ದೆಹಲಿಗೆ ತೆರಳಿದ್ದು, ಭಾರೀ ಕುತೂಹಲ ಮೂಡಿಸಿದೆ. ಇದರ ಮಧ್ಯೆ ಇತ್ತ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಅವರು ಸಿಎಂ ಬದಲಾವಣೆ ಚರ್ಚೆ ಆಗುತ್ತಿದೆ ಎಂದು ರಾಜ್ಯ ರಾಜಕಾರಣದಲ್ಲಿ ಹೊಸ ಬಾಂಬ್ ಸಿಡಿಸಿದ್ದಾರೆ.

ಹುಬ್ಬಳ್ಳಿಯಲ್ಲಿ ಮಾಧ್ಯಮಗಳ ಜೊತೆ ಮಾಡಿದ ವಿಜಯೇಂದ್ರ, ಸಿಎಂ ಬದಲಾವಣೆ ಬಗ್ಗೆ ಕಾಂಗ್ರೆಸ್ ಹೈಕಮಾಂಡ್ ಮಟ್ಟದಲ್ಲಿ ಚರ್ಚೆ ಆಗುತ್ತಿದೆ. ಇಲ್ಲದಿದ್ದರೆ ಶಾಸಕರನ್ನು ಸಿಎಂ ವಿಶ್ವಾಸಕ್ಕೆ ತೆಗೆದುಕೊಳ್ಳುವ ಕೆಲಸ ಮಾಡುತ್ತಿರಲಿಲ್ಲ ಎಂದು ಸ್ಫೋಟಕ ಹೇಳಿಕೆ ನೀಡಿದ್ದಾರೆ.

ಹುಬ್ಬಳ್ಳಿಯಲ್ಲಿಂದು ಸುದ್ದಿಗಾರರೊಂದಿಗೆ ಮಾತನಾಡಿದ ವಿಜಯೇಂದ್ರ, ಸಿಎಂ ಬದಲಾವಣೆ ಬಗ್ಗೆ ಕಾಂಗ್ರೆಸ್ ಹೈಕಮಾಂಡ್ ಮಟ್ಟದಲ್ಲಿ ಚರ್ಚೆ ಆಗುತ್ತಿದೆ. ಇಲ್ಲದಿದ್ದರೆ ಶಾಸಕರನ್ನು ಸಿಎಂ ವಿಶ್ವಾಸಕ್ಕೆ ತೆಗೆದುಕೊಳ್ಳುವ ಕೆಲಸ ಮಾಡುತ್ತಿರಲಿಲ್ಲ. ನಿನ್ನೆ ಶಾಸಕರನ್ನು ವಿಶ್ವಾಸಕ್ಕೆ ತೆಗೆದುಕೊಂಡಿದ್ದನ್ನು ನೋಡಿದರೆ ಸತ್ಯ ಅನ್ನಿಸುತ್ತೆ. ನಾನು ಬಂಡೆಗಲ್ಲಿನಂತೆ ನಿಲ್ಲುತ್ತೇನೆ ಎಂದು ಡಿಸಿಎಂ ಡಿ.ಕೆ. ಶಿವಕುಮಾರ್ ಹೇಳಿದ್ದರು. ಇದು ಸಾಕಷ್ಟು ಅನುಮಾನಕ್ಕೆ ಕಾರಣವಾಗಿದೆ. ಮುಡಾದಲ್ಲಿ ಸಾಕಷ್ಟು ಅವ್ಯವಹಾರವಾಗಿದೆ, ಸಿಎಂ ಬದಲಾವಣೆ ಕಾಲ ಸನ್ನಿಹಿತ. ಸಿಎಂ ರಾಜೀನಾಮೆ ಕೊಡುತ್ತಾರೆ. ಇದರಲ್ಲಿ ಯಾವುದೇ ಅನುಮಾನ ಬೇಡ. ಮುಡಾ ಹಗರಣ, ವಾಲ್ಮೀಕಿ ಹಗರಣದಲ್ಲಿ ಸಿಎಂ ನೇರವಾಗಿ ಭಾಗಿ ಆಗಿದ್ದಾರೆ. ಹೀಗಾಗಿ ಸಿಎಂ ಸಿದ್ದರಾಮಯ್ಯ ರಾಜೀನಾಮೆ ಕೊಟ್ಟೆ ಕೊಡುತ್ತಾರೆ ಎಂದು ಹೇಳಿದರು.

ಸರ್ಕಾರ ಬಂದು 18 ತಿಂಗಳಾದರೂ ಉತ್ತರ ಕರ್ನಾಟಕದ ಬಗ್ಗೆ ಕಿಂಚಿತ್ತೂ ಕಾಳಜಿ ಇಲ್ಲ, ರೈತರ ಪರವಾದ ಕಾಳಜಿ ಇಲ್ಲ, ಇದು ನಿಷ್ಕ್ರಿಯ ಸರ್ಕಾರ. ಕರ್ನಾಟಕದ ಜನತೆಗೆ ಕಾಂಗ್ರೆಸ್ ಸರ್ಕಾರ ಇದ್ದು ಸತ್ತಂತೆ ಎಂದು ವಾಗ್ದಾಳಿ ನಡೆಸಿದ ವಿಜಯೇಂದ್ರ, ನಮ್ಮ ಕುಟುಂಬದ ಬಗ್ಗೆ ಭ್ರಷ್ಟಾಚಾರದ ಆರೋಪ ಮಾಡಿದ್ದಾರೆ. ಸಚಿವ ದಿನೇಶ್ ಗುಂಡೂರಾವ್ ಬಳಿ ದಾಖಲೆ ಇದ್ದರೆ ಕೊಡಲಿ. ಎಲ್ಲವೂ ಯುಪಿಎ ಕಾಲದಲ್ಲಿ ಆಗಿದ್ದು, ಎಲ್ಲವೂ ಇತ್ಯರ್ಥ ಆಗಿವೆ. ಯಾರು ಯಾರನ್ನ ಮುಗಿಸುತ್ತಾರೆಂದು ನೋಡೋಣ ಎಂದು ತಿರುಗೇಟು ನೀಡಿದರು.

ಇವರು ಅವರ ಮೇಲೆ ಕೇಸ್ ಇದೆ ಎಂದು ಬೊಬ್ಬೆ ಹಾಕುತ್ತಿದ್ದಾರೆ. ನಮ್ಮದು ಕೇಸ್ ಇದ್ದರೆ ಹೊರತರಲಿ, ಭ್ರಷ್ಟ ಸರ್ಕಾರ ತೆಗೆಯುತ್ತೇವೆ. ಭ್ರಷ್ಟ ಸರ್ಕಾರ ತೆಗೆಯುವುದು ನಮ್ಮ ಕರ್ತವ್ಯ. ಯಡಿಯೂರಪ್ಪ ವಿರುದ್ಧದ ಕೇಸ್ ಪಟ್ಟಿ ಮಾಡಲು ಖುದ್ದು ಸಿಎಂ ಹೇಳಿದ್ದಾರೆ ಎಂದು ವಿಜಯೇಂದ್ರ ಕಿಡಿಕಾರಿದರು.

ಹೊಸ ಸಿಎಂ ಬರೋದು ಸತ್ಯ ಎಂದ ಬೆಲ್ಲದ್: ಇನ್ನು ಇದೇ ವೇಳೆ ಬಿಜೆಪಿ ಶಾಸಕ ಅರವಿಂದ ಬೆಲ್ಲದ್ ಮಾತನಾಡಿ, ಸೂರ್ಯ ಪೂರ್ವದಲ್ಲಿ ಹುಟ್ಟೋದು ಎಷ್ಟು ಸತ್ಯವೋ ಕರ್ನಾಟಕದಲ್ಲಿ ಸಿದ್ದರಾಮಯ್ಯ ಹೋಗಿ ಹೊಸ ಸಿಎಂ ಬರೋದು ಅಷ್ಟೆ ಸತ್ಯ. ರಾಜ್ಯಪಾಲರು ಭ್ರಷ್ಟ ರಾಜಕಾರಣಿಗಳನ್ನು ಟಾರ್ಗೆಟ್ ಮಾಡಿದ್ದಾರೆ. ಯಾರೋ ಒಬ್ಬರು ಭ್ರಷ್ಟರಿದ್ದಾರೆ ಎಂದು ಕಂಪ್ಲೇಟ್ ಕೊಟ್ಟಿದ್ದಾರೆ. ಹೀಗಾಗಿ ರಾಜಕಾರಣಿಗೆ ನೋಟಿಸ್ ಕೊಟ್ಟಿದ್ದಾರೆ ಎಂದು ಪರೋಕ್ಷವಾಗಿ ಸಿದ್ದರಾಮಯ್ಯಗೆ ಭ್ರಷ್ಟ ರಾಜಕಾರಣಿ ಎಂದ ಟಾಂಗ್ ಕೊಟ್ಟರು.

ಅವರು ಕೊಟ್ಟ ಉತ್ತರ ಸಮಂಜಸ ಇರದ ಕಾರಣ ಅನುಮತಿ ಕೊಟ್ಟಿದ್ದಾರೆ. ಅವರನ್ನು ಅರೆಸ್ಟ್ ಮಾಡಿ ಎಂದು ಹೇಳಿಲ್ಲ. ಅಕಸ್ಮಾತ್ ಅನುಮತಿ ಕೊಡದೆ ಹೋದರೆ ಸಿಎಂ ಏನು ಬೇಕಾದರೂ ಮಾಡಬಹುದಾ ಎಂದು ಜನ ಮಾತಾಡ್ತಾರೆ. ಹೀಗಾಗಿ ಕಂಪ್ಲೇಟ್ ಬಂದಿದೆ ರಾಜ್ಯಪಾಲರು ತನಿಖೆಗೆ ಆದೇಶ ಮಾಡಿದ್ದಾರೆ. ಇದರಲ್ಲಿ ಏನು ತಪ್ಪಿದೆ ಎಂದರು.

ಸಿಎಂ ಸಿದ್ದರಾಮಯ್ಯ ಲಂಚ ಪಡೆದ ಆರೋಪ; ಸೆ.12ಕ್ಕೆ ವಿಚಾರಣೆ



ಸಿದ್ದರಾಮಯ್ಯ



ವಿವೇಕಾನಂದ



ರಮೇಶ್

ಬೆಂಗಳೂರು, ಆ. 23– ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದಿಂದ ಅಕ್ರಮವಾಗಿ ಸೈಟುಗಳನ್ನು ಪಡೆದ ಆರೋಪದಲ್ಲಿ ಕಾನೂನು ಹೋರಾಟಕ್ಕೆ ಮುಂದಾಗಿರುವ ಮುಖ್ಯಮಂತ್ರಿ ಸಿದ್ದರಾಮಯ್ಯನವರಿಗೆ ಮತ್ತೊಂದು ಸವಾಲು ಎದುರಾಗಿದೆ. ಬೆಂಗಳೂರು ಟರ್ಫ್ ಕ್ಲಬ್‌ಗೆ ಸರ್ಕಾರದ ವತಿಯಿಂದ ಸ್ಟೀವರ್ಡ್ಸ್ ಹುದ್ದೆ ನೇಮಕಾತಿಗೆ ಮೈಸೂರು ವಿವೇಕ್ ಹೋಟೆಲ್ಸ್‌ನ ಎಲ್.ವಿವೇಕಾನಂದರಿಂದ ಲಂಚ ಪಡೆದ ಆರೋಪದ ಬಗ್ಗೆ ಲೋಕಾಯುಕ್ತದಲ್ಲಿ ಈ ಹಿಂದೆ ದಾಖಲಾಗಿದ್ದ ಕೇಸ್‌ನ ಪ್ರಗತಿಯನ್ನು ಕೇಳಿ ಬೆಂಗಳೂರಿನ ಜನಪ್ರತಿನಿಧಿ ನ್ಯಾಯಾಲಯವು ಲೋಕಾಯುಕ್ತಕ್ಕೆ ಶೋಕಾಸ್ ನೋಟಿಸ್ ಜಾರಿ ಮಾಡಿದ್ದು, ಮುಂದಿನ ವಿಚಾರಣೆಯನ್ನು ಸೆ.12ಕ್ಕೆ ಮುಂದೂಡಿದೆ.

ಬೆಂಗಳೂರಿನ ಬಿಜೆಪಿ ನಾಯಕ ಎನ್.ಆರ್.ರಮೇಶ್ ಅವರು ಸಲ್ಲಿಸಿರುವ ದೂರಿನನ್ವಯ, ಈ ನೋಟಿಸ್ ಜಾರಿಗೊಳಿಸಲಾಗಿದೆ. ಇದರಿಂದಾಗಿ, ಸಿದ್ದರಾಮಯ್ಯನವರ ವಿರುದ್ಧದ ಲಂಚದ ಆರೋಪದ ತನಿಖೆಯನ್ನು ಚುರುಕುಗೊಳಿಸಬೇಕಾದ ಅನಿವಾರ್ಯತೆ ಲೋಕಾಯುಕ್ತಕ್ಕೆ ಒದಗಿ ಬಂದಿದೆ.

ವಿವರ: ಮುಖ್ಯಮಂತ್ರಿ ಸಿದ್ದರಾಮಯ್ಯ ಮೊದಲ ಬಾರಿ ಮುಖ್ಯಮಂತ್ರಿಯಾಗಿದ್ದ (13–5–2013 ರಿಂದ 17–5–2018) ಅವಧಿಯಲ್ಲಿ ಟರ್ಫ್ ಕ್ಲಬ್ ಸ್ಟೀವರ್ಡ್ ಹುದ್ದೆಗೆ ವಿವೇಕಾನಂದ ಅವರನ್ನು ನೇಮಿಸಲು ಸಿಎಂ ಸಿದ್ದರಾಮಯ್ಯ ಲಂಚ ಪಡೆದಿದ್ದಾರೆಂದು ಲೋಕಾಯುಕ್ತದಲ್ಲಿ ಬೆಂಗಳೂರಿನ ಬನಶಂಕರಿ ನಿವಾಸಿ ಬಿಜೆಪಿ ನಾಯಕ ಎನ್.ಆರ್.ರಮೇಶ್ ದೂರು ದಾಖಲಿಸಿದ್ದರು. ಆನಂತರ, ಬೆಂಗಳೂರಿನ ಜನಪ್ರತಿನಿಧಿ ನ್ಯಾಯಾಲಯದಲ್ಲಿಯೂ ಅವರು ಖಾಸಗಿ ದೂರು ದಾಖಲಿಸಿದ್ದರು.

ನೇಮಕಾತಿಗಾಗಿ 1.30 ಕೋಟಿ ರೂ. ಲಂಚದ ಹಣವನ್ನು ಸಾಲದ ರೂಪದಲ್ಲಿ ಪಡೆಯಲಾಗಿದೆ ಎಂದು ದೂರಿನಲ್ಲಿ ಉಲ್ಲೇಖಿಸಲಾಗಿತ್ತು. ತನಿಖೆ ನಡೆಸಿದ್ದ ಲೋಕಾಯುಕ್ತವು, ಪ್ರಕರಣದಲ್ಲಿ ಸಿದ್ದರಾಮಯ್ಯನವರ ಬಗ್ಗೆ ಬಿ–ರಿಪೋರ್ಟ್ ಸಲ್ಲಿಸಿತ್ತು. ಇದನ್ನು ಒಪ್ಪದ ನ್ಯಾಯಾಲಯ, ಈ ವರದಿಯಲ್ಲಿ ತಾಂತ್ರಿಕ ದೋಷಗಳಿದ್ದು, ಪ್ರಕರಣಕ್ಕೆ ಸಂಬಂಧಿಸಿದವರ ಪ್ರಾಥಮಿಕ ವಿಚಾರಣೆಯಿಲ್ಲ ಎಂದು ಹೇಳಿ ವರದಿಯನ್ನು ತಿರಸ್ಕರಿಸಿತ್ತು. ಅಲ್ಲದೆ ಈ ಪ್ರಕರಣದ ಮರು ತನಿಖೆ ಮಾಡಿ ಆರು ತಿಂಗಳೊಳಗೆ ವರದಿ ಸಲ್ಲಿಸುವಂತೆ ಲೋಕಾಯುಕ್ತಕ್ಕೆ ನಿರ್ದೇಶನ ನೀಡಿತ್ತು. ಇದೀಗ ಆ. 22ರಂದು ಈ ಪ್ರಕರಣ ಮತ್ತೆ ನ್ಯಾಯಾಲಯದ ಮುಂದೆ ವಿಚಾರಣೆಗೆ ಬಂದಿದ್ದು, ಅದರಲ್ಲಿ ಲೋಕಾಯುಕ್ತ ಪರವಾಗಿ ಹಾಜರಿದ್ದ ವಕೀಲರು, ನ್ಯಾಯಾಲಯದ ಮರು ತನಿಖೆಯ ಆದೇಶದ ಪ್ರತಿ ಲೋಕಾಯುಕ್ತಕ್ಕೆ ತಲುಪಿಲ್ಲ. ಹಾಗಾಗಿ ಲೋಕಾಯುಕ್ತದಿಂದ ಈ ಪ್ರಕರಣದ ಮರು ತನಿಖೆಯಾಗಿಲ್ಲ ಎಂದು ಹೇಳಿದ್ದಾರೆ.

ವಕೀಲರ ಹೇಳಿಕೆಯಿಂದ ಗರಂ ಆದ ಜನಪ್ರತಿನಿಧಿ ನ್ಯಾಯಾಲಯದ ನ್ಯಾಯಮೂರ್ತಿಗಳು, ಮರು ತನಿಖೆಗೆ ಆದೇಶಿಸಿ ಆರು ತಿಂಗಳಾದರೂ ತನಿಖೆಯಾಗದ ಹಿನ್ನೆಲೆಯಲ್ಲಿ ಉತ್ತರಿಸಬೇಕೆಂದು ಶೋಕಾಸ್ ನೋಟಿಸ್ ಜಾರಿಗೊಳಿಸಿದೆ. ಇದೇ ವೇಳೆ, ದೂರುದಾರರಾದ ಎನ್.ಆರ್.ರಮೇಶ್ ಅವರ ಪರ ವಕೀಲರು, ಮರು ತನಿಖೆಯಾಗದೇ ಇರುವುದಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯನವರ ಅಧಿಕಾರ ಪ್ರಭಾವವೇ ಕಾರಣ ಎಂದು ಆರೋಪಿಸಿರುವುದನ್ನು ನ್ಯಾಯಾಲಯ ಗಂಭೀರವಾಗಿ ಪರಿಗಣಿಸಿದೆ. ಹಾಗಾಗಿ, ನ್ಯಾಯಾಲಯವು ಲೋಕಾಯುಕ್ತಕ್ಕೆ ಶೋಕಾಸ್ ನೋಟಿಸ್ ಜಾರಿಗೊಳಿಸಿ, ಮುಂದಿನ ವಿಚಾರಣೆಯನ್ನು ಸೆ.12ಕ್ಕೆ ಮುಂದೂಡಿದೆ.

ಸಿಎಂ ಸಿದ್ದರಾಮಯ್ಯ ವಿರುದ್ಧ ರಾಜ್ಯಪಾಲರಿಗೆ ಮತ್ತೊಂದು ದೂರು: ಜಿಲ್ಲಾ ಮತ್ತು ತಾಲೂಕು ಪಂಚಾಯತ್‌ನಲ್ಲಿ ಬಾಕಿ ಉಳಿದಿರುವ 1,494 ಕೋಟಿ ರೂ. ಹಣ ದುರುಪಯೋಗದ ಬಗ್ಗೆ ವಿಧಾನ ಪರಿಷತ್ ಬಿಜೆಪಿ ಸದಸ್ಯ ಅರುಣ್ ರಾಜ್ಯಪಾಲ ತಾವರಚಂದ್ ಗೆಹ್ಲೋಟ್ ಅವರಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ದೂರು ಸಲ್ಲಿಸಿದ್ದಾರೆ. ಹಣಕಾಸು ಅವ್ಯವಹಾರ, ರಾಜ್ಯದ ಕ್ರೋಢೀಕೃತ ನಿಧಿ ದುರ್ಬಳಕೆ ಹಾಗೂ ಸಾಂವಿಧಾನಿಕ ಬಾಧ್ಯತೆಯ ಉಲ್ಲಂಘನೆ ಕುರಿತು ತನಿಖೆ ನಡೆಸುವಂತೆ ಕೋರಿದ್ದಾರೆ. ಅಲ್ಲದೆ ಅಸಂವಿಧಾನಿಕ ಹಣಕಾಸು ವ್ಯವಹಾರ ನಡೆಸಿರುವ ಸಿಎಂ ಸಿದ್ದರಾಮಯ್ಯ ಅವರನ್ನು ವಜಾಗೊಳಿಸಬೇಕು ಎಂದು ಒತ್ತಾಯಿಸಿದರು.

ಹಸಿರು ನಮ್ಮ ಉಸಿರು

ಪಡಿತರ ಚೀಟಿ: ಈ–ಕೆವೈಸಿ ಕಡ್ಡಾಯ

ಮೈಸೂರು,ಆ.23– ನಂಜನಗೂಡು ತಾಲ್ಲೂಕಿನ ಎಲ್ಲಾ ನ್ಯಾಯಬೆಲೆ ಅಂಗಡಿಗಳಲ್ಲಿ ಪಡಿತರ ಚೀಟಿಗಳಲ್ಲಿರುವ ಸದಸ್ಯರು ಈ–ಕೆವೈಸಿ ಮಾಡಿಸಿಕೊಳ್ಳುವುದು ಕಡ್ಡಾಯವಾಗಿದೆ. ತಾಲೂಕಿನ ವ್ಯಾಪ್ತಿಯ 8827 ಪಡಿತರ ಚೀಟಿದಾರರ ಸದಸ್ಯರು ತಮ್ಮ ಪಡಿತರ ಚೀಟಿಗೆ ಈವರೆಗೂ ಈ–ಕೆವೈಸಿ ಮಾಡಿಸಿಕೊಳ್ಳದಿರುವುದು ಕಂಡುಬಂದಿದ್ದು, ಆಗಸ್ಟ್ 31 ರೊಳಗೆ ಈ–ಕೆವೈಸಿ ಮಾಡಿಸಿಕೊಳ್ಳಲು ಅಂತಿಮ ಗಡುವು ನೀಡಲಾಗಿರುತ್ತದೆ.

ಈ–ಕೆವೈಸಿ ಬಾಕಿ ಇರುವ ಪಡಿತರ ಚೀಟಿಗಳ ಸದಸ್ಯರು ತಮ್ಮ ವ್ಯಾಪ್ತಿಯಲ್ಲಿನ ನ್ಯಾಯಬೆಲೆ ಅಂಗಡಿಗಳಿಗೆ ಭೇಟಿ ನೀಡಿ ಈ–ಕೆವೈಸಿ ಮಾಡಿಸಿಕೊಳ್ಳುವಂತೆ ಸೂಚಿಸಿದ್ದು, ಆಗಸ್ಟ್ 31 ರೊಳಗೆ ಮಾಡಿಸಿ ಕೊಳ್ಳದಿದ್ದಲ್ಲಿ ಅಂತಹ ಪಡಿತರ ಚೀಟಿ ದಾರರ ಸದಸ್ಯರ ಹೆಸರನ್ನು ಪಡಿತರ ಚೀಟಿಯಿಂದ ತೆಗೆದು ಹಾಕಲಾಗುವುದು ಎಂದು ನಂಜನಗೂಡು ತಾಲೂಕಿನ ತಹಶೀಲ್ದಾರ್ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಪರಿಹಾರ ಇಲ್ಲವೆ 40:60ರಲ್ಲಿ ನಿವೇಶನ ಪ್ರಸ್ತಾವನೆ ತಿರಸ್ಕರಿಸಿ ಬದಲಿ ಭೂಮಿಗೆ ಬೇಡಿಕೆ

- ಮುಖ್ಯಮಂತ್ರಿ ಸಿದ್ದರಾಮಯ್ಯರ ಪತ್ನಿ ಬರೆದ ಪತ್ರ ಬಹಿರಂಗಪಡಿಸಿದ ಕೇಂದ್ರ ಸಚಿವ ಕುಮಾರಸ್ವಾಮಿ
- ಮುಡಾ ಹಗರಣದಲ್ಲಿ ತಮ್ಮ ಪಾತ್ರವೇ ಇಲ್ಲ ಎಂದ ಸಿಎಂಗೆ ಹೆಚ್‌ಡಿಕೆ ಎದಿರೇಟು



ಬೆಂಗಳೂರು, ಆ.23(ಕೆಎಂಶಿ)– ಮುಡಾ ಹಗರಣದಲ್ಲಿ ತಮ್ಮ ಹಾಗೂ ತಮ್ಮ ಕುಟುಂಬದ ಪಾತ್ರವೇ ಇಲ್ಲ ಎಂದು ಹೇಳುತ್ತಿದ್ದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಅವರು ದಾಖಲೆ ಸಮೇತ ಉತ್ತರ ನೀಡಿದ್ದಾರೆ. ತಮ್ಮ ಎಕ್ಸ್ ಖಾತೆಯಲ್ಲಿ ಈ ಬಗ್ಗೆ ಪೋಸ್ಟ್ ಮಾಡಿರುವ ಅವರು, ಮಾರುಕಟ್ಟೆ ದರದಲ್ಲಿ ಜಮೀನಿನ ಪರಿಹಾರ ಅಥವಾ 40:60ರ ಅನುಪಾತದಲ್ಲಿ ನಿವೇಶನ ನೀಡುವ ಮುಡಾ ಪ್ರಸ್ತಾವನೆ ನಿರಾಕರಿಸಿ ಬದಲಿ ಜಮೀನನ್ನೇ ನೀಡುವಂತೆ ಒತ್ತಾಯ ಮಾಡಿರುವ ದಾಖಲೆಯನ್ನು ಕೇಂದ್ರ ಸಚಿವರು ಬಿಡುಗಡೆ ಮಾಡಿದ್ದಾರೆ.

ಮುಖ್ಯಮಂತ್ರಿ ಸಿದ್ದರಾಮಯ್ಯನವರೇ, ಮುಡಾ ನಿವೇಶನ ಹಂಚಿಕೆಯಲ್ಲಿ ನನ್ನ ಹಾಗೂ ನನ್ನ ಕುಟುಂಬದ ಪಾತ್ರವೇ ಇಲ್ಲ ಎಂದು ಬೊಗಳೆ ಬಿಡುವ ನಿಮಗೆ ಕನ್ನಡ ಬರುತ್ತದೆ, ಭಾಷೆಯೂ ಗೊತ್ತಿದೆ ಎಂದು ಪರಿಭಾವಿಸುತ್ತೇನೆ. ನೀವು ವಕೀಲರಲ್ಲವೇ ದಾಖಲೆಯನ್ನೊಮ್ಮೆ ಕಣ್ಣಲ್ಲಿ ಕಣ್ಣಿಟ್ಟು ಓದಿ ಎಂದು ದಾಖಲೆಯನ್ನೂ ಟ್ಯಾಗ್ ಮಾಡಿದ್ದಾರೆ.

50:50ರ ಅನುಪಾತದಲ್ಲಿ ಮುಡಾ ಬದಲಿ ನಿವೇಶನ ನೀಡಲೇಬೇಕು ಎಂದು ಸಿದ್ದರಾಮಯ್ಯ ಅವರ ಧರ್ಮಪತ್ನಿ ಒತ್ತಾಯ ಮಾಡಿದ್ದಾರೆ. ಅಲ್ಲದೆ, ಅರ್ಜಿದಾರರಾದ ಪಾರ್ವತಮ್ಮ ಅವರಿಗೆ ಮಾರುಕಟ್ಟೆ ದರದಲ್ಲಿ ಜಮೀನಿನ ಪರಿಹಾರ ನೀಡುವುದಾಗಿಯೂ ಅಥವಾ 40:60ರ ಅನುಪಾತದಲ್ಲಿ ನಿವೇಶನ ನೀಡುವುದಾಗಿಯೂ ತಿಳಿಸಲಾಗಿತ್ತು.

ಪ್ರಾಧಿಕಾರದ ಸಲಹೆಗೆ ಅವರು ಒಪ್ಪಿಗೆ ನೀಡದೇ ಇದ್ದು, ಬದಲಿ ಜಮೀನನ್ನೇ ನೀಡುವಂತೆ ಒತ್ತಾಯಿಸಿರುತ್ತಾರೆ. ಇದು ಮುಡಾ ದಾಖಲೆಯಲ್ಲಿನ ಟಿಪ್ಪಣಿಗೆ ತಾವು ಏನಂತೀರಿ ಎಂದು ಕುಮಾರಸ್ವಾಮಿ ಪ್ರಶ್ನಿಸಿದ್ದಾರೆ.

ಇದು ತಮ್ಮ ಪ್ರಕಾರ ಟಿಪ್ಪಣಿಯೋ.., ಒಕ್ಕಣೆಯೋ.. ಅಥವಾ ಅಪ್ಪಣೆಯೋ.. ಸೂಪರ್ ಮುಖ್ಯಮಂತ್ರಿ ಅವರೇ ಒತ್ತಾಯಿಸಿರುತ್ತಾರೆ ಎಂದರೆ ಮುಡಾ ಅಧಿಕಾರಿಗಳು ಇನ್ನೇನು ಮಾಡಲು ಸಾಧ್ಯ. ಆಗ ತಾವು ರಾಜ್ಯದಲ್ಲಿ ಯಾವ ಹುದ್ದೆಯಲ್ಲಿದ್ದೀರಿ, ವಿಧಾನಸೌಧದ 3ನೇ ಮಹಡಿಯಲ್ಲಿರುವ ಮುಖ್ಯಮಂತ್ರಿ ಕುರ್ಚಿಯಲ್ಲಿ ಕೂತಿದ್ದೀರಿ.

ಈಗ ಹೇಳಿ, ಯಾರ ತಟ್ಟೆಯಲ್ಲಿ ಏನು ಸತ್ತು ಬಿದ್ದಿದೆ ಅಥವಾ ಕಪ್ಪುಚುಕ್ಕೆಯನ್ನು ವೈಟ್ನರ್ ನುಂಗಿತ್ತಾ ಎಂದು ಕುಮಾರಸ್ವಾಮಿ ಅವರು ಸಿದ್ದರಾಮಯ್ಯ ಅವರಿಗೆ ತಿರುಗೇಟು ನೀಡಿದ್ದಾರೆ.

ನಕ್ಕರೆ ಅದೇ ಸ್ವರ್ಗ

ಹೆಂಡತಿ : ರೀ... ಕೆಲಸದವಳ ಹತ್ತಿರ ಏನಾದ್ರೂ ತರ್ಲೆ ಮಾಡಿದ್ರಾ...?
ಗಂಡ : ಯಾಕೆ ಏನಾಯ್ತು...?
ಹೆಂಡತಿ : ಇಷ್ಟು ದಿನ 'ಅಮ್ಮ' ಎಂದು ಕರೆಯುತ್ತಿದ್ದವಳು... ಈಗ 'ಅಕ್ಕ' ಎಂದು ಕರೆಯುತ್ತಿದ್ದಾಳೆ...!!!

ಮೈಸೂರು ಮಿತ್ರ

ಶನಿವಾರ, 24 ಆಗಸ್ಟ್ 2024

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತವಾಹಿನಿ.........

ಮುಗಿದರೇನು, ಮುಗಿಯದಿದ್ದರೇನು, ದೇವರು ಹಾಜರಾತಿ ಕೂಗಿದ ತಕ್ಷಣ ಎಲ್ಲಾ ಬಿಟ್ಟು ಕರೆಗೆ ಓಡುವುದೇ ಜಗದ ನಿಯಮ. ನೀನೂ ಹೊರತಲ್ಲ, ನಾನು ಹೊರತಲ್ಲ, ಮುನಿಸೇಕೆ ಈ ನಾಲ್ಕು ದಿನದ ಬದುಕಿನಲ್ಲಿ...!

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಹಾರುವನ ತೊತ್ತಾಗಬೇಡ ಗಾಣಿಗನ ಎತ್ತಾಗಬೇಡ.

ನಿಮ್ಮ ಪತ್ರಗಳು

■ ನೆಲದ ಕಾನೂನು ಬದಲಾಗಲೇಬೇಕು

ಮಾನ್ಯರೆ,

ಕೆಲ ದಿನಗಳ ಹಿಂದೆಯಷ್ಟೆ ಬೆಂಗಳೂರಿನ ಕೋರಮಂಗಲದ ಪಿಜಿಯೊಂದರಲ್ಲಿ ಯುವತಿಯನ್ನು ಕೊಲೆ ಮಾಡಿದ ಘಟನೆ ಇನ್ನೂ ಮಾಸದೇ ಇರುವಾಗಲೇ, ಇದೀಗ ಮತ್ತೊಂದು ಅತ್ಯಾಚಾರದ ಭೀಭತ್ಸ ಘಟನೆ ಬೆಂಗಳೂರಿನಲ್ಲಿ ನಡೆದಿರುವುದು ನಾಗರಿಕ ಸಮಾಜ ತಲೆ ತಗ್ಗಿಸುವಂತೆ ಮಾಡಿದೆ. ಕಾನೂನು ಏನೂ ಮಾಡುವುದಿಲ್ಲವೆಂದೇ ತಿಳಿದಿರುವ ಇಂತಹವರಿಗೆ ಇದೀಗ ನಮ್ಮ ನೆಲದ ಕಾನೂನು ಬದಲಾಗುವ ದಿನಗಳು ಬಂದಿವೆ. ಆದರೂ ಒಂದು ಮಾತು. ಹೊರ ರಾಜ್ಯಗಳಿಂದ ಬಂದು ನಮ್ಮಲ್ಲಿ ಕೆಲಸ ಮಾಡುವ, ವಿದ್ಯಾರ್ಜನೆ ಮಾಡುವ ಯುವಕ-ಯುವತಿಯರಿಂದಲೇ ಇಂದು ನಮ್ಮ ನಾಡಿಗೆ ಕೆಟ್ಟ ಹೆಸರು ಎಂಬುದರಲ್ಲಿ ಎರಡು ಮಾತಿಲ್ಲವಷ್ಟೆ. ಅತ್ಯಾಚಾರ ಯತ್ನ ನಿಜಕ್ಕೂ ಖಂಡನೀಯವಾದರೂ., ವಿದ್ಯಾರ್ಥಿನಿಯಾದ ಆಕೆ ರಾತ್ರಿ ಒಂದೂವರೆ ಸಮಯದಲ್ಲಿ ಪಾರ್ಟಿ ಮುಗಿಸಿ ಕಾರು ಚಲಾಯಿಸಿ ಆಟೋಗೆ ಗುದ್ದಿದ್ದೇಕೆ ? ಒಂದು ವೇಳೆ ಆಕೆ ಮದ್ಯಪಾನ ಮಾಡಿದ್ದಳೇ ? ನಂತರ ಆಕೆ ಆಟೋ ಹತ್ತಿ ನಂತರ ಮತ್ತೆ ಒಬ್ಬನ ಬಳಿ ದ್ವಿಚಕ್ರ ವಾಹನದಲ್ಲಿ ತೆರಳಿ, ನಂತರ ಅಪರಿಚಿತನೊಂದಿಗೆ ಆ ನಡುರಾತ್ರಿ ಹೇಗೆ ಡ್ರಾಪ್ ಕೇಳಿದಳು. ಹೀಗೆ ನಶೆಯಲ್ಲಿರುವ ಮತ್ತು ಅಪರಾತ್ರಿಯಲ್ಲಿ ಹೆಂಗಸು ಬಿಂದಾಸ್ ಆಗಿ ಹೋದರೆ, ಸುರಕ್ಷತೆ ಎಲ್ಲಿರುತ್ತದೆ. ಇದನ್ನು ಆಕೆ ಕೂಡ ಚಿಂತಿಸಬೇಕಿತ್ತು. ಇವೆಲ್ಲದರ ನಡುವೆ ಇವರ ನಡುರಾತ್ರಿಯ ಪಾರ್ಟಿಯ ಹುಚ್ಚಾಟಗಳಿಂದ ನಮ್ಮ ಬೆಂಗಳೂರಿಗೆ ಅಪಖ್ಯಾತಿ ಬರುತ್ತಿದೆ. ಆದಾಗ್ಯೂ ಕಾನೂನು ಉಲ್ಲಂಘಿಸುವವರಿಗೆ ಅಲ್ಲೇ ಡ್ರಾ ಅಲ್ಲೇ ಬಹುಮಾನ ಎಂಬಂತಹ ಶಿಕ್ಷಾರ್ಹ ಕಾನೂನು ಬರಬೇಕು. ಇಲ್ಲದೇ ಹೋದಲ್ಲಿ, ಕೋರ್ಟುಗಳಲ್ಲಿ ತಿಂಗಳು, ವರ್ಷಗಳು ಕಳೆದು ನಂತರ ಬೇಲ್ ಮೇಲೆ ಹೊರ ಬರುವ ಇಂತಹವರುಗಳಿಗೆ ಶಿಕ್ಷೆಯ ಯಾವ ಭಯವೂ ಇರದು. ಮತ್ತು ಸಂತ್ರಸ್ತರಿಗೂ ಇದು ಸಮಾಧಾನ ತರುವಂತಹುದಲ್ಲ. ಈ ಬಗ್ಗೆ ನಮ್ಮ ಕಾನೂನು ತಜ್ಞರು ಬದಲಾವಣೆ ತರುವಲ್ಲಿ ಯೋಚಿಸುವರೇ ?!

–ವಿಜಯ್ ಹೆಮ್ಮಿಗೆ, ಮೈಸೂರು

■ ಅತ್ಯಾಚಾರಕ್ಕೆ ಅಂತ್ಯವಿಲ್ಲವೆ ?

ಮಾನ್ಯರೆ,

ಅತ್ಯಾಚಾರದ ಸುದ್ದಿಗಳ ಕೇಳಿ, ಓದಿ ನಡುಕ ಹುಟ್ಟುತ್ತಿದೆ. ನಡು ರಸ್ತೆಯಲ್ಲಿ ಹೆಣ್ಣು ಮಕ್ಕಳ ಅಪಹರಣ, ಶಾಲೆಯಲ್ಲಿ ವಿದ್ಯಾರ್ಥಿನಿಗಳ ಮೇಲೆ ಲೈಂಗಿಕ ಅತ್ಯಾಚಾರ(ಕೆಲವರು) ಕಾಲೇಜಿನ ಆವರಣದಲ್ಲಿ ವಿದ್ಯಾರ್ಥಿನಿಯರ ಕೊಲೆ,ಪಿ.ಜಿ.ಗಳಲ್ಲೂ ಕೊಲೆ ಈ ಸುದ್ದಿಗಳನ್ನು ನೋಡುತ್ತಾ ಹೋದರೆ ಹೆಣ್ಣು ಮಕ್ಕಳಿಗೆ ರಕ್ಷಣೆ ಇಲ್ಲವೇ ಇಂದಿನ ವಿದ್ಯಾರ್ಥಿಗಳು ಕ್ರೌರ್ಯ, ದ್ವೇಷ, ದುಶ್ಚಟಗಳಿಗೆ ದಾಸರಾಗಿ ಅನೇಕ ಹೇಯ ಕೃತ್ಯಗಳು ಎಲ್ಲೆಡೆ ನಡೆಯುತ್ತಿದೆ.ಇಂತಹ ಸಂದರ್ಭಗಳಲ್ಲಿ ಹೆಣ್ಣು ಮಕ್ಕಳು ವಿದ್ಯಾಭ್ಯಾಸವನ್ನು ಮಾಡುವುದೆಂತು.ಪೋಷಕರ ನೆಮ್ಮದಿಗೂ ಭಂಗ ತಂದಿದೆ ಇದಕ್ಕೆ ಕೊನೆಯಾಗಲು ಅತ್ಯಾಚಾರಿಗಳಿಗೆ ಶಿಕ್ಷೆ ಮತ್ತಷ್ಟು ಕಠಿಣವಾಗಬೇಕಿದೆ. ಅತ್ಯಾಚಾರಿಗಳಿಗೆ ಯಾರು ಜಾಮೀನನ್ನು ನೀಡಬಾರದು.ವಿದ್ಯಾರ್ಥಿಗಳಿಗೆ ಶಾಲಾ ಕಾಲೇಜುಗಳಲ್ಲಿ ಆಪ್ತ ಸಮಾಲೋಚನೆ ಏರ್ಪಡಿಸಿ ಸಮಾಜದಲ್ಲಿ ಉತ್ತಮ ಗುಣವನ್ನು ಅಳವಡಿಸಿಕೊಳ್ಳಲು ಸಹಕಾರಿಯಾಗಬೇಕು ಹೆಣ್ಣು ಮಕ್ಕಳ ವಿದ್ಯಾಭ್ಯಾಸವನ್ನು ಮುಂದುವರೆಸಲು ಪೋಷಕರು ಹಾಗೂ ಗುರುಗಳು ಸಹಕಾರ ನೀಡಬೇಕು.

–ಎಂ. ಎಸ್. ಉಷಾ ಪ್ರಕಾಶ್, ಲೇಖಕಿ ಹಾಗೂ ಕವಯಿತ್ರಿ, ಮೈಸೂರು.

■ ಭಾವ ಜೀವಿಗಳಾಗೋಣ

ಮಾನ್ಯರೆ,

ಪ್ರತಿಯೊಬ್ಬರ ಬದುಕಿನಲ್ಲೂ ಹುಟ್ಟಿನಿಂದ ಸಾವಿನವರೆಗೂ ಪರಿಚಯಸ್ಥರು ಹಾಗೂ ಸಂಬಂಧಿಗಳು ಜೊತೆಗೇ ಇರುವುದಿಲ್ಲ. ಪ್ರತಿಯೊಂದು ಹಂತದಲ್ಲೂ ಹಲವರು ಪರಿಚಯವಾಗುತ್ತಾರೆ. ಜೀವನ ಘಟ್ಟದಲ್ಲಿ ಪ್ರತಿ ವ್ಯಕ್ತಿ ಪರಿಚಯವಾದಾಗಲೂ ಆ ವ್ಯಕ್ತಿಯ ವ್ಯಕ್ತಿತ್ವ ಹಾಗೂ ವ್ಯಕ್ತಿಯಿಂದ ನಮಗೇನಾದರೂ ಪ್ರಯೋಜನವಿದೆಯೇ ಎಂಬುದರ ಮೇಲೆ ಅವಲಂಬಿತವಾಗಿರುತ್ತದೆ. ಪರಿಚಯವಾದ ವ್ಯಕ್ತಿಗಳೆಲ್ಲರೂ ನಮ್ಮ ಜೀವನದ ಕೊನೆವರೆಗೂ ಇರುವುದಿಲ್ಲ.

ಅವಶ್ಯಕತೆ ಹಾಗೂ ಅಗತ್ಯಗಳ ಆಧಾರದಲ್ಲಿ ಕೆಲವು ವರ್ಷಗಳೋ, ದಿನಗಳೋ ಇದ್ದು ದೂರಾಗುತ್ತಾರೆ. ರಕ್ತ ಸಂಬಂಧಿಗಳ ವಿಚಾರದಲ್ಲಿ ನಮ್ಮ ಆರ್ಥಿಕ ಪರಿಸ್ಥಿತಿಯ ಮೇಲೆ ನಮ್ಮನ್ನು ಗೌರವಿಸುವುದು, ಗುರುತಿಸುವುದು ವಾಡಿಕೆಯಾಗಿ ಬಿಟ್ಟಿದೆ. ಆರ್ಥಿಕವಾಗಿ ನಾವೆಷ್ಟು ಸಧೃಡರೋ ಅಷ್ಟು ಸಂಬಂಧಿಗಳು ನಮಗೆ ಸ್ಪಂದಿಸುತ್ತಾರೆ. ನಾವು ಆರ್ಥಿಕವಾಗಿ ಸಬಲರಲ್ಲ ಎಂದಾದರೆ ಮೂಲೆ ಗುಂಪಾಗಿಸಿ ತಮ್ಮ ಉಚಿತ ಬುದ್ಧಿಮಾತಿಗಳಿಗಷ್ಟೆ ನಮ್ಮನ್ನು ಸೀಮಿತಗೊಳಿಸುತ್ತಾರೆ.

ನಮ್ಮ ಸಂಬಂಧಿಗಳು ಹಾಗೂ ಪರಿಚಯಸ್ಥರು ನಮ್ಮಿಂದ ದೂರಾಗುವ ಸಮಯ ಬಂದಾಗ ನಮ್ಮ ಆತ್ಮಸಾಕ್ಷಿಗೆ ಮೋಸ ಮಾಡದೆ ವ್ಯಕ್ತಿಗಿಂತ ವ್ಯಕ್ತಿತ್ವಕ್ಕೆ ಬೆಲೆಕೊಟ್ಟು ಉಳಿಸಿಕೊಳ್ಳುವ ಪ್ರಯತ್ನ ಮಾಡಬೇಕು. ಮನಸ್ತಾಪವಿದ್ದರೆ ಬಗೆಹರಿಸಿಕೊಳ್ಳಬೇಕು. ಅವರು ನಮ್ಮಲ್ಲಿರೋ ಗುಣಕ್ಕೆ ಮನ್ನಣೆ ನೀಡುವವರಾದರೆ ನಾವು ಯಾವುದೇ ಕೆಟ್ಟ ಪರಿಸ್ಥಿತಿಯಲ್ಲಿ ಇದ್ದರೂ ಅವರು ನಮ್ಮಿಂದ ದೂರವಾಗುವುದಿಲ್ಲ. ಅವರು ನಮ್ಮ ಪರಿಸ್ಥಿತಿ ಹಾಗೂ ಆರ್ಥಿಕತೆ ಆಧಾರದಲ್ಲಿ ಗೌರವಿಸುವವರಾದರೆ ಅಂತಹವರ ಸ್ನೇಹಕ್ಕೆ ಯಾವುದೇ ಅರ್ಥವಿಲ್ಲ. ಅಂತಹವರಿಂದ ದೂರವಾದರೆ ಒಳಿತು.

ನಮ್ಮ ಬದುಕಿನಲ್ಲಿ ಪರಿಚಯವಾದವರು ಹಾಗೂ ಸಂಬಂಧಿಗಳು ನಮ್ಮ ಕೆಟ್ಟ ಪರಿಸ್ಥಿತಿಯಿಂದ ದೂರಾದರೆ ಅಂತಹವರನ್ನು ಮರಳಿ ಎಂದಿಗೂ ನಿಮ್ಮ ಬದುಕಿನಲ್ಲಿ ಆಹ್ವಾನಿಸಬೇಡಿ. ನಮ್ಮ ಬದುಕಿನಲ್ಲಿ ಯಾರೇ ಪರಿಚಯವಾದರೂ ಅದು ಋಣವೇ ಆಗಿರುತ್ತದೆ. ನಮ್ಮ ಜೊತೆ ಇದ್ದಷ್ಟು ದಿನ ಒಳಿತಿನ ಹಾದಿಯಲ್ಲಿ ಅವರೊಟ್ಟಿಗಿದ್ದು ಅವರು ನಿರ್ಗಮಿಸುವ ಮನಸ್ಥಿತಿಗೆ ಬಂದಾಗ ಬೀಳ್ಕೊಡುವ ಮನಸ್ಸು ನಮ್ಮದಾಗಲಿ. ಸಾವಿನವರೆಗೂ ಯಾರು ಬರುವುದಿಲ್ಲ. ನಮ್ಮ ಬದುಕಿನಲ್ಲಿ ಪ್ರತಿ ಪರಿಚಯಕ್ಕೂ ಒಂದು ಅರ್ಥ ನೀಡೋಣ. ಋಣವಿದ್ದಷ್ಟೇ ದಿನ ನಮ್ಮ ಬಂಧಗಳು ನಮ್ಮ ಜೊತೆಗಿರುತ್ತವೆ. ದೂರವಾದವರನ್ನು ದೂರದಿರಿ, ಸನಿಹ ನಿಂತು ಗೌರವಿಸುವ ಬಂಧಗಳನ್ನು ಆಹ್ವಾನಿಸೋಣ. ನಮ್ಮ ಆಲೋಚನಾ ತರಂಗಕ್ಕೆ ಕಿವಿಗೊಟ್ಟ ಜೀವಗಳಿಗೆ ಋಣಿಯಾಗಿರೋಣ.

ಹಾಗೆಯೇ ಸುಖ ಸುಮ್ಮನೆ ಯಾರ ಬದುಕಿನಲ್ಲೂ ಸುಳ್ಳಿನ ಭರವಸೆ, ಸ್ವಾರ್ಥಕ್ಕೆಂದು ತುಂಬಾ ಸನಿಹವಾಗಿ ದಿನ ಕಳೆದಂತೆ ಅವರ ಭಾವನೆಗಳೊಂದಿಗೆ ಬೆರೆತು, ದಿಢೀರನೇ ಅವರ ಬದುಕಿನಿಂದ ನಿರ್ಗಮಿಸುವ ಹಾಗೂ ಅವರನ್ನು ಕಡೆಗಣಿಸುವ ತಪ್ಪು ನಿರ್ಧಾರ ಎಂದಿಗೂ ಮಾಡಬಾರದು. ಬಂಧಗಳು ಬೆಸೆಯೋದು ರಕ್ತದಲ್ಲೋ, ರೂಪದಲ್ಲೋ, ಸಂಪತ್ತಿನಲ್ಲೋ ಅಲ್ಲವೇ ಅಲ್ಲ. ಬಂಧಗಳು ಬೆಸೆಯೋದು ನಮ್ಮ ಋಣದಿಂದ. ಆ ಋಣಕ್ಕೆ ನಮ್ಮ ಒಳಿತಿನ ಭಾವನಾತ್ಮಕ ಪನ್ನೀರನೆರೆದು ಗೌರವಿಸೋಣ. ಈ ಭೂಮಿಗೆ ನಾವೆಲ್ಲರೂ ಯಾತ್ರಿಕರಷ್ಟೆ, ಯಂತ್ರ, ತಂತ್ರದ ಬದುಕು ನಮ್ಮದಾಗದಿರಲಿ. ಭಾವ ಜೀವಿಗಳಾಗೋಣ.


–ಮಂಜೇಶ್ ದೇವಗಳ್ಳಿ , ಮೈಸೂರು

ನೀವು ಬಯಸದೇ ಬಂದ ಭಾಗ್ಯವನ್ನೆಲ್ಲಾ ಅನುಭವಿಸಿದ್ದೀರಿ ಈಗ 'ನಿರ್ಮಲ ಮುಡಾ ಭಾಗ್ಯ' ನೀಡಿ

ಮುಡಾ ಶುದ್ಧೀಕರಿಸಲು ಸಿಐಟಿಬಿ ಮಾಜಿ ಅಧ್ಯಕ್ಷ ಹಾಗೂ ಮಾಜಿ ಎಂಎಲ್‌ಸಿ ಡಿ.ಮಾದೇಗೌಡರಿಂದ ಮುಖ್ಯಮಂತ್ರಿ ಸಿದ್ದರಾಮಯ್ಯನವರಿಗೆ ಬಹಿರಂಗ ಪತ್ರ



ಮುಖ್ಯಮಂತ್ರಿ ಸಿದ್ದರಾಮಯ್ಯ



ಡಿ.ಮಾದೇಗೌಡರು, ಮಾಜಿ ಎಂಎಲ್‌ಸಿ

ಸನ್ಮಾನ್ಯ ಸಿದ್ದರಾಮಯ್ಯನವರೇ,

ನೀವು ಎರಡು ಬಾರಿ ಮುಖ್ಯಮಂತ್ರಿಗಳಾಗಿರುವುದು ಮೈಸೂರು ಜನರ ಸುಯೋಗ ಎಂದು ಭಾವಿಸಿದ್ದೇನೆ. ಕಳೆದ 42 ವರ್ಷಗಳ ರಾಜಕೀಯ ಜೀವನದಲ್ಲಿ ನೀವು ಉಪ್ಪುಂಡ ಕನ್ನಡ ನಾಡಿಗೆ ಋಣ ಸಂದಾಯ ಮಾಡುವ ಕಾಲ ಬಂದಿದೆ ಅಂತ ಭಾವಿಸುತ್ತೇನೆ. ಬಹುಶಃ ನಿಮ್ಮ ಸುದೀರ್ಘ ಅಧಿಕಾರಾವಧಿಯಲ್ಲಿ ಕಳೆದ ಒಂದು ವರ್ಷದಿಂದ ನೀವು ಅನುಭವಿಸಿದಷ್ಟು ತಳಮಳ ಇನ್ನಾವ ಅಧಿಕಾರಾವಧಿಯಲ್ಲು ಅನುಭವಿಸಲಿಲ್ಲ ಅಂತ ನನಗೆ ಅನ್ನಿಸುತ್ತದೆ. ಇದಕ್ಕೆ ಕಾರಣ **ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದಿಂದ ನಿಮ್ಮ ಪತ್ನಿ ಪಡೆದ 14 ನಿವೇಶನಗಳು**. ಇದು ನಿಮ್ಮ ಅಧಿಕಾರದ ಪ್ರಭಾವದಿಂದ ಪಡೆದು ಕೊಂಡಿದ್ದೆಂಬ ಆರೋಪ ಕೇಳಿ ಬಂದಿತು. ಇದಕ್ಕೆ ಪ್ರತಿಪಕ್ಷಗಳು ಬೆಂಗಳೂರಿನಿಂದ ಮೈಸೂರಿಗೆ ಪಾದಯಾತ್ರೆ ಮಾಡಿದರು.

ನಿಮ್ಮ ಕೊನೆ ಅಧಿಕಾರಾವಧಿಯಲ್ಲಾದರೂ ಜನ ಶಾಶ್ವತವಾಗಿ ನೆನೆಸಿಕೊಳ್ಳುವ ಕೆಲಸ ಮಾಡಿ

ಇದಕ್ಕೆ ಪ್ರತ್ಯುತ್ತರ ನೀಡಲು ನೀವು ಸಮಾವೇಶ ಮಾಡಿ ವೀರಾವೇಶದ ಮಾತಾಡಿದಿರಿ. ಮರುದಿನ ವಿರೋಧ ಪಕ್ಷಗಳು ಸಹ ಅದೇ ಮಹಾರಾಜ ಕಾಲೇಜು ಮೈದಾನದಲ್ಲಿ ಮುಡಾ ಹಗರಣದ ಬಗ್ಗೆ ಮಾತಾಡಿದರು. ನೀವೆಲ್ಲ ಪರಸ್ಪರ ಆರೋಪ-ಪ್ರತ್ಯಾರೋಪ ಮಾಡಿದ್ದರಿಂದ ಮುಡಾ ಸಮಸ್ಯೆ ಏನೂ ಬಗೆಹರಿಯಲಿಲ್ಲ. ನಿವೇಶನ ಬಯಸಿ ದಶಕಗಳಿಂದ ಕಾಯುತ್ತಿರುವ 84 ಸಾವಿರ ನಿವೇಶನಾಕಾಂಕ್ಷಿಗಳಿಗೂ ಯಾವುದೇ ಪ್ರಯೋಜನವಾಗಲಿಲ್ಲ. **ನಿಮ್ಮಿಬ್ಬರ ಸಮಾವೇಶದಿಂದ ಪ್ರಯೋಜನವಾಗಿದ್ದು ಶಾಮಿಯಾನ ಹಾಕಿದವರಿಗೆ ಮತ್ತು ಸಮಾವೇಶಕ್ಕೆ ಕರೆತಂದ ಬಾಡಿಗೆ ವಾಹನ ಮಾಲೀಕರಿಗೆ ಹಾಗೂ ಬಾಡಿಗೆ ಜನರಿಗೆ ಮಾತ್ರ**, ನೀವೇ ಹೇಳಿದಂತೆ ಇದು ನಿಮ್ಮ ಕೊನೆ ಅಧಿಕಾರಾವಧಿ. ಈಗಲಾದರೂ ಜನರು ನಿಮ್ಮನ್ನು ಶಾಶ್ವತವಾಗಿ ನೆನೆಯುವ ಕೆಲಸ ಮಾಡಿ. ಬಹು ಮುಖ್ಯವಾಗಿ ನಿಮ್ಮ ಹೆಸರಿಗೆ ಕಳಂಕ ಅಂಟಿಸಿರುವ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ಕೊಳೆ ತೊಳೆವ ಕೆಲಸ ಮಾಡಿ. ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದಲ್ಲಿರುವ ಎಲ್ಲಾ ಲೋಪದೋಷಗಳನ್ನು ಸರಿಪಡಿಸಿ, ಅರ್ಹ ಫಲಾನುಭವಿಗಳು ನೆಮ್ಮದಿಯ ಸೂರು ಕಾಣುವಂತೆ ಮಾಡಿ. ವಿರೋಧಿಗಳು ನಿಮ್ಮನ್ನು '**ಮಜಾ ವಾದಿ**' ಅಂತ ಏನೇ ಹೇಳಲಿ, ನಾನು ನಿಮ್ಮನ್ನು 50 ವರ್ಷಗಳಿಂದ ಕಂಡಂತೆ ನೀವು '**ಸಮಾಜವಾದಿ**'ಯಾಗೇ ಇನ್ನೂ ಇದ್ದೀರಿ.

ಭೂ ಕಬಳಿಕೆದಾರರಿಗೆ ಬಿಸಿ ಮುಟ್ಟಿಸುವ ಶಕ್ತಿ ನಿಮಗಿದೆ

ಬಡ ಜನರಿಗೆ ಮಿಡಿಯುವ ಗುಣ ನಿಮ್ಮಲ್ಲಿ ಇನ್ನೂ ಉಳಿದಿವೆ ಅಂತ ನಂಬಿದ್ದೇನೆ. ಮುಖ್ಯಮಂತ್ರಿಯಾಗಿ ನಿಮಗೆ ಈಗ ಅಧಿಕಾರದತ್ತವಾಗಿ ಇರುವ ಪ್ರಭಾವ ಬಳಸಿ, ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರವನ್ನು ಶುದ್ಧೀಕರಿಸಿ, ಅದನ್ನು ಉಳಿಸಿ ಬೆಳೆಸುವ ಪುಣ್ಯ ಕೆಲಸ ಮಾಡಿ. ಇಲ್ಲಿವರೆಗೆ ಮುಡಾದಲ್ಲಿ ಆಗಿರುವ ಎಲ್ಲಾ ಹಗರಣಗಳನ್ನು ತೊಡೆದು, ಉತ್ತಮ ರೀತಿಯಲ್ಲಿ ಜನಸ್ನೇಹಿಯಾಗಿ ಬೆಳೆಸುವಂಥ ಕಟ್ಟುನಿಟ್ಟಿನ ನಿಯಮಗಳನ್ನು ಜಾರಿಗೆ ತನ್ನಿ. ಈ ನಿಯಮಗಳು ಮೈಸೂರಿಗೆ ಮಾತ್ರ ಸೀಮಿತವಾಗದೆ ಬೆಂಗಳೂರು ನಗರಾಭಿವೃದ್ಧಿ ಪ್ರಾಧಿಕಾರ ಸೇರಿದಂತೆ ನಾಡಿನ ಎಲ್ಲಾ ನಗರ-ಪಟ್ಟಣ ಅಭಿವೃದ್ಧಿ ಪ್ರಾಧಿಕಾರ ಮತ್ತು ಮಂಡಳಿಗಳಲ್ಲು ಕಟ್ಟುನಿಟ್ಟಿನ ಕಾನೂನು ಅನ್ವಯವಾಗುವಂತೆ ಮಾಡಿ. ಅಕ್ರಮ ಭೂಕಬಳಿಕೆದಾರರ ವಿರುದ್ಧ ಕಠಿಣ ಕಾನೂನು ಬಿಸಿ ಮುಟ್ಟಿಸಲು ನೀವು ಸಮರ್ಥರಿದ್ದೀರಿ. ಅಕ್ರಮ ನಿವೇಶನಾಕಾಂಕ್ಷಿಗಳನ್ನು ಹಿಮ್ಮೆಟ್ಟಿಸುವ ಶಕ್ತಿ ಮತ್ತು ಯುಕ್ತಿ ಎರಡೂ ನಿಮ್ಮಲ್ಲಿದೆ.

1600 ರೂ.ಗಳಿಗೆ 20x30 ನಿವೇಶನ ನೀಡಿದ್ದೆ

ನಾನು ಸಿಐಟಿಬಿ ಅಧ್ಯಕ್ಷನಾಗಿದ್ದಾಗ ರೂಪಿಸಿದ 'ಆಶಾಮಂದಿರ' ಯೋಜನೆ ಅಡಿ 38 ಸಾವಿರಕ್ಕೂ ಹೆಚ್ಚು ನಿವೇಶನ ಮತ್ತು ಮನೆ ಜನರಿಗೆ ನೀಡಿದ್ದೆ. 1987-88ರ ಸಾಲಿನಲ್ಲಿ ಕೇವಲ ಒಂದು ಸಾವಿರದ ಆರು ನೂರು ರೂಪಾಯಿಗಳಿಗೆ 20x30 ಅಡಿಯ 20 ಸಾವಿರಕ್ಕೂ ಹೆಚ್ಚು ನಿವೇಶನವನ್ನು ಬಡವರಿಗೆ ಹಂಚಿದ್ದೆ. ಮೈಸೂರಿನಲ್ಲಿ ನಾನು ಮಾಡಿದ 'ಆಶಾಮಂದಿರ' ಯೋಜನೆ ಯಶಸ್ಸು ದೇಶಾದ್ಯಂತ ಹೆಸರಾಗಿದ್ದನ್ನು ಕಂಡು ಅಂದಿನ ನಗರಾಭಿವೃದ್ಧಿ ಮಂತ್ರಿ ಎಂ.ಚಂದ್ರಶೇಖರ್ ಅವರು 1988ರಲ್ಲೇ ಕರ್ನಾಟಕದ ಎಲ್ಲಾ ನಗರಾಭಿವೃದ್ಧಿಗಳಲ್ಲು 'ಆಶಾಮಂದಿರ' ಮಾದರಿಯಲ್ಲಿ ಬಡವರಿಗೆ ನಿವೇಶನ ಹಂಚುವ ನಿರ್ಣಯ ತೆಗೆದುಕೊಂಡಿದ್ದರು. ಇದಕ್ಕಾಗಿ ಶಿವಮೊಗ್ಗದಲ್ಲಿ ಸಮಾವೇಶ ಸಹ ನಡೆಸಿದ್ದು ನಿಮಗೆ ನೆನಪಿರಬಹುದು.

ಆಶಾಮಂದಿರ 36 ವರ್ಷದಿಂದ ನೆನೆಗುದಿಗೆ ಬಿದ್ದಿದೆ

ರೈತರಿಗೆ ಅನ್ಯಾಯವಾಗದಂತೆ ಮತ್ತು ಜನರಿಗೆ ನಿವೇಶನ ಖರೀದಿಸಲು ಕಷ್ಟವಾಗದಂತೆ ಹಾಗೂ ಜಮೀನು ನೀಡುವ ರೈತರು ಮತ್ತು ನಿವೇಶನ ಖರೀದಿಸುವ ಜನರ ಮಧ್ಯೆ ನಗರಾಭಿವೃದ್ಧಿಗೂ ನಷ್ಟವಾಗದಂತೆ ನಿಯಮ ರೂಪಿಸಲಾಗಿತ್ತು. ದುರಾದೃಷ್ಟವಶಾತ್ ಜನತಾ ಸರ್ಕಾರ ಬಿದ್ದು ಹೋಗಿದ್ದರಿಂದ ಕ್ರಾಂತಿಕಾರಕ 'ಆಶಾಮಂದಿರ' ಯೋಜನೆ ರಾಜ್ಯಾದ್ಯಂತ ವಿಸ್ತರಿಸಲು ಸಾಧ್ಯವಾಗಲಿಲ್ಲ. ಇದು ಸಾಧ್ಯವಾಗಿದ್ದರೆ, **ಮೈಸೂರಿನ ಜನರಂತೆ ರಾಜ್ಯದ ಎಲ್ಲಾ ನಿರ್ವಸಿತ ಮತ್ತು ನಿರ್ಗತಿಕ ಜನ ಕೇವಲ ಒಂದು ಸಾವಿರ ರೂಪಾಯಿಗೆ 20x30 ಅಡಿ ನಿವೇಶನ ಪಡೆದು ನೆಮ್ಮದಿಯ ಸೂರು ಕಟ್ಟಿಕೊಳ್ಳುತ್ತಿದ್ದರು**. ಇಂಥ ಬಡಜನರನ್ನು ಉದ್ಧರಿಸುವ ಯೋಜನೆ ಕಾರ್ಯಗತವಾಗಿದ್ದರೆ ರಾಜ್ಯದಲ್ಲೆ ದೊಡ್ಡ ಕ್ರಾಂತಿಯಾಗುತ್ತಿತ್ತು. ಇಂದು ಕರ್ನಾಟಕದಲ್ಲಿ ನಿರ್ವಸಿತ ಜನರೇ ಇರುತ್ತಿರಲಿಲ್ಲ. ಇಂಥ ಜನೋಪಕಾರಿ 'ಆಶಾಮಂದಿರ' ಯೋಜನೆ ಕಳೆದ 36 ವರ್ಷಗಳಿಂದ ನೆನೆಗುದಿಗೆ ಬಿದ್ದಿದೆ. ನಿಮ್ಮ ಅಧಿಕಾರಾವಧಿಯಲ್ಲಾದರೂ ಬಡವರು ಸ್ವಂತ ಮನೆ ಹೊಂದಿ, ನೆಮ್ಮದಿಯಾಗಿ ಬದುಕುವ ಅವಕಾಶ ಕಲ್ಪಿಸಿಕೊಡುವ ಯೋಜನೆ ಜಾರಿಗೆ ಬರಲು ಶ್ರಮಿಸಿ.

> ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ಶುದ್ಧೀಕರಣಕ್ಕಾಗಿ ಅಲ್ಲಿ ನಡೆದಿರುವ ಎಲ್ಲಾ ಹಗರಣಗಳನ್ನು ಬಯಲಿಗೆ ತರಲು ಮಾಜಿ ಲೋಕಾಯುಕ್ತ ಸಂತೋಷ್ ಹೆಗ್ಡೆ ಅವರಂಥ ದಕ್ಷ ನಿವೃತ್ತ ನ್ಯಾಯಾಧೀಶರಿಂದ ತನಿಖೆ ನಡೆಸಿ. ನಿಮ್ಮ ಪತ್ನಿ ಹೆಸರಿನಲ್ಲಿ ಪಡೆದುಕೊಂಡಂಥ 50:50 ಅನುಪಾತದಲ್ಲಿ ಮುಡಾ ನಿವೇಶನಗಳನ್ನು ಅವ್ಯಾಹತವಾಗಿ ಕಬಳಿಸಲಾಗಿದೆ. ಇದನ್ನೆಲ್ಲ ಮರಳಿ ಪಡೆದು, ಸುಮಾರು ನಾಲ್ಕಾರು ದಶಕಗಳಿಂದ ಮುಡಾ ನಿವೇಶನ ಬಯಸಿ ಅರ್ಜಿ ಸಲ್ಲಿಸಿರುವ 84 ಸಾವಿರಕ್ಕೂ ಹೆಚ್ಚು ಅರ್ಹ ಫಲಾನುಭವಿಗಳಿಗೆ ನಿವೇಶನ ಹಂಚಿ. ಸ್ವಂತ ಮನೆ ಇಲ್ಲದೆ, ಬಾಡಿಗೆ ಮನೆಯಲ್ಲೇ ದಿನ ದೂಡುತ್ತಿರುವ ಬಡ ಜನರ ನೆತ್ತಿಗೊಂದು ಸೂರು ನೀಡುವ ಉತ್ತಮ ವಾತಾವರಣ ರೂಪಿಸಿ.

ಸಾಧ್ವಿಮಣಿ ನಿಮ್ಮ ಪತ್ನಿ ಹೆಸರು ಮುಡಾ ಕಳಂಕದಲ್ಲಿ ಸಿಲುಕಿದ್ದು ನೋವು ತಂದಿದೆ

ನನಗೆ ಬಹಳ ನೋವಾಗುತ್ತಿರುವುದು ನಿಮ್ಮ ಪತ್ನಿ ಶ್ರೀಮತಿ ಪಾರ್ವತಿ ಹೆಸರು ಮುಡಾ ಪ್ರಕರಣದಲ್ಲಿ ಬಂದಿರುವುದಕ್ಕೆ. ನಾನು ಕಂಡಂತೆ ಪರಮ ಸಾಧ್ವಿಮಣಿ. 1975ರಲ್ಲಿ ಮೈಸೂರಿನ ಮರಿಮಲ್ಲಪ್ಪ ಶಾಲೆ ಮಗ್ಗುಲಲ್ಲಿರುವ ಯಾದವ ಸಂಘದ ಕಲ್ಯಾಣ ಮಂಟಪದಲ್ಲಿ ನಿಮ್ಮಿಬ್ಬರ ವಿವಾಹ ನೆರವೇರಿತು. ನಿಮ್ಮ ಆಹ್ವಾನದ ಮೇಲೆ ಮದುವೆಗೆ ಬಂದು ನಿಮಗೆ ಆಶೀರ್ವಾದ ಮಾಡಿದ್ದೆ. ಪಾರ್ವತಿಯಂಥ ಗುಣವಂತೆ ಕೈಹಿಡಿದ ನಂತರ ಅದೃಷ್ಟದ ಗೆರೆ ನಿಮ್ಮ ಭವಿಷ್ಯದ ಮೇಲೆ ಬರೆಯಿತು ಎಂದರೆ ತಪ್ಪಾಗುವುದಿಲ್ಲ. ನಿಮ್ಮ ರಾಜಕೀಯ ಜಂಜಾಟದಲ್ಲಿ ಶ್ರೀಮತಿ ಪಾರ್ವತಿ ಅವರು ಸುಖ ಸಂಸಾರ ನಡೆಸಲು ಸಾಧ್ಯವಾಗಲಿಲ್ಲ ಅನ್ನೋದು ನಿಮಗೂ ಗೊತ್ತು. ಹೀಗಿದ್ದೂ, ನಿಮ್ಮ ಧರ್ಮಪತ್ನಿ ಯಾವತ್ತೂ ಒಂದು ಮಾತೂ ನೊಂದು ಆಡಲಿಲ್ಲ. ಅಂಥ ಸಾತ್ವಿಕ ಹೆಣ್ಣು ಮಗಳು ಮುಖ್ಯಮಂತ್ರಿ ಪತ್ನಿಯಾಗಿ ನಿಮ್ಮೊಂದಿಗೆ ಯಾವ ಸಾರ್ವಜನಿಕ ಕಾರ್ಯಕ್ರಮಗಳಲ್ಲು ಕಾಣಿಸಿಕೊಳ್ಳಲಿಲ್ಲ. ಅಂಥ ಗೌರವದ ಅವಕಾಶ ಸಿಗಲಿಲ್ಲವಲ್ಲಾ ಅಂತ ಯಾವತ್ತೂ ಕೊರಗದೆ, ಯಾರೊಂದಿಗೂ ಹೇಳಿಕೊಳ್ಳದೆ, ನಿಮ್ಮ ಏಳಿಗೆಗಾಗಿ ನಿತ್ಯ ದೇವರಲ್ಲಿ ಪ್ರಾರ್ಥಿಸುತ್ತಿದ್ದರು. ಅಂತಹವರಿಗೆ ನೀವು ಮುಡಾ ಕಳಂಕ ಹಚ್ಚಿದಿರಲ್ಲ, ಇದು ಸರಿಯೇ?

ಅಧಿಕಾರದ ಕಡೇ ಅವಧಿಯಲ್ಲಿ ಪತ್ನಿಯ ಕಾನೂನು ಕಟಕಟೆಗೆ ದೂಡಿದ್ದೀರಿ

ಪ್ರಾಣಕ್ಕಿಂತ ಮಾನ ದೊಡ್ಡದೆಂದು ಬಾಳಿದ ಕನ್ನಡ ಕುಲ ನಾರಿಯರ ದೊಡ್ಡ ಪರಂಪರೆಯೇ ನಮ್ಮಲ್ಲಿ ಇದೆ. ಅಂಥ ಕನ್ನಡಕುಲ ನಾರಿಯರ ಸಾಲಿನಲ್ಲಿ ನಿಲ್ಲುವ ನಿಮ್ಮ ಪತ್ನಿ ಶ್ರೀಮತಿ ಪಾರ್ವತಿ ಮೇಲೆ ನಿಮ್ಮ ಕಡೆ ಅಧಿಕಾರಾವಧಿಯಲ್ಲಿ ಅಕ್ರಮ ನಿವೇಶನ ಪಡೆದ ಆರೋಪ ಬಂದಿರುವುದು ನನಗೆ ಬಹಳ ನೋವಾಗುತ್ತಿದೆ. ಇನ್ನೂ ನಿಮಗೆ ಏನಾಗುತ್ತಿದೆಯೋ ಗೊತ್ತಿಲ್ಲ. ನಿಮಗೆ ನಿಮ್ಮ ಪತ್ನಿ ಮೇಲೆ ಕಿಂಚಿತ್ತು ಕಾಳಜಿ ಇದ್ದಿದ್ದರೆ, ಆ 14 ಮುಡಾ ನಿವೇಶನಗಳನ್ನು ಹಿಂತಿರುಗಿಸಿ ಆರೋಪ ಮುಕ್ತರಾಗುತ್ತಿದ್ದಿರಿ. ಹೀಗಾಗಿದ್ದರೆ, ರಾಜ್ಯಪಾಲರು ಮುಡಾ ಪ್ರಕರಣದಲ್ಲಿ ಪ್ರಾಸಿಕ್ಯೂಷನ್‌ಗೆ ಅನುಮತಿ ಕೊಡುವ ಸನ್ನಿವೇಶ ಸೃಷ್ಟಿಯಾಗುತ್ತಿರಲಿಲ್ಲ. ಇದರ ವಿರುದ್ಧ ನೀವು ನ್ಯಾಯಾಲಯದ ಮೊರೆ ಹೋಗುವ ಸಂದರ್ಭವೂ ಉದ್ಭವಿಸುತ್ತಿರಲಿಲ್ಲ. ಆದರೆ, ನೀವು ಮುಡಾ ಪ್ರಕರಣವನ್ನು ಸಮರ್ಥಿಸಿಕೊಂಡು ಈಗ ಕಾನೂನಿನ ಕುಣಿಕೆಗೆ ನೀವು ಸಿಲುಕಿದ್ದಲ್ಲದೆ, ಏನೂ ಅರಿಯದ ಪತ್ನಿ ಪಾರ್ವತಿಯನ್ನೂ ಕಾನೂನಿನ ಕಟಕಟೆಗೆ ದೂಡಿದ್ದೀರಿ.

ನೀವು ಗುಡುಗಿದ್ದರೆ ಮುಡಾ ಶುದ್ಧವಾಗುತ್ತಿತ್ತು

ಇದು ನಿಮ್ಮ ಆತ್ಮ ಸಾಕ್ಷಿಗಾದರೂ ಸರಿ ಅನ್ನಿಸುತ್ತದೆಯೇ? ನಿಮ್ಮ ಪತ್ನಿಗೆ 2021ರಲ್ಲಿ 50:50 ಅನುಪಾತದಡಿ 14 ನಿವೇಶನಗಳನ್ನು ಬಿಜೆಪಿ ಅಧಿಕಾರಾವಧಿಯಲ್ಲೇ ಕೊಟ್ಟಿರಲಿ. ಹಿರಿಯ ರಾಜಕಾರಣಿಯಾದ ನಿಮ್ಮ ಗಮನಕ್ಕೆ ಬಂದಾಗ, ಇದೊಂದು ಅಕ್ರಮ ಅಂತ ನಿಮಗೆ ಅನ್ನಿಸಲಿಲ್ಲವೇ? ಇಂಥ ಅಕ್ರಮ ನಡೆಯುತ್ತಿರುವ ಮುಡಾ ಅಧಿಕಾರಿಗಳ ವಿರುದ್ಧ ನೀವು ಬಹಿರಂಗವಾಗಿ ಗುಡುಗಿದ್ದರೆ, ನೀವು ದೊಡ್ಡ ನಾಯಕರಾಗುತ್ತಿದ್ದಿರಿ. ಅಂದೇ ಮುಡಾ ಅಕ್ರಮಗಳನ್ನೆಲ್ಲಾ ತೊಡೆದು, ಸರಿಯಾದ ಕಾನೂನು ಕ್ರಮಗಳಿಂದ ಮುಡಾ ಕೊಳೆ ತೊಳೆಯಬಹುದಿತ್ತು. ಮೈಸೂರು ನಗರ ವಿಶ್ವ ಮಟ್ಟದಲ್ಲಿ ಸುಂದರವಾಗಿ ಬೆಳೆಯಬೇಕೆಂಬ ಆಶಯದಿಂದ ನಾಲ್ವಡಿ ಕೃಷ್ಣರಾಜೇಂದ್ರ ಒಡೆಯರ್ ಸ್ಥಾಪಿಸಿದ **'ಮೈಸೂರು ನಗರಾಭಿವೃದ್ಧಿ ಸಂಸ್ಥೆ'** ಮತ್ತಷ್ಟು ಜನಸ್ನೇಹಿಯಾಗುತ್ತಿತ್ತು. ನಾಲ್ವಡಿ ಕೃಷ್ಣರಾಜ ಒಡೆಯರ್ ನಾಡಿಗೆ ಮಾಡಿದ ಉಪಕಾರ ನೆನೆದು ಜನ ಈಗಲೂ 'ಕೃಷ್ಣರಾಜ ಭೂಪ-ಮನೆಮನೆ ದೀಪ' ಅಂತ ಹಾಡಿ ಹೊಗಳುತ್ತಾರೆ. ನಿತ್ಯ ದೇವರಂತೆ ಪೂಜಿಸುತ್ತಾರೆ. ನೀವೂ ಸಹ ಮುಖ್ಯಮಂತ್ರಿಯಾಗಿ ನಾಡಿನ ಬಡ ಜನರ ಉದ್ಧಾರಕ್ಕೆ ಶ್ರಮಿಸಿದರೆ ಖಂಡಿತ ಜನ ನಿಮ್ಮನ್ನು ಸಹ ನೂರಾರು ವರ್ಷ ನೆನೆದು ದೀಪ ಹಚ್ಚುತ್ತಾರೆ.

ನೀವು ಅದೃಷ್ಟವಂತ ರಾಜಕಾರಣಿ

ಈ ರಾಜ್ಯದ ಜನ ಕಂಡಂತೆ; ಕರ್ನಾಟಕದ ರಾಜಕೀಯದ ಇತಿಹಾಸದಲ್ಲೇ ನಿಮ್ಮಂಥ ಅದೃಷ್ಟವಂತ ರಾಜಕಾರಣಿ ಬೇರ್ಯಾರೂ ಇಲ್ಲ. 1982ರಲ್ಲಿ ತಾಲೂಕು ಮಂಡಳಿ ಸದಸ್ಯರಾಗಿದ್ದ ನೀವು 1983ರಲ್ಲಿ ಶಾಸಕರಾಗುತ್ತೇನೆಂಬ ಕನಸನ್ನು ಸಹ ನೀವು ಕಂಡಿರಲಿಲ್ಲ. ಹಾಗಿತ್ತು ಆಗಿನ ನಿಮ್ಮ ಆರ್ಥಿಕ ಪರಿಸ್ಥಿತಿ. ಬಹುಶಃ **ಚಾಮುಂಡೇಶ್ವರಿ ಕ್ಷೇತ್ರದ ಆಗಿನ ಶಾಸಕ ಜಯದೇವ ರಾಜ ಅರಸ್ 1982ರ ಡಿಸೆಂಬರ್‌ನಲ್ಲಿ ಎಂ.ಎಲ್.ಸಿ ಚಿನ್ನಸ್ವಾಮಿ ಮಗಳ ಮದುವೆಯಲ್ಲಿ ದುರಹಂಕಾರ ಪ್ರದರ್ಶಿಸದಿದ್ದರೆ, ನಿಮ್ಮನ್ನು ಪಕ್ಷೇತರರಾಗಿ ನಿಲ್ಲಿಸಿ ಗೆಲ್ಲಿಸುವ ಪ್ರಮೇಯವೇ ಚಾಮುಂಡೇಶ್ವರಿ ಕ್ಷೇತ್ರದ ಪ್ರಭಾವಿ ರಾಜಕೀಯ ನಾಯಕರಾದ ಮಾಜಿ ಶಾಸಕ ಕೆಂಪೀರೇಗೌಡ, ಹಿರಿಯ ವಕೀಲ ಮಾವಿನಹಳ್ಳಿ ಸಿದ್ದೇಗೌಡರಿಗೆ ಬರುತ್ತಿರಲಿಲ್ಲ. ಹೀಗಾಗಿದ್ದರೆ, ಸಿದ್ದರಾಮಯ್ಯನವರ ಹೆಸರು ಕರ್ನಾಟಕ ರಾಜಕೀಯದ ಇತಿಹಾಸದಲ್ಲೇ ದಾಖಲಾಗುತ್ತಿರಲಿಲ್ಲ.**

ಒಕ್ಕಲಿಗ ನಾಯಕರ ಬೆಳೆಸಬಾರದೆಂಬ ದೇವೇಗೌಡರ ನಿಲುವು ನಿಮಗೆ ವರದಾನವಾಯ್ತು

ಒಕ್ಕಲಿಗ ನಾಯಕರು ತಮ್ಮ ಸರಿಸಮನಾಗಿ ಬೆಳೆಯಬಾರದೆಂಬ ಅಂದಿನ ಜನತಾಪಕ್ಷದ ರಾಜ್ಯಾಧ್ಯಕ್ಷ ಹೆಚ್.ಡಿ. ದೇವೇಗೌಡರು ಚಾಮುಂಡೇಶ್ವರಿ ಕ್ಷೇತ್ರದ ಜನತಾಪಕ್ಷದ ಪ್ರಬಲ ಅಭ್ಯರ್ಥಿಗಳಾದ ಮಾಜಿ ಶಾಸಕ ಕೆಂಪೀರೇಗೌಡ, ಹಿರಿಯ ವಕೀಲ ಮಾವಿನಹಳ್ಳಿ ಸಿದ್ದೇಗೌಡರಿಗೆ ಟಿಕೆಟ್ ನೀಡಲಿಲ್ಲ. ಇವರ ಬದಲು ದುರ್ಬಲ ಅಭ್ಯರ್ಥಿಯಾದ ಚಿಕ್ಕೇಗೌಡನ ಹುಂಡಿಯ ತಮ್ಮಯ್ಯನಿಗೆ ಜನತಾಪಕ್ಷದ ಟಿಕೆಟ್ ನೀಡಿದ್ದರು. ಇದರಿಂದ ಚುನಾವಣೆಗೂ ಮೊದಲೇ ತಾವು ಗೆದ್ದೇ ಎಂಬ ದುರಹಂಕಾರದಲ್ಲಿ ಕಾಂಗ್ರೆಸ್ ಅಭ್ಯರ್ಥಿ ಜಯದೇವರಾಜ ಅರಸ್ ಮೈಸೂರಿನ ಜೆಎಲ್‌ಬಿ ರಸ್ತೆಯಲ್ಲಿರುವ ಶಾರದಾ ನಿಕೇತನ ಛತ್ರದಲ್ಲಿ ನಡೆಯುತ್ತಿದ್ದ ಎಂಎಲ್‌ಸಿ ಚಿನ್ನಸ್ವಾಮಿ ಮಗಳ ಮದುವೆಯಲ್ಲಿ ನೆಪ ಮಾತ್ರಕ್ಕೂ ಮಾಜಿ ಶಾಸಕ ಕೆಂಪೀರೇಗೌಡ, ಹಿರಿಯ ವಕೀಲ ಮಾವಿನಹಳ್ಳಿ ಸಿದ್ದೇಗೌಡರನ್ನು ಮಾತಾಡಿಸದೆ ಮುಖ ತಿರುಗಿಸಿಕೊಂಡು ಹೋದರು.

ಸಂಪತ್ತಿಗೆ ಸವಾಲಾಕಿ ನಿಮ್ಮನ್ನು ಗೆಲ್ಲಿಸಿದ್ದೆವು

ಆಗ ಶಾರದಾ ನಿಕೇತನ ಛತ್ರದಲ್ಲೇ ಒಕ್ಕಲಿಗ ಮುಖಂಡರು 1983ರ ವಿಧಾನಸಭಾ ಚುನಾವಣೆಯಲ್ಲಿ ಮಾಜಿ ಮುಖ್ಯಮಂತ್ರಿ ದೇವರಾಜ ಅರಸ್ ಸಂಬಂಧಿಯಾದ ಹಿನಕಲ್ ಸಾಹುಕಾರರೆನಿಸಿದ ಜಯದೇವರಾಜ ಅರಸ್‌ರನ್ನು ಸೋಲಿಸಲೇಬೇಕೆಂದು ಶಪಥ ಮಾಡಿದರು. **ಸಾಹುಕಾರಿಕೆ ದರ್ಪದಲ್ಲಿ ಮೆರೆಯುತ್ತಿದ್ದ ಜಯದೇವರಾಜ ಅರಸ್ ಮೇಲೆ 'ಸಂಪತ್ತಿಗೆ ಸವಾಲ್' ಹಾಕಿದ ಮಾಜಿ ಶಾಸಕ ಕೆಂಪೀರೇಗೌಡ, ಹಿರಿಯ ವಕೀಲ ಮಾವಿನಹಳ್ಳಿ ಸಿದ್ದೇಗೌಡ, ಈಗಿನ ಶಾಸಕ ಜಿ.ಟಿ. ದೇವೇಗೌಡ, ಚಿಕ್ಕನಹಳ್ಳಿ ಶಿವರಾಮ್ ಮತ್ತು ನಾನು, ಕೂರ್ಗಳ್ಳಿ ಕೆಂಚೇಗೌಡನ ಮೂಲಕ ನಿಮ್ಮನ್ನು ಕರೆಸಿಕೊಂಡು ವಿಧಾನಸಭೆ ಚುನಾವಣೆಗೆ ಪಕ್ಷೇತರರಾಗಿ ನಿಲ್ಲಿಸಿದೆವು. ಈ ಸಂದರ್ಭದಲ್ಲಿ 'ಸಿದ್ದರಾಮಯ್ಯರನ್ನು ನಂಬಬೇಡಿ. ಅವನು ಮಹಾ ಘಟಿಂಗ' ಅಂತ ಮೊದಲಿಗೆ ಎಚ್ಚರಿಸಿದ್ದೆ ಕೆಂಪವೀರಯ್ಯ.** ಇದ್ಯಾವುದನ್ನೂ ಲೆಕ್ಕಿಸದೆ, ಅವರೆಲ್ಲ ತನು-ಮನ-ಧನ ಸಹಾಯ ಮಾಡಿದರು. ಬದಲಾದ ರಾಜಕೀಯ ಲೆಕ್ಕಾಚಾರದಲ್ಲಿ ಹಾಲಿ ಜನತಾ ಪಕ್ಷದ ಅಧಿಕೃತ ಅಭ್ಯರ್ಥಿ ತಮ್ಮಯ್ಯರನ್ನು ಸಹ ಚುನಾವಣೆಯಲ್ಲಿ ಸ್ವಯಂ ನಿವೃತ್ತಿಗೊಳಿಸಿ, ಪಕ್ಷೇತರ ಅಭ್ಯರ್ಥಿಯಾದ ನಿಮ್ಮನ್ನೇ ನಾವೆಲ್ಲ ಒಗ್ಗಟ್ಟಿನಿಂದ ಬೆಂಬಲಿಸಿ, ಗೆಲ್ಲಿಸಿದೆವು.

ಮುಖ್ಯಮಂತ್ರಿ ರಾಮಕೃಷ್ಣ ಹೆಗ್ಡೆ ಅಲ್ಪಸಂಖ್ಯಾತ ಸರ್ಕಾರಕ್ಕೆ ಬೆಂಬಲ ಕೊಟ್ಟು ಮೊದಲ ಬಾರಿ ರಚಿತವಾದ 'ಕನ್ನಡ ಕಾವಲು ಸಮಿತಿ'ಗೆ ಅಧ್ಯಕ್ಷರಾದಿರಿ. ಹೀಗ್ಗೆ 42 ವರ್ಷಗಳ ನಿಮ್ಮ ಸುದೀರ್ಘ ರಾಜಕೀಯ ಜೀವನದಲ್ಲಿ ಹಲವು ಬಾರಿ ಮಂತ್ರಿಯಾದಿರಿ, ಎರಡು ಬಾರಿ ಉಪಮುಖ್ಯಮಂತ್ರಿ ಆದಿರಿ, ಎರಡು ಬಾರಿ ಮುಖ್ಯಮಂತ್ರಿ ಆಗಿದ್ದೀರಾ. ನೀವು ಬಯಸದೆ ಬಂದ ಭಾಗ್ಯವನ್ನೆಲ್ಲ ಅನುಭವಿಸಿದಿರಿ. ಆ ಭಾಗ್ಯ ಜನರಿಗೂ ಸಿಗಲಿ ಅಂತ ಭಾಗ್ಯಗಳ ಸುರಿಮಳೆಯನ್ನೇ ಕೊಟ್ಟಿರಿ. ಅಕ್ಕಿ ಭಾಗ್ಯ-ಲಕ್ಷ್ಮಿ ಭಾಗ್ಯ, ಅಂತ ಎಂತೆಂಥದ್ದೋ ಭಾಗ್ಯ ಕೊಟ್ಟಿದ್ದೀರಾ; ಇದರ ಜೊತೆಗೆ '**ಮನೆಭಾಗ್ಯ**'ವನ್ನೂ ನೀಡಿ. ಈಗ ನೀವು ನೀಡುತ್ತಿರುವ ಎಲ್ಲಾ ಭಾಗ್ಯವನ್ನು ಜನ ಮರೆಯಬಹುದು. ಆದರೆ 'ಮನೆ ಭಾಗ್ಯ'ವನ್ನ ತಲತಲಾಂತರದವರೆಗೆ ಜನ ಮರೆಯುವುದಿಲ್ಲ. ಇದಕ್ಕಾಗಿ ಮೊದಲಿಗೆ ಮೈಸೂರು ನಗರಾಭಿವೃದ್ಧಿ ಸ್ವಚ್ಛಗೊಳಿಸಲು '**ನಿರ್ಮಲ ಮುಡಾ ಭಾಗ್ಯ**' ವನ್ನು ನೀಡಿ ಅಂತ ಮೈಸೂರಿನ ಜನರ ಪರವಾಗಿ ನಿಮ್ಮಲ್ಲಿ ಕಳಕಳಿಯಿಂದ ವಿನಂತಿಸುತ್ತೇನೆ.

ನ್ಯಾ.ಸಂತೋಷ್ ಹೆಗಡೆ ಅವರಿಂದ ತನಿಖೆ ನಡೆಸಿ

ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ಶುದ್ಧೀಕರಣಕ್ಕಾಗಿ ಅಲ್ಲಿ ನಡೆದಿರುವ ಎಲ್ಲಾ ಹಗರಣಗಳನ್ನು ಬಯಲಿಗೆ ತರಲು **ಮಾಜಿ ಲೋಕಾಯುಕ್ತ ಸಂತೋಷ್ ಹೆಗ್ಡೆ ಅವರಂಥ ದಕ್ಷ ನಿವೃತ್ತ ನ್ಯಾಯಾಧೀಶರಿಂದ ತನಿಖೆ ನಡೆಸಿ**. ನಿಮ್ಮ ಪತ್ನಿ ಹೆಸರಿನಲ್ಲಿ ಪಡೆದು ಕೊಂಡಂಥ 50:50 ಅನುಪಾತದಲ್ಲಿ ಮುಡಾ ನಿವೇಶನಗಳನ್ನು ಅವ್ಯಾಹತವಾಗಿ ಕಬಳಿಸಲಾಗಿದೆ. ಇದನ್ನೆಲ್ಲ ಮರಳಿ ಪಡೆದು, ಸುಮಾರು ನಾಲ್ಕಾರು ದಶಕಗಳಿಂದ ಮುಡಾ ನಿವೇಶನ ಬಯಸಿ ಅರ್ಜಿ ಸಲ್ಲಿಸಿರುವ 84 ಸಾವಿರಕ್ಕೂ ಹೆಚ್ಚು ಅರ್ಹ ಫಲಾನುಭವಿಗಳಿಗೆ ನಿವೇಶನ ಹಂಚಿ. ಸ್ವಂತ ಮನೆ ಇಲ್ಲದೆ, ಬಾಡಿಗೆ ಮನೆಯಲ್ಲೇ ದಿನದೂಡುತ್ತಿರುವ ಬಡ ಜನರ ನೆತ್ತಿಗೊಂದು ಸೂರು ನೀಡುವ ಉತ್ತಮ ವಾತಾವರಣ ರೂಪಿಸಿ. ಇದಕ್ಕಾಗಿ ಅರ್ಹ ಫಲಾನುಭವಿಗಳಿಗಷ್ಟೆ ಮುಡಾ ನಿವೇಶನಗಳು ದೊರೆಯುವಂಥ ಕಟ್ಟುನಿಟ್ಟಿನ ಕಾನೂನು ಮಾಡಿ. ಈ ಕಾನೂನು ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರವಲ್ಲದೆ, ಬೆಂಗಳೂರು ನಗರಾಭಿವೃದ್ಧಿ ಪ್ರಾಧಿಕಾರ ಸೇರಿದಂತೆ ರಾಜ್ಯದ ಎಲ್ಲಾ ನಗರ-ಪಟ್ಟಣ ಅಭಿವೃದ್ಧಿ ಪ್ರಾಧಿಕಾರಕ್ಕೂ ಅನ್ವಯವಾಗುವಂತೆ ಮಾಡಿ. ಬಡ ಜನ ತಮ್ಮ ಕೊನೆ ಉಸಿರು ಇರುವವರೆಗೂ ನಿಮ್ಮನ್ನು ಮರೆಯುವುದಿಲ್ಲ.

ನಿಮ್ಮ 42 ವರ್ಷಗಳ ರಾಜಕೀಯ ಜೀವನದಲ್ಲಿ ನೀವು ಅನುಭವಿಸಿದ ಅಧಿಕಾರ ಸುಖದ ಋಣ ತೀರಿಸಬೇಕು ಎಂಬ ಅಂತಿಮ ಇಚ್ಛೆ ನಿಮಗಿದ್ದರೆ, ನಿಮಗೆ ಸಿಕ್ಕಿರುವ ಅದೃಷ್ಟವೋ-ದೈವದತ್ತ ಕೊಡುಗೆಯೋ ಆದ ಮುಖ್ಯಮಂತ್ರಿ ಅಧಿಕಾರವನ್ನು ದಿಟ್ಟವಾಗಿ ಬಳಸಿ. ನಿಮ್ಮ ಪರಮೋಚ್ಚ ಅಧಿಕಾರದಿಂದ ಭೂಗಳ್ಳರ ವಿರುದ್ಧ ಕಠಿಣ ಕಾನೂನು ಜಾರಿಗೆ ತಂದು, ಬಡ ಜನರು ನೆಮ್ಮದಿಯ ಸೂರು ಕಟ್ಟಿಕೊಳ್ಳಲು ನೆರವಾಗಿ ಎಂದು ತಮ್ಮಲ್ಲಿ ಸವಿನಯದಿಂದ ಕೇಳಿಕೊಳ್ಳುತ್ತೇನೆ.

–ಇಂತಿ ತಮ್ಮ ವಿಶ್ವಾಸಿ

ಡಿ.ಮಾದೇಗೌಡ,

ವಿಧಾನಪರಿಷತ್ ಮಾಜಿ ಸದಸ್ಯರು ಹಾಗೂ ಮಾಜಿ ಅಧ್ಯಕ್ಷರು, ಮೈಸೂರು ನಗರ ವಿಶ್ವಸ್ಥ ಮಂಡಳಿ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ಒಂದನೇ ಪುಟದಿಂದ

ಹೈಕಮಾಂಡ್ ಅಭಯ

ಶಾಸಕಾಂಗ ಪಕ್ಷದ ಸಭೆ ನಿರ್ಣಯ ಹಾಗೂ ಮುಡಾದಿಂದ ತಮ್ಮ ಪತ್ನಿ ಪಡೆದಿರುವ 14 ನಿವೇಶನಗಳಿಗೆ ಸಂಬಂಧಪಟ್ಟ ದಾಖಲೆಗಳು, ರಾಜ್ಯಪಾಲರಿಗೆ ಸಂಪುಟ ಸಭೆ ನೀಡಿದ್ದ ಸಲಹೆ, ಪ್ರಾಸಿಕ್ಯೂಷನ್‌ಗೆ ರಾಜ್ಯಪಾಲರು ನೀಡಿದ್ದ ಅನುಮತಿ ಮುಂತಾದ ಎಲ್ಲಾ ವಿವರಗಳಿಗೂ ಸಂಬಂಧಿಸಿದ ದಾಖಲೆ ಸಮೇತ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸಂಪುಟ ಸಹೋದ್ಯೋಗಿಗಳಾದ ಡಿಸಿಎಂ ಡಿ.ಕೆ.ಶಿವಕುಮಾರ್, ಸಚಿವರಾದ ಡಾ. ಜಿ.ಪರಮೇಶ್ವರ್, ಕೆ.ಜೆ.ಜಾರ್ಜ್, ಡಾ. ಹೆಚ್.ಸಿ.ಮಹದೇವಪ್ಪ, ಪ್ರಿಯಾಂಕ್ ಖರ್ಗೆ, ಜಮೀರ್ ಅಹಮದ್, ಶಾಸಕರೂ ಆದ ತಮ್ಮ ಕಾನೂನು ಸಲಹೆಗಾರ ಎ.ಎಸ್.ಪೊನ್ನಣ್ಣ ಅವರನ್ನೊಡಗೂಡಿ ದೆಹಲಿಗೆ ತೆರಳಿ, ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ, ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ.ವೇಣುಗೋಪಾಲ್, ಕರ್ನಾಟಕ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ ಅವರನ್ನು ಭೇಟಿ ಮಾಡಿ ವಿವರಣೆ ನೀಡಿದ ನಂತರ ಪಕ್ಷದ ವರಿಷ್ಠರು ಸಿದ್ದರಾಮಯ್ಯನವರಿಗೆ ಅಭಯ ನೀಡಿ ಕಾನೂನು ಹಾಗೂ ರಾಜಕೀಯ ಹೋರಾಟ ಮುಂದುವರೆಸುವಂತೆ ಸೂಚಿಸಿದ್ದಾರೆ. ಹಾಗೂ ಇಂಡಿಯಾ ಒಕ್ಕೂಟದ ಪಕ್ಷಗಳ ಮುಖಂಡರನ್ನೊಳಗೊಂಡ ನಿಯೋಗ ರಾಜ್ಯಪಾಲರನ್ನು ಭೇಟಿ ಮಾಡಿ ಕರ್ನಾಟಕ ರಾಜ್ಯಪಾಲರ ವರ್ತನೆ ಬಗ್ಗೆ ದೂರು ಸಲ್ಲಿಸುವ ಕುರಿತು ಚಿಂತನೆ ನಡೆಸುವುದಾಗಿ ತಿಳಿಸಿದ್ದಾರೆ ಎನ್ನಲಾಗಿದೆ. ಈ ವೇಳೆ ಸಿದ್ದರಾಮಯ್ಯನವರು ಹೈಕಮಾಂಡ್‌ಗೆ ಧನ್ಯವಾದ ತಿಳಿಸಿದ್ದಾರೆ ಎಂದು ಮೂಲಗಳು ಹೇಳಿವೆ. ಪಕ್ಷದ ವರಿಷ್ಠರ ಭೇಟಿ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ರಾಜ್ಯಪಾಲರ ಮೂಲಕ ಕರ್ನಾಟಕ ಸರಕಾರವನ್ನು ಅಭದ್ರಗೊಳಿಸುವ ಪ್ರಯತ್ನವನ್ನು ಮಾಡಲಾಗುತ್ತಿದೆ. ಇದು ಕೇವಲ ಮುಖ್ಯಮಂತ್ರಿಗಳ ವಿರುದ್ಧ ಮಾಡುತ್ತಿರುವ ಷಡ್ಯಂತ್ರವಲ್ಲ, ಕಾಂಗ್ರೆಸ್ ಕೊಟ್ಟಿರುವ ಐದು ಗ್ಯಾರಂಟಿಗಳ ವಿರುದ್ಧ ನಡೆಸುತ್ತಿರುವ ಹುನ್ನಾರ. ಈ ಬಗ್ಗೆ ಹೈಕಮಾಂಡ್‌ಗೆ ಮನದಟ್ಟು ಮಾಡಿಕೊಡಲಾಗಿದೆ. ನೀವು ಬಡವರ ಪರವಾಗಿ ಕೆಲಸ ಮುಂದುವರಿಸಿ ಎಂದು ಹೈಕಮಾಂಡ್ ನಮಗೆ ಅಭಯವನ್ನು ನೀಡಿದೆ. ಇಡೀ ರಾಜ್ಯ ಮತ್ತು ರಾಷ್ಟ್ರ ಕಾಂಗ್ರೆಸ್ ಮುಖ್ಯಮಂತ್ರಿ ಸಿದ್ದರಾಮಯ್ಯನವರ ಜೊತೆಗಿದೆ ಎಂಬುದು ಖಚಿತ ಎಂದು ಹೇಳಿದರು.

ಇದೇ ವೇಳೆ ಮಾತನಾಡಿದ ಕರ್ನಾಟಕ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ, ಕರ್ನಾಟಕ ರಾಜ್ಯಪಾಲರು ಸಂವಿಧಾನದ ವಿರುದ್ಧ ಪ್ರಾಸಿಕ್ಯೂಷನ್‌ಗೆ ಅನುಮತಿ ಕೊಟ್ಟಿದ್ದಾರೆ. ಅದು ಕಾನೂನಿಗೆ ವಿರುದ್ಧವಾಗಿದೆ. ಅದರ ವಿರುದ್ಧ ನ್ಯಾಯಾಲಯದಲ್ಲಿ ಹಾಗೂ ಜನರ ಮುಂದೆ ಹೋರಾಟ ನಡೆಸುತ್ತೇವೆ. ಈಗಾಗಲೇ ಜನರು ನಮ್ಮೊಂದಿಗೆ ಇದ್ದಾರೆ. ರಾಷ್ಟ್ರಪತಿಗಳನ್ನು ಭೇಟಿಯಾಗುವ ಆಯ್ಕೆಯೂ ನಮ್ಮ ಮುಂದಿದೆ ಎಂದರು. ಇದೇ ವೇಳೆ ಮುಖ್ಯಮಂತ್ರಿ ಸಿದ್ದರಾಮಯ್ಯ ಮಾತನಾಡಿ, ನಾವು ಕೋರ್ಟ್‌ನಲ್ಲಿ ಹೋರಾಟ ಮುಂದುವರಿಸುತ್ತೇವೆ. ಹೈಕಮಾಂಡ್‌ಗೆ ನನ್ನ ಧನ್ಯವಾದಗಳು ಎಂದರು.

ಬದಲಾವಣೆ ವಿಚಾರ ಪ್ರಸ್ತಾಪ

ಇದೇ ವೇಳೆ ಚನ್ನಪಟ್ಟಣ ಉಪ ಚುನಾವಣೆ ನಂತರ ಸಂಪುಟ ಪುನರ್ ರಚನೆ ಮಾಡುವುದು ಒಳ್ಳೆಯದು ಎಂಬ ಅಭಿಪ್ರಾಯ ಸಭೆಯಲ್ಲಿ ಕೇಳಿಬಂದಿದೆ. ಈ ಅಭಿಪ್ರಾಯವನ್ನು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಸೇರಿದಂತೆ ಎಲ್ಲರೂ ಒಪ್ಪಿದ್ದಾರೆ ಎನ್ನಲಾಗಿದೆ. ಮತ್ತೊಂದೆಡೆ ಡಿ.ಕೆ.ಶಿವಕುಮಾರ್ ಅವರು ಬಿಬಿಎಂಪಿ ಹಾಗೂ ಸ್ಥಳೀಯ ಸಂಸ್ಥೆಗಳ ಚುನಾವಣೆ ತಮ್ಮ ಅಧ್ಯಕ್ಷತೆಯಲ್ಲೇ ನಡೆದರೆ ಪಕ್ಷಕ್ಕೆ ಅನುಕೂಲವಾಗುತ್ತದೆ ಎಂದು ಹೇಳಿದ್ದಾರಂತೆ. ಒಟ್ಟಾರೆ ರಾಜ್ಯದಲ್ಲಿ ಸಂಪುಟ ಪುನರ್ ರಚನೆ ಹಾಗೂ ಕೆಪಿಸಿಸಿ ಅಧ್ಯಕ್ಷರ ಬದಲಾವಣೆ ಆಗಲಿದೆ ಎಂಬ ಮಾತುಗಳು ಎಐಸಿಸಿ ಮೂಲದಿಂದ ತಿಳಿದು ಬಂದಿದೆ.

ಭೂಮಿ ಕಂಪಿಸಿದ ಅನುಭವ

ಆದರೆ, ಭೂ ಕಂಪನದ ಬಗ್ಗೆ ಖಚಿತ ಮಾಹಿತಿ ಲಭ್ಯವಾಗಿಲ್ಲ. ಯಾವುದೇ ಭೂ ಕಂಪನ ಮಾಪಕ ಕೇಂದ್ರಗಳಲ್ಲಿ ಭೂಮಿ ಕಂಪಿಸಿದ ಬಗ್ಗೆ ದಾಖಲೆಯಾಗಿಲ್ಲ ಎಂದು ಬೆಂಗಳೂರಿನ ಹಿರಿಯ ನಿವೃತ್ತ ಭೂವಿಜ್ಞಾನಿ ಡಾ.ಎಚ್.ಎಸ್.ಎಂ. ಪ್ರಕಾಶ್ ತಿಳಿಸಿದ್ದಾರೆ. ದಾಖಲೆಗಳ ಪ್ರಕಾರ ಇದೇ ಅವಧಿಯಲ್ಲಿ ಹರಿಯಾಣ ಮತ್ತು ಮಣಿಪುರ ಭಾಗಗಳಲ್ಲಿ ಅಲ್ಪ ಪ್ರಮಾಣದ ಭೂ ಕಂಪನ ಉಂಟಾಗಿರುವುದಾಗಿ ಮಾಹಿತಿ ಲಭ್ಯವಾಗಿದೆ.

ಕಂಪನಾಂಕ ದಾಖಲಾಗಿಲ್ಲ: ಇನ್ನು ಕೊಡಗು ಜಿಲ್ಲೆಯ ಹಾರಂಗಿ ಜಲಾಶಯದಲ್ಲಿ ಭೂ ಕಂಪನ ದಾಖಲೆ ಮಾಡುವ ಸಿಸ್ಮೋಗ್ರಫಿ ಮೀಟರ್‌ನಲ್ಲೂ ಯಾವುದೇ ಕಂಪನಾಂಕ ದಾಖಲಾಗಿಲ್ಲ. ಅಲ್ಲದೆ, ನೆರೆಯ ಗೊರೂರು ಜಲಾಶಯದ ಭೂ ಕಂಪನ ಅಳತೆ ಮಾಪಕದಲ್ಲೂ ಕಂಪನಗಳು ದಾಖಲಾಗಿಲ್ಲ ಎಂದು ಮೂಲಗಳು ತಿಳಿಸಿವೆ.

ಎರಡು ಸಾವಿರ ಪುಟಗಳ ಚಾರ್ಜ್‌ಶೀಟ್ ಸಲ್ಲಿಕೆ

ಇನ್ನೊಂದು ಕಡೆ ಹೆಚ್.ಡಿ. ರೇವಣ್ಣ ವಿರುದ್ಧ ಲೈಂಗಿಕ ದೌರ್ಜನ್ಯ ಪ್ರಕರಣಕ್ಕೆ ಸಂಬಂಧಿಸಿದಂತೆ ಕೂಡ ಚಾರ್ಜ್‌ಶೀಟ್ ಸಲ್ಲಿಸಲಾಗಿದೆ. ಹೊಳೆನರಸೀಪುರ ಟೌನ್ ಠಾಣೆಯಲ್ಲಿ ಕೇಸ್ ದಾಖಲಾಗಿದ್ದವು.

ಹೊಳೆನರಸೀಪುರದ ಲೈಂಗಿಕ ದೌರ್ಜನ್ಯ ಪ್ರಕರಣ, ಕೆ.ಆರ್.ನಗರದ ಕಿಡ್ನ್ಯಾಪ್ ಪ್ರಕರಣದಲ್ಲಿ ಅರೆಸ್ಟ್ ಆಗಿದ್ದ ಪ್ರಜ್ವಲ್‌ರನ್ನು ಎಸ್‌ಐಟಿ ಕಸ್ಟಡಿಗೆ ಪಡೆದಿತ್ತು. ಈ ಎರಡೂ ಕೇಸ್‌ಗಳಲ್ಲಿ ವಿಚಾರಣೆ ಮುಗಿದಿರುವ ಕಾರಣಕ್ಕೆ ಪ್ರಜ್ವಲ್ ರೇವಣ್ಣರನ್ನು ನ್ಯಾಯಾಂಗ ಬಂಧನಕ್ಕೆ ನೀಡಲಾಗಿತ್ತು.

ಇನ್ನು ಇತ್ತೀಚೆಗೆ ಅತ್ಯಾಚಾರ ಪ್ರಕರಣಕ್ಕೆ ಸಂಬಂಧಿಸಿದಂತೆ ಪ್ರಜ್ವಲ್ ರೇವಣ್ಣನಿಂದ ಸಲ್ಲಿಸಲಾಗಿದ್ದ ನಿರೀಕ್ಷಣಾ ಜಾಮೀನು ಕೋರಿ ಅರ್ಜಿಯನ್ನು ಬೆಂಗಳೂರಿನ ಜನಪ್ರತಿನಿಧಿಗಳ ವಿಶೇಷ ಕೋರ್ಟ್ ನ್ಯಾಯಾಧೀಶ ಸಂತೋಷ್ ಗಜಾನನ ಭಟ್ ವಜಾ ಮಾಡಿದ್ದಾರೆ. ಸದ್ಯ ಪರಪ್ಪನ ಅಗ್ರಹಾರ ಜೈಲಿನಲ್ಲಿರುವ ಪ್ರಜ್ವಲ್ ಸೆರೆವಾಸ ಮುಂದುವರೆಯಲಿದೆ.

ಇನ್ನು ಮೈಸೂರು ಜಿಲ್ಲೆಯ ಕೆಆರ್ ನಗರ ಮಹಿಳೆಯ ಅಪಹರಣ ಪ್ರಕರಣಕ್ಕೆ ಸಂಬಂಧಿಸಿದಂತೆ ಹೆಚ್.ಡಿ. ರೇವಣ್ಣ ಮತ್ತು ಭವಾನಿ ರೇವಣ್ಣ ಸೇರಿದಂತೆ 9 ಆರೋಪಿಗಳಿಗೆ ಬೆಂಗಳೂರಿನ 42ನೇ ಎಸಿಎಂಎಂ ಕೋರ್ಟ್‌ನಿಂದ ಸಮನ್ಸ್ ಜಾರಿ ಮಾಡಲಾಗಿದೆ.

ಬೆಲೆ ಬಾಳುವ ನಿವೇಶನ ಮಂಜೂರು

ಶಿಫಾರಸು ಮಾಡಿದ್ದರಿಂದ 2020ರ ನವೆಂಬರ್ 6 ಮತ್ತು ನವೆಂಬರ್ 20ರಂದು ನಡೆದ ಸಭೆಗಳಿಗೆ ಪ್ರಸ್ತಾವನೆ ಮಂಡಿಸಿ ವಿಷಯ ಸಂಖ್ಯೆ 5ರಂತೆ ಭೂ ಸ್ವಾಧೀನಪಡಿಸದೇ ಉಪಯೋಗಿಸಿಕೊಂಡಿರುವ ಕಾರಣ ಪರಿಹಾರವಾಗಿ ಅಭಿವೃದ್ಧಿಪಡಿಸಿದ ಬಡಾವಣೆಯಲ್ಲಿ ಶೇ.50ರಷ್ಟು ಜಾಗ ನೀಡಲು ಸಭೆ ನಿರ್ಣಯಿಸಿತ್ತು.

ಈ ಸಂಬಂಧ ಖಾತೆದಾರನಾದ ವಿ.ವೆಂಕಟೇಶ್‌ರಿಂದ ದೇವನೂರು ಗ್ರಾಮದ ಸರ್ವೆ ನಂ.81/1ರ 1.21 ಎಕರೆ ಜಮೀನನ್ನು 2021ರ ಜೂನ್ 17ರಂದು ಪರಿತ್ಯಾಜನಾ ಪತ್ರ (ರಿ ಲಿಂಕ್ವಿಷ್ ಡೀಡ್) ಮೂಲಕ ಪ್ರಾಧಿಕಾರದ ಹೆಸರಿಗೆ ನೋಂದಾಯಿಸಿಕೊಂಡು ಸ್ವತ್ತಿಗೆ ಬದಲಾಗಿ 2015ರ ಫೆಬ್ರವರಿ 11ರ ಸರ್ಕಾರದ ಆದೇಶ ಮತ್ತು ಮುಡಾ ನಿರ್ಣಯದಂತೆ ವಿ.ವೆಂಕಟೇಶ್ ಅವರಿಗೆ ಪರಿಹಾರವಾಗಿ ಅಭಿವೃದ್ಧಿಪಡಿಸಿದ ಬಡಾವಣೆಯಲ್ಲಿ ಶೇ.50:50ರ ಅನುಪಾತದಲ್ಲಿ 16,607 ಚದರ ಅಡಿ ವಿಸ್ತೀರ್ಣದ ನಿವೇಶನವನ್ನು ಅಂದಿನ ಆಯುಕ್ತ ಡಿ.ಬಿ.ನಟೇಶ್ ಅವರು 2021ರ ಜೂನ್ 17ರಂದು ಅಧಿಕೃತ ಜ್ಞಾಪನ ಹೊರಡಿಸಿ ಮಂಜೂರು ಮಾಡಿದ್ದಾರೆ.

ಎಸ್.ತಾರಾ ಅವರು ನಿಜಗುಣ ಹಾಗೂ ಹರೀಶ್‌ರಿಂದ ಸದರಿ ಜಾಗ ಖರೀದಿಸಿದ ಶುದ್ಧ ಕ್ರಯ ಪತ್ರ ನೋಂದಣಿ ವೇಳೆ ಕೆ.ಆರ್.ಮೊಹಲ್ಲಾದ ಬಾಲಚಂದ್ರ ಜೊತೆಗೆ ಜಯನಗರದ ಎಲ್.ಚೌಡಪ್ಪ ಎಂಬುವರೂ ಸಾಕ್ಷಿದಾರರಾಗಿ ಸಹಿ ಮಾಡಿದ್ದರು.

ಅಲ್ಲದೇ **'ಮಾನ್ಯ ಎಲ್.ನಾಗೇಂದ್ರ, ವಿಧಾನಸಭಾ ಸದಸ್ಯರು, ದೇವನೂರು ಗ್ರಾಮದ ಸರ್ವೆ ನಂ.81/1ರ 1.21 ಎಕರೆ ಜಮೀನಿನಲ್ಲಿ ಪ್ರಾಧಿಕಾರವು ಬಡಾವಣೆ ನಿರ್ಮಿಸಿ ನಿವೇಶನ ಹಂಚಿಕೆ ಮಾಡಿರುವುದರಿಂದ ಶೇ.50 ಬದಲಿ ಜಾಗವನ್ನು ಪರ್ಯಾಯ ಜಾಗವನ್ನು ಪರಿಹಾರವಾಗಿ ನೀಡಲು ಕೋರಿ ಪ್ರಾಧಿಕಾರದ ಸಭೆಯಲ್ಲಿ ಈ ಪ್ರಸ್ತಾವನೆಯನ್ನು ವಿಷಯವಾಗಿ ಸೇರ್ಪಡೆಗೊಳಿಸಬೇಕೆಂದು ಕೋರಿರುತ್ತಾರೆ' ಎಂದು ಮುಡಾ ಕಚೇರಿ ಟಿಪ್ಪಣಿ ಹಾಳೆಯ ಪುಟ ಸಂಖ್ಯೆ 01, ಕಡತ ಸಂಖ್ಯೆ LAQ:CR:64/2020-21ರಲ್ಲಿ ನಮೂದಾಗಿರುವುದನ್ನು ಇಲ್ಲಿ ಗಮನಿಸಬಹುದಾಗಿದೆ.**

ಸ್ವಾಧೀನಕ್ಕೊಳಪಡಿಸಿ ಭೂ ಮಾಲೀಕರಿಗೆ ಪರಿಹಾರ ನೀಡದೇ ಬಡಾವಣೆಗೆ ಬಳಸಿಕೊಂಡ 2015ರ ಹಿಂದಿನ ಪ್ರಕರಣಗಳ ಸಂಬಂಧ ಬರುವ ಅರ್ಜಿಗಳಿಗೆ ಅಂದಿನ ಬೆಲೆಯನ್ನು ಬಡ್ಡಿ ಸಮೇತ ಪರಿಹಾರವನ್ನು ಮುಡಾ ಸಭೆ ಅನುಮೋದನೆ ಪಡೆದು ಪಾವತಿಸಬೇಕು. ಒಂದು ವೇಳೆ ಪರಿಹಾರಕ್ಕೆ ಒಪ್ಪದಿದ್ದಲ್ಲಿ ಭೂ ಮಾಲೀಕರು ನ್ಯಾಯಾಲಯದ ಮೊರೆ ಹೋಗಿ ಕೊಡಿಸಿದ ನಿರ್ದೇಶನದನ್ವಯ ಪ್ರಾಧಿಕಾರ ಕ್ರಮ ವಹಿಸಬೇಕೇ ಹೊರತು, ಮುಡಾ ಆಯುಕ್ತರೇ ಈ ಹಿಂದಿನ ಪ್ರಕರಣಗಳಿಗೂ ಶೇ.50:50ರ ಅನುಪಾತದಡಿ ಅಭಿವೃದ್ಧಿಪಡಿಸಿದ ಬಡಾವಣೆಗಳಲ್ಲಿ ಬೆಲೆ ಬಾಳುವ ನಿವೇಶನಗಳನ್ನು ಮಂಜೂರು ಮಾಡುವುದು ನಿಯಮ ಬಾಹಿರ ಎಂದು ಕೂಡಾ ಕಾಯ್ದೆ ಹೇಳುತ್ತದೆ. ಆದರೆ ಈ ಪ್ರಕರಣದಲ್ಲಿ ಭೂಮಿ ಕಳೆದುಕೊಂಡವರಿಗೆ ಬದಲಾಗಿ ಖರೀದಿದಾರನ ಹೆಸರಿಗೆ ನಿವೇಶನ ಮಂಜೂರು ಮಾಡಿರುವುದು ಹಾಗೂ ಸಮಾನಾಂತರ ಬಡಾವಣೆ ಬಿಟ್ಟು ಬೇರೆ ಕಡೆ ಅಭಿವೃದ್ಧಿಗೊಂಡಿರುವ ಪ್ರತಿಷ್ಠಿತ ಬಡಾವಣೆಯಲ್ಲಿ ಬೆಲೆ ಬಾಳುವ ನಿವೇಶನ ಮಂಜೂರು ಮಾಡಿರುವುದು ನಿಯಮ ಬಾಹಿರ ಎಂಬುದು ಸ್ಪಷ್ಟವಾಗಿ ತಿಳಿಯುತ್ತದೆ.

ಪಿಓಪಿ, ಬಣ್ಣ ಲೇಪಿತ ಗೌರಿ-ಗಣೇಶ ವಿಗ್ರಹ ತಯಾರಿಕೆ, ಮಾರಾಟಕ್ಕೆ ನಿರ್ಬಂಧ

ಇಂತಹ ಮೂರ್ತಿಗಳ ಜಲಮೂಲಗಳಲ್ಲಿ ವಿಸರ್ಜನೆ ನಿಷಿದ್ಧ

ಮೈಸೂರು, ಆ.23(ಎಸ್‌ಬಿಡಿ)– ಪ್ಲಾಸ್ಟರ್ ಆಫ್ ಪ್ಯಾರಿಸ್(ಪಿಓಪಿ) ಮತ್ತು ಬಣ್ಣ ಲೇಪಿತ ವಿಗ್ರಹಗಳ ತಯಾರಿಕೆ, ಮಾರಾಟ ಹಾಗೂ ಯಾವುದೇ ಜಲ ಮೂಲಗಳಲ್ಲಿ ವಿಸರ್ಜಿಸುವುದನ್ನು ನಿಷೇಧಿಸಲಾಗಿದೆ. ಈ ಆದೇಶವನ್ನು ಉಲ್ಲಂಘಿಸಿದವರ ವಿರುದ್ಧ ಕಾನೂನು ರೀತಿ ಕ್ರಮ ತೆಗೆದುಕೊಳ್ಳಲಾಗುವುದು ಎಂದು ಅಪರ ಜಿಲ್ಲಾಧಿಕಾರಿ ಡಾ.ಪಿ.ಶಿವರಾಜು ತಿಳಿಸಿದ್ದಾರೆ.



ಗೌರಿ–ಗಣೇಶ ಹಬ್ಬದ ಹಿನ್ನೆಲೆಯಲ್ಲಿ ಅಪರ ಜಿಲ್ಲಾಧಿಕಾರಿ ಡಾ.ಪಿ.ಶಿವರಾಜು ಶುಕ್ರವಾರ ಅಧಿಕಾರಿಗಳ ಸಭೆ ನಡೆಸಿದರು.

ಗೌರಿ–ಗಣೇಶ ಹಬ್ಬ ಸಮೀಪಿಸುತ್ತಿರುವ ಹಿನ್ನೆಲೆಯಲ್ಲಿ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಶುಕ್ರವಾರ ಅಧಿಕಾರಿಗಳೊಂದಿಗೆ ಸಭೆ ನಡೆಸಿದ ಅವರು, ಮಣ್ಣಿನ ಗೌರಿ ಮತ್ತು ಗಣೇಶ ಮೂರ್ತಿಗಳನ್ನು ಪೂಜಿಸುವ ಮೂಲಕ ಹಬ್ಬವನ್ನು ಪರಿಸರ ಸ್ನೇಹಿಯಾಗಿ ಆಚರಿಸಿ, ಸಂಭ್ರಮಿಸೋಣ ಎಂದು ಮನವಿ ಮಾಡಿದರು.

ಅಧಿಕಾರಿಗಳು ಪ್ರತಿದಿನ ಗಸ್ತು ತಿರುಗಿ ನಿಷೇಧಿತ ಪಿಓಪಿ ಗಣೇಶ ಮೂರ್ತಿಗಳಿರುವ ಬಗ್ಗೆ ದೂರು ಅಥವಾ ಮಾಹಿತಿ ದೊರೆತರೆ ಸಂಬಂಧಪಟ್ಟವರ ವಿರುದ್ಧ ಕ್ರಮಕೈಗೊಳ್ಳಬೇಕು. ಪಿಓಪಿ ವಿಗ್ರಹಗಳೆಂದು ಖಚಿತಪಡಿಸಿಕೊಂಡ ನಂತರ ಧಾರ್ಮಿಕ ಭಾವನೆಗಳಿಗೆ ಧಕ್ಕೆಯಾಗದಂತೆ ನಿಯಮಾನುಸಾರ ಕ್ರಮ ಜರುಗಿಸಬೇಕು ಎಂದು ಸೂಚಿಸಿದರು.

ಸ್ಥಳೀಯ ಸಂಸ್ಥೆಗಳು ಜಾಹೀರಾತು ಮತ್ತು ಜನ ಜಾಗೃತಿ ಕಾರ್ಯಕ್ರಮಗಳ ಮೂಲಕ ಪಿಓಪಿ ಹಾಗೂ ರಾಸಾಯನಿಕ ಬಣ್ಣಗಳಿಂದ ಜಲಮೂಲಕ ಕಲುಷಿತವಾಗುವ ಬಗ್ಗೆ ಸಾರ್ವಜನಿಕರಲ್ಲಿ ಅರಿವು ಮೂಡಿಸಬೇಕು. ವಿಗ್ರಹ ತಯಾರಕರು, ಮಾರಾಟಗಾರರು ಮತ್ತು ಗಣಪತಿ ಪ್ರತಿಷ್ಠಾಪಿಸುವ ಸಂಘ ಸಂಸ್ಥೆಗಳಿಗೆ ಮಾಹಿತಿ ನೀಡಬೇಕು. ಸಾರ್ವಜನಿಕ ಸ್ಥಳದಲ್ಲಿ ಮೂರ್ತಿ ಪ್ರತಿಷ್ಠಾಪನೆಗೆ ಅನುಮತಿ ನೀಡಲು ಪೊಲೀಸ್ ಇಲಾಖೆ, ಮೈಸೂರು ಮಹಾನಗರ ಪಾಲಿಕೆ, ಜಿಲ್ಲಾ ನಗರಾಭಿವೃದ್ಧಿ ಕೋಶ ಮತ್ತು ಅಗ್ನಿಶಾಮಕದಳ ಇಲಾಖೆಗಳನ್ನೊಳಗೊಂಡ ಏಕಗವಾಕ್ಷಿ ಸಮಿತಿಯನ್ನು ರಚಿಸಿ, ಅರ್ಜಿ ಸಲ್ಲಿಸಿದ 24 ಗಂಟೆಯೊಳಗೆ ವಿಲೇವಾರಿಗೆ ಸೂಕ್ತ ಕ್ರಮಕೈಗೊಳ್ಳಬೇಕು ಎಂದು ಹೇಳಿದರು.

ವಿಗ್ರಹ ತಯಾರಕರು ಮತ್ತು ಮಾರಾಟಗಾರರು ಕಡ್ಡಾಯವಾಗಿ ಸಂಬಂಧಪಟ್ಟ ಸ್ಥಳೀಯ ಸಂಸ್ಥೆ, ಗ್ರಾಮ ಪಂಚಾಯಿತಿಗಳಿಗೆ ಪೂರಕ ದಾಖಲೆಗಳನ್ನು ಸಲ್ಲಿಸಿದ ನಂತರ ಷರತ್ತುಬದ್ಧ ಪ್ರಮಾಣ ಪತ್ರ ನೀಡಬೇಕು. ತಾಲೂಕು ಮಟ್ಟದ ಕಾರ್ಯಪಡೆಯಲ್ಲಿರುವ ತಹಸಿಲ್ದಾರರು, ತಾಪಂ ಕಾರ್ಯ ನಿರ್ವಾಹಕ ಅಧಿಕಾರಿಗಳು, ಮುಖ್ಯಾಧಿಕಾರಿಗಳು, ಸರ್ಕಲ್ ಇನ್ಸ್‌ಪೆಕ್ಟರ್ ಮತ್ತು ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು ತಮ್ಮ ವ್ಯಾಪ್ತಿಯಲ್ಲಿ ಕಾರ್ಯಾಚರಣೆ ನಡೆಸಿ, ಪಿಓಪಿ ವಿಗ್ರಹಗಳನ್ನು ಮುಟ್ಟುಗೋಲು ಹಾಕಿಕೊಳ್ಳಲು ಕ್ರಮವಹಿಸುವಂತೆ ಸೂಚಿಸಿದರು.

ಬಣ್ಣ ರಹಿತ ಮಣ್ಣಿನ ನೈಸರ್ಗಿಕ ಮೂರ್ತಿಗಳೊಂದಿಗೆ ಹಬ್ಬ ಆಚರಿಸಿದ ನಂತರ ಗೌರಿ ಗಣೇಶ ಮೂರ್ತಿಗಳನ್ನು ಸ್ಥಳೀಯ ಸಂಸ್ಥೆಗಳು ನಿಗದಿಪಡಿಸುವ ಸ್ಥಳಗಳಲ್ಲಿ ಮೂರ್ತಿಗಳನ್ನು ವಿಸರ್ಜಿಸುವಂತೆ ಸಾರ್ವಜನಿಕರಲ್ಲಿ ಅರಿವು ಮೂಡಿಸಬೇಕು. ಪರಿಸರ ಸ್ನೇಹಿ ಮಣ್ಣಿನ ಗಣೇಶ ಮೂರ್ತಿಗಳ ಪ್ರತಿಷ್ಠಾಪನೆಗೆ ಉತ್ತೇಜಿಸಬೇಕು. ರಾತ್ರಿ 10 ಗಂಟೆಯಿಂದ ಬೆಳಗ್ಗೆ 6ರವರೆಗೆ ಧ್ವನಿವರ್ಧಕ ಬಳಕೆ ನಿಷೇಧಿಸಬೇಕು. ಹಸಿರು ಪಟಾಕಿಗಳನ್ನು ಮಾತ್ರ ಬಳಸುವಂತೆ ಸಾರ್ವಜನಿಕರಿಗೆ ಮನವರಿಕೆ ಮಾಡಿಕೊಡಬೇಕು ಎಂದು ತಿಳಿಸಿದರು.

ಸಭೆಯಲ್ಲಿ ಜಿಲ್ಲಾ ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕರಾದ ಶುಭಾ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಪರಿಸರ ಅಧಿಕಾರಿಗಳು, ಸಣ್ಣ ನೀರಾವರಿ ಇಲಾಖೆ ಕಾರ್ಯಪಾಲಕ ಇಂಜಿನಿಯರ್‌ಗಳು ಇನ್ನಿತರ ಅಧಿಕಾರಿಗಳು ಹಾಜರಿದ್ದರು.

ಸರ್ಕಾರಿ ಭೂಮಿ ಒತ್ತುವರಿ ಮಾಡಿದ ರೈತನಿಗೆ ಒಂದು ವರ್ಷ ಜೈಲು; 5500 ರೂ. ದಂಡ ವಿಧಿಸಿ ಕೋರ್ಟ್ ಆದೇಶ

ತಿ.ನರಸೀಪುರ, ಆ. 23– ಮೈಸೂರು ನಗರದಲ್ಲಿ ಸರ್ಕಾರಿ ಭೂಮಿ ಒತ್ತುವರಿ ಪ್ರಕರಣಗಳು ಹೆಚ್ಚಾಗಿ ನಡೆಯುತ್ತಿದ್ದು, ಆಗಿಂದಾಗ್ಗೆ ಕಂದಾಯ ಇಲಾಖೆ ಅಧಿಕಾರಿಗಳು ಒತ್ತುವರಿಯನ್ನು ತೆರವುಗೊಳಿಸುವ ಕೆಲವು ಪ್ರಕರಣಗಳು ವರದಿಯಾಗುತ್ತಲೇ ಇವೆ. ಆದರೆ, ಒತ್ತುವರಿದಾರರ ವಿರುದ್ಧ ಯಾವುದೇ ಕ್ರಮ ಜರುಗಿರುವ ಬಗ್ಗೆ ಈವರೆಗೂ ವರದಿಯಾಗಿಲ್ಲ.

ಆದರೆ, ತಿ.ನರಸೀಪುರ ತಾಲೂಕಿನಲ್ಲಿ ಸರ್ಕಾರಿ ಕಟ್ಟೆ ಜಮೀನನ್ನು ಒತ್ತುವರಿ ಮಾಡಿಕೊಂಡಿದ್ದ ರೈತನಿಗೆ 1 ವರ್ಷ ಜೈಲು ಹಾಗೂ 5,500 ರೂ ದಂಡ ವಿಧಿಸಿ, ಕರ್ನಾಟಕ ಭೂ ಕಬಳಿಕೆ ನಿಷೇಧ ವಿಶೇಷ ನ್ಯಾಯಾಲಯ ತೀರ್ಪು ನೀಡಿದೆ. ತಿ.ನರಸೀಪುರ ತಾಲೂಕು ಕುರುಬೂರು ಗ್ರಾಮದ ಮಹದೇವಪ್ಪ ಶಿಕ್ಷೆಗೆ ಗುರಿಯಾದವರು.

ವಿವರ: ತಿ.ನರಸೀಪುರ ತಾಲೂಕು ಮೂಗೂರು ಗ್ರಾಮದ ಸರ್ವೆ ನಂಬರ್ 189ರ ಸರ್ಕಾರಿ ಕಟ್ಟೆ ಜಮೀನು 3.16 ಎಕರೆ ಪೈಕಿ 1.24 ಎಕರೆಯನ್ನು ಈ ಜಮೀನಿಗೆ ಹೊಂದಿಕೊಂಡಂತಿದ್ದ ಜಮೀನು ಮಾಲೀಕರಾದ ಕುರುಬೂರು ಗ್ರಾಮದ ಮಹದೇವಪ್ಪ ಮತ್ತು ಕುಳ್ಳಪ್ಪನ ಎಂಬುವರು ಒತ್ತುವರಿ ಮಾಡಿಕೊಂಡಿದ್ದರು.

ತಿ.ನರಸೀಪುರ ತಾಲೂಕು ತಹಸೀಲ್ದಾರ್ ಆದೇಶದ ಮೇರೆಗೆ ಒತ್ತುವರಿಯನ್ನು ಕಂದಾಯ ಇಲಾಖೆ ಅಧಿಕಾರಿಗಳು ತೆರವುಗೊಳಿಸಿದ್ದರು. ಆದರೆ, ಆನಂತರವೂ ಮಹದೇವಪ್ಪ ಮತ್ತು ಕುಳ್ಳಪ್ಪನ ಅವರು ಮತ್ತೆ ಸರ್ಕಾರಿ ಜಮೀನನ್ನು ಒತ್ತುವರಿ ಮಾಡಿಕೊಂಡಿದ್ದರು. ಈ ಹಿನ್ನೆಲೆಯಲ್ಲಿ ರಾಜಸ್ವ ನಿರೀಕ್ಷಕರು ನೀಡಿದ ದೂರಿನನ್ವಯ ತಿ.ನರಸೀಪುರ ಪೊಲೀಸರು ಕರ್ನಾಟಕ ಭೂ ಕಂದಾಯ ಅಧಿನಿಯಮ 1964 ಕಲಂ 192(ಎ) ಹಾಗೂ ಭಾರತೀಯ ದಂಡ ಸಂಹಿತೆ 447ರಡಿ ಪ್ರಕರಣ ದಾಖಲಿಸಿಕೊಂಡು ಜೆಎಂಎಫ್‌ಸಿ ನ್ಯಾಯಾಲಯಕ್ಕೆ ದೋಷಾರೋಪಣಾ ಪಟ್ಟಿ ಸಲ್ಲಿಸಿದ್ದರು. ಜೆಎಂಎಫ್‌ಸಿ ನ್ಯಾಯಾಲಯವು ಪ್ರಕರಣದ ವಿಚಾರಣೆಯನ್ನು ಭಾಗಶಃ ನಡೆಸಿದ ನಂತರ ಪ್ರಕರಣವನ್ನು ಕರ್ನಾಟಕ ಭೂ ಕಬಳಿಕೆ ನಿಷೇಧ ವಿಶೇಷ ನ್ಯಾಯಾಲಯಕ್ಕೆ ವರ್ಗಾಯಿಸಿತ್ತು.

ವಿಚಾರಣೆ ನಡೆಸಿದ ಕರ್ನಾಟಕ ಭೂ ಕಬಳಿಕೆ ನಿಷೇಧ' ವಿಶೇಷ' ನ್ಯಾಯಾಲಯ–2ರ ನ್ಯಾಯಿಕ ಸದಸ್ಯ ಪಾಟೀಲ, ನಾಗಲಿಂಗನ ಗೌಡ ಹಾಗೂ ಕಂದಾಯ ಸದಸ್ಯ ಕೆ.ಹೆಚ್. ಅಶ್ವಥನಾರಾಯಣಗೌಡ ಅವರಿದ್ದ ಪೀಠವು ವಿಚಾರಣೆ ಹಂತದಲ್ಲಿ ಕುಳ್ಳಪ್ಪನ ನಿಧನ ಹೊಂದಿದ್ದರಿಂದ ಅವರನ್ನೂ ಕೈಬಿಟ್ಟು ಜಮೀನು ಮತ್ತೊಬ್ಬ ಒತ್ತುವರಿದಾರ ಮಹದೇವಪ್ಪಗೆ 1 ವರ್ಷ ಜೈಲು ಹಾಗೂ 5500 ರೂ. ದಂಡ ವಿಧಿಸಿದ್ದಲ್ಲದೇ, ಒತ್ತುವರಿಯಾಗಿರುವ ಸರ್ಕಾರಿ ಕಟ್ಟೆ ಜಮೀನನ್ನು ಕೂಡಲೇ ತೆರವುಗೊಳಿಸಿ ಸರ್ಕಾರದ ವಶಕ್ಕೆ ಪಡೆಯುವಂತೆ ಆದೇಶಿಸುವ ಜೊತೆಗೆ 60 ದಿನಗಳ ಒಳಗಾಗಿ ಈ ಸಂಬಂಧ ವರದಿಯಲ್ಲೂ ನ್ಯಾಯಾಲಯಕ್ಕೆ ಸಲ್ಲಿಸುವಂತೆ ತಿ.ನರಸೀಪುರ ತಹಸೀಲ್ದಾರರಿಗೆ ನಿರ್ದೇಶಿಸಿ ತೀರ್ಪು ನೀಡಲಾಗಿದೆ ಎಂದು ಈ ನ್ಯಾಯಾಲಯದ ಸರ್ಕಾರಿ ಅಭಿಯೋಜಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ರಾಜ್ಯಪಾಲರ ವಿರುದ್ಧ ಪ್ರತಿಭಟನೆ



ಮೈಸೂರು, ಆ.23(ಬಿಎಲ್‌ಯು)– ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ಪ್ರಾಸಿಕ್ಯೂಷನ್‌ಗೆ ಅನುಮತಿ ನೀಡಿರುವ ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್ ತೀರ್ಮಾನ ವಿರೋಧಿಸಿ ರಾಜ್ಯ ದಲಿತ ಹೋರಾಟ ಸಮಿತಿಯವರು ಜಿಲ್ಲಾಧಿಕಾರಿ ಕಚೇರಿ ಮುಂದೆ ಇಂದು ಪ್ರತಿಭಟನೆ ನಡೆಸಿದರು.

ರಾಜ್ಯಪಾಲರು ಅಸಂವಿಧಾನಿಕವಾಗಿ ನಡೆದುಕೊಂಡಿದ್ದು, ಕೇಂದ್ರ ಸರ್ಕಾರದ ಅಣತಿಯಂತೆ ಕಾರ್ಯ ನಿರ್ವಹಿಸುತ್ತಿದ್ದಾರೆ ಎಂದು ಆರೋಪಿಸಿದರು.

ರಾಜ್ಯಪಾಲರ ವಿರುದ್ಧ ಧಿಕ್ಕಾರದ ಘೋಷಣೆಗಳನ್ನು ಕೂಗಿ ಆಕ್ರೋಶ ವ್ಯಕ್ತಪಡಿಸಿದರು. ಸಮಿತಿ ಮುಖಂಡರಾದ ಸಿದ್ದಪ್ಪ ಪರಮೇಶ್, ಎಸ್.ನಂಜಪ್ಪ ಸಿದ್ದರಾಜು, ರಾಜಣ್ಣ, ಪ್ರಕಾಶ್ ಸೇರಿದಂತೆ ಹಲವರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

ಮಾತೃ ಭಾಷೆಯಲ್ಲೇ ವಿಜ್ಞಾನ ವಿಷಯ ಅಧ್ಯಯನ ಮಾಡುವ ಅವಕಾಶವಿರಬೇಕು

ನಿವೃತ್ತ ಇಸ್ರೋ ವಿಜ್ಞಾನಿ ಪ್ರೊ.ವಿ.ಜಗನ್ನಾಥ್ ಅಭಿಮತ



ರಾಷ್ಟ್ರೀಯ ಬಾಹ್ಯಾಕಾಶ ದಿನಾಚರಣೆ ಕಾರ್ಯಕ್ರಮವನ್ನು ಪ್ರೊ.ವಿ.ಜಗನ್ನಾಥ್ ಉದ್ಘಾಟಿಸಿದರು.

ಮೈಸೂರು, ಆ.23(ಎಸ್‌ಪಿಎನ್)– ಜಪಾನ್ ದೇಶದ ವಿದ್ಯಾರ್ಥಿಗಳು ಅಲ್ಲಿನ ಮಾತೃ ಭಾಷೆಯಲ್ಲೇ ವಿಜ್ಞಾನ ವಿಷಯವನ್ನು ಅಧ್ಯಯನ ಮಾಡುತ್ತಾರೆ. ಅದರಂತೆ ನಮ್ಮ ದೇಶದ ವಿದ್ಯಾರ್ಥಿಗಳು ವಿಜ್ಞಾನ ವಿಷಯವನ್ನು ಮಾತೃ ಭಾಷೆಯಲ್ಲೇ ಅಧ್ಯಯನ ಮಾಡುವಂತಾಗಬೇಕು ಎಂದು ನಿವೃತ್ತ ಇಸ್ರೋ ವಿಜ್ಞಾನಿ ಪ್ರೊ.ವಿ.ಜಗನ್ನಾಥ್ ಅಭಿಪ್ರಾಯಪಟ್ಟರು.

ಕರ್ನಾಟಕ ರಾಜ್ಯ ಮುಕ್ತ ವಿಶ್ವ ವಿದ್ಯಾನಿಲಯ ಆವರಣದ ಕಾವೇರಿ ಸಭಾಂಗಣದಲ್ಲಿ ಚಂದ್ರಯಾನ–03 ರ ಯಶಸ್ವಿ ಉಡಾವಣೆ ಸ್ಮರಣಾರ್ಥ ನಡೆದ 'ರಾಷ್ಟ್ರೀಯ ಬಾಹ್ಯಾಕಾಶ ದಿನಾಚರಣೆಯಲ್ಲಿ ಭಾಗವಹಿಸಿ ಮಾತನಾಡಿದ ಅವರು, ಈ ಹಿಂದೆ ಜಪಾನ್ ದೇಶಕ್ಕೆ ಭೇಟಿ ನೀಡಿದ್ದ ಸಂದರ್ಭವನ್ನು ನೆನೆದ ಪ್ರೊ.ಜಗನ್ನಾಥ್, ಅಲ್ಲಿನ ವಿದ್ಯಾರ್ಥಿಗಳಂತೆಯೇ ನಮ್ಮ ವಿದ್ಯಾರ್ಥಿಗಳು ತಮ್ಮ ಮಾತೃಭಾಷೆಯಲ್ಲಿ ವಿಜ್ಞಾನ ವಿಷಯಗಳನ್ನು ಅಧ್ಯಯನ ಮಾಡುವುದು ಅತ್ಯಗತ್ಯ ಎಂದು ಅಭಿಪ್ರಾಯಪಟ್ಟರು.

ಮುಕ್ತ ವಿವಿ ಮುಕ್ತ ಮನಸ್ಸುಗಳ ಸಂಗಮವಾಗಿದ್ದು, ಈ ವಿವಿಯಲ್ಲಿ ರಾಷ್ಟ್ರೀಯ ಬಾಹ್ಯಾಕಾಶ ದಿನ ಆಚರಣೆ ಮಾಡುತ್ತಿರುವುದು ಸಂತಸದ ವಿಷಯ. ಬಾಹ್ಯಾಕಾಶದ ಸಂಶೋಧನೆಯು ನಮ್ಮ ಜೀವನದ ಹಲವು ಕ್ಷೇತ್ರಗಳಲ್ಲಿ ಪರಿವರ್ತನೆ ತಂದಿದೆ. ಇದರಿಂದ ನಮ್ಮ ವ್ಯವಹಾರ, ಸಂವಹನ ಮತ್ತು ದಿನನಿತ್ಯದ ಕೆಲಸ ಕಾರ್ಯಗಳಲ್ಲಿ ಸುಧಾರಣೆಗಳು ಬಂದಿವೆ. ಇದರಲ್ಲಿ ಚಂದ್ರಯಾನ, ಮಂಗಳಯಾನ ಮತ್ತು ಇತರೆ ಬಾಹ್ಯಾಕಾಶ ಕಾರ್ಯಕ್ರಮಗಳ ಕೊಡುಗೆಯೂ ಇದೆ ಎಂದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ವಿವಿಯ ಕುಲಸಚಿವ ಪ್ರೊ. ಕೆ.ಬಿ. ಪ್ರವೀಣ ಮಾತನಾಡಿ, ಬಾಹ್ಯಾಕಾಶ ಒಂದು ವಿಸ್ಮಯ ಜಗತ್ತು. ಅದರ ಬಗ್ಗೆ ಕುತೂಹಲ ಕಣ್ಣಿನಿಂದ ವಿದ್ಯಾರ್ಥಿಗಳು ಅಧ್ಯಯನ ಮಾಡಬೇಕು. ಹಾಗಾಗಿ, ವಿದ್ಯಾರ್ಥಿಗಳು 'ನಾವೇ ಬುದ್ಧಿವಂತರು' ಎಂಬ ಭಾವನೆಯನ್ನು ಹೊಂದದೆ ಸದಾ ಕಲಿಕೆಯ ಮನೋಭಾವವನ್ನು ಬೆಳೆಸಿಕೊಳ್ಳಬೇಕೆಂದು ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು.

ಈ ವೇಳೆ ವಿವಿಯ ಪರೀಕ್ಷಾಂಗ ಕುಲಸಚಿವ ಡಾ. ಹೆಚ್.ವಿಶ್ವನಾಥ್, ವಿವಿಯ ಹಣಕಾಸು ಅಧಿಕಾರಿ ಹೆಚ್.ವಿ.ಶ್ವೇತಾ, ಮುಕ್ತ ವಿವಿ ಭೌತಶಾಸ್ತ್ರ ಅಧ್ಯಯನ ವಿಭಾಗದ ಮುಖ್ಯಸ್ಥ ಎಸ್.ವಿ.ನಿರಂಜನ, ಡಾ.ಪೃಥ್ವಿರಾಣಿ, ಅಧ್ಯಾಪಕರಾದ ಬಿ.ಎನ್.ಅಮೃತ್, ಆರ್.ರವಿಕುಮಾರ್ ಉಪಸ್ಥಿತರಿದ್ದರು.

ಗೌರಿ–ಗಣೇಶಮೂರ್ತಿ ಪ್ರತಿಷ್ಠಾಪನೆ ಅನುಮತಿಗೆ ಏಕಗವಾಕ್ಷಿ ಕೌಂಟರ್ ತೆರೆಯಲು ಮನವಿ



ಏಕ ಗವಾಕ್ಷಿಯಡಿ ಅನುಮತಿ ನೀಡುವಂತೆ ಬಿಜೆಪಿ ಮೈಸೂರು ನಗರ ಘಟಕದ ಪ್ರಧಾನ ಕಾರ್ಯದರ್ಶಿ ಹೆಚ್.ಜಿ.ಗಿರಿಧರ್ ನಿಯೋಗ, ಅಪರ ಜಿಲ್ಲಾಧಿಕಾರಿ ಪಿ.ಶಿವರಾಜು ಅವರಲ್ಲಿ ಶುಕ್ರವಾರ ಮನವಿ ಮಾಡಿದ್ದಾರೆ.

ಮೈಸೂರು, ಆ.23(ಎಸ್‌ಪಿಎನ್)– ಸಾರ್ವಜನಿಕವಾಗಿ ಗೌರಿ–ಗಣೇಶ ಮೂರ್ತಿ ಪ್ರತಿಷ್ಠಾಪನೆಗೆ ಅನುಮತಿ ಪಡೆಯಲು ಜಿಲ್ಲಾಡಳಿತದಿಂದ ಏಕ ಗವಾಕ್ಷಿ ಕೌಂಟರ್ ತೆರೆಯುವಂತೆ ಬಿಜೆಪಿ ಮೈಸೂರು ನಗರ ಘಟಕ, ಮೈಸೂರು ಜಿಲ್ಲಾಧಿಕಾರಿಗಳಲ್ಲಿ ಮನವಿ ಮಾಡಿದೆ.

ಸಾರ್ವಜನಿಕವಾಗಿ ಗೌರಿ–ಗಣೇಶ ಮೂರ್ತಿಗಳನ್ನು ಕೂರಿಸಲು ಪ್ರತಿ ವರ್ಷ ಸಾಕಷ್ಟು ತೊಂದರೆಗಳಾಗಿದ್ದು, ಇದನ್ನು ತಪ್ಪಿಸುವ ದೃಷ್ಟಿಯಿಂದ ವಿವಿಧ ಇಲಾಖೆಗಳಿಂದ ಪಡೆಯುವ ಅನುಮತಿಯನ್ನು ಏಕ ಗವಾಕ್ಷಿಯಡಿ ಅನುಮತಿ ನೀಡುವಂತೆ ಬಿಜೆಪಿ ಮೈಸೂರು ನಗರ ಘಟಕದ ಪ್ರಧಾನ ಕಾರ್ಯದರ್ಶಿ ಹೆಚ್.ಜಿ.ಗಿರಿಧರ್ ನಿಯೋಗ, ಅಪರ ಜಿಲ್ಲಾಧಿಕಾರಿ ಪಿ.ಶಿವರಾಜು ಅವರಲ್ಲಿ ಶುಕ್ರವಾರ ಮನವಿ ಮಾಡಿದ್ದಾರೆ.

ಮೈಸೂರಿನ ಹಲವು ಸಂಘ–ಸಂಸ್ಥೆಗಳು ಮತ್ತು ಯುವಕರು ರಸ್ತೆ ಬದಿಯಲ್ಲಿ ಹಾಗೂ ಪಾರ್ಕ್‌ಗಳಲ್ಲಿ ಸಾಮೂಹಿಕವಾಗಿ ಗೌರಿ–ಗಣೇಶ ಮೂರ್ತಿಗಳನ್ನು ಕೂರಿಸುವುದು ವಾಡಿಕೆ. ಸಾಮೂಹಿಕವಾಗಿ ಗಣೇಶ ಮೂರ್ತಿಗಳನ್ನು ಕೂರಿಸಲು ಕೆಲವೆಡೆ ಆಡಳಿತಾತ್ಮಕ ತೊಂದರೆಗಳಾಗಿದ್ದು, ನಗರ ಪಾಲಿಕೆ, ಕೆಇಬಿ, ಕೆಎಸ್‌ಆರ್‌ಟಿಸಿ, ಪೊಲೀಸ್ ಇಲಾಖೆ, ಅಗ್ನಿಶಾಮಕ ದಳ ಸೇರಿದಂತೆ ಎಲ್ಲಾ ಇಲಾಖೆಗಳಿಗೂ ಒಂದೇ ಕಡೆ ಅರ್ಜಿಗಳನ್ನು ಸ್ವೀಕರಿಸಿ, 24 ಗಂಟೆಯೊಳಗೆ ಅನುಮತಿ ನೀಡುವಂತೆ ಮನವಿ ಮಾಡಿದರು.

ಪ್ರತಿ ಬಡಾವಣೆಯಲ್ಲೂ ದೊಡ್ಡವರಿಂದ ಚಿಕ್ಕ ವಯಸ್ಸಿನವರೆಗೂ ಗಣೇಶ ಮೂರ್ತಿಗಳನ್ನು ಕೂರಿಸಿ, ಪೂಜಿಸುವುದು ವಾಡಿಕೆ. ಇದರಲ್ಲಿ ಚಿಕ್ಕ ಚಿಕ್ಕ ಮಕ್ಕಳು ಕೂರಿಸುವ ಗೌರಿ– ಗಣೇಶ ಮೂರ್ತಿಗಳಿಗೆ ಜಿಲ್ಲಾಡಳಿತ ಅನುಮತಿ ಪಡೆಯುವುದು ಅಗತ್ಯವಿಲ್ಲವೆಂದು ಘೋಷಿಸಬೇಕು ಎಂದು ಮನವಿ ಮಾಡಿರುವ ಅವರು, ಸಾರ್ವಜನಿಕವಾಗಿ ಚಿಕ್ಕ ಮಕ್ಕಳು ಕೂರಿಸುವ ಗಣೇಶ ಮೂರ್ತಿಗಳಿಗೂ ಅನುಮತಿ ಪಡೆಯುವಂತೆ ಜಿಲ್ಲಾಡಳಿತದಿಂದ ಒತ್ತಡ ಹಾಕಿದರೆ, ಆ ಮಕ್ಕಳು ಮುಂದಿನ ದಿನಗಳಲ್ಲಿ ಇಂತಹ ಧಾರ್ಮಿಕ ಆಚರಣೆಗಳಿಂದ ವಿಮುಖವಾಗುವ ಸನ್ನಿವೇಶವಿದ್ದು, ಇದನ್ನು ಗಮನದಲ್ಲಿಟ್ಟು ಅನುಮತಿಯನ್ನು ಸರಳೀಕರಣಗೊಳಿಸುವಂತೆ ಮನವಿ ಮಾಡಿದ್ದಾರೆ.

ಈ ವೇಳೆ ಬಿಜೆಪಿ ನಗರ ಉಪಾಧ್ಯಕ್ಷ ಎಸ್.ಕೆ.ದಿನೇಶ್, ಮುಖಂಡರಾದ ಜೋಗಿ ಮಂಜು, ಬಿಜೆಪಿ ಯುವ ಮೋರ್ಚಾ ಅಧ್ಯಕ್ಷ ರಾಕೇಶ್‌ಗೌಡ, ಎನ್.ಆರ್.ಕ್ಷೇತ್ರದ ಅಧ್ಯಕ್ಷ ಸ್ಮಾರ್ಟ್ ಮಂಜು, ಎನ್.ಆರ್. ಕ್ಷೇತ್ರದ ಯುವ ಮೋರ್ಚಾ ಅಧ್ಯಕ್ಷ ನವೀನ್ ರಾಜ್ ಹಾಗೂ ಇತರರಿದ್ದರು.

ಟೂರಿಸ್ಟ್ ಹಾಸ್ಟೆಲ್‌ನಲ್ಲಿ ವೇಶ್ಯಾವಾಟಿಕೆ; ಒಬ್ಬರ ಬಂಧನ

ಮೈಸೂರು, ಆ.23– ಮೈಸೂರಿನ ಪ್ರತಿಷ್ಠಿತ ಗೋಕುಲಂ ಬಡಾವಣೆಯ ಟೂರಿಸ್ಟ್ ಹಾಸ್ಟೆಲ್‌ವೊಂದರಲ್ಲಿ ವೇಶ್ಯಾವಾಟಿಕೆ ನಡೆಸುತ್ತಿದ್ದ ವ್ಯಕ್ತಿಯನ್ನು ಸಿಸಿಬಿ ಪೊಲೀಸರು ಬಂಧಿಸಿದ್ದಾರೆ. ಗೋಕುಲಂ ಮೂರನೇ ಹಂತ, 7ನೇ ಮೇನ್, ಡಾಕ್ಟರ್ ಕಾರ್ನರ್, ಚಟೋರಿ ಸ್ಟ್ರೀಟ್ ಪಕ್ಕದಲ್ಲಿರುವ ಟೂರಿಸ್ಟ್ ಹಾಸ್ಟೆಲ್‌ವೊಂದರಲ್ಲಿ ವ್ಯಕ್ತಿಯೊಬ್ಬ ವೇಶ್ಯಾವಾಟಿಕೆ ದಂಧೆ ನಡೆಸುತ್ತಿದ್ದ. ಸ್ಥಳೀಯ ಯುವತಿಯರಿಗೆ ಹಣದ ಆಮಿಷವೊಡ್ಡಿ ಅವರನ್ನು ವೇಶ್ಯಾವಾಟಿಕೆ ದಂಧೆಯಲ್ಲಿ ತೊಡಗಿಸಿ ಅಕ್ರಮವಾಗಿ ಹಣ ಸಂಪಾದನೆ ಮಾಡುತ್ತಿದ್ದ. ಈ ಬಗ್ಗೆ ಖಚಿತ ಮಾಹಿತಿ ದೊರೆತ ಹಿನ್ನೆಲೆಯಲ್ಲಿ ಸಿಸಿಬಿ ಅಧಿಕಾರಿ ಹಾಗೂ ಸಿಬ್ಬಂದಿ ತಂಡ, ಆ ಟೂರಿಸ್ಟ್ ಹಾಸ್ಟೆಲ್ ಮೇಲೆ ದಾಳಿ ನಡೆಸಿದೆ. ವೇಶ್ಯಾವಾಟಿಕೆ ದಂಧೆ ನಡೆಸುತ್ತಿದ್ದವನನ್ನು ಬಂಧಿಸಿ, ಸ್ಥಳದಲ್ಲಿದ್ದ ಓರ್ವ ಮಹಿಳೆ ರಕ್ಷಣೆ ಮಾಡಲಾಗಿದೆ. ಈ ಸಂಬಂಧ ವಿವಿ ಪುರಂ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಹನೂರಿನ ಯೋಧ ಹೃದಯಾಘಾತದಿಂದ ಸಾವು

ಹನೂರು, ಆ.23– ಪಂಜಾಬ್ ಗಡಿಯಲ್ಲಿ ಸೇವೆ ಸಲ್ಲಿಸುತ್ತಿದ್ದ ಹನೂರು ತಾಲೂಕಿನ ಸುಳ್ವಾಡಿ ಗ್ರಾಮದ ಯೋಧ ಹೃದಯಾಘಾತದಿಂದ ಮೃತಪಟ್ಟಿದ್ದಾರೆ.



ಮೃತರನ್ನು ಅಂತೋಣಿಸ್ವಾಮಿ ಹಾಗೂ ಅಂತೋಣಿಯಮ್ಮಳ್ ದಂಪತಿ ಪುತ್ರ ಜ್ಞಾನ ಪ್ರಕಾಶ್ (33) ಎಂದು ಗುರುತಿಸ ಲಾಗಿದೆ. ಕಳೆದ 13 ವರ್ಷಗಳಿಂದ ಭಾರತೀಯ ಸೇನೆಯಲ್ಲಿ ಸೇವೆ ಸಲ್ಲಿಸುತ್ತಿದ್ದ ಜ್ಞಾನ ಪ್ರಕಾಶ್ ಇತ್ತೀಚಿಗೆ ಪಂಜಾಬ್ ಗಡಿಗೆ ನಿಯೋಜನೆಗೊಂಡಿದ್ದರು. ಶುಕ್ರವಾರ (ಆಗಸ್ಟ್ 23) ಕರ್ತವ್ಯ ನಿರ್ವಹಿಸುತ್ತಿದ್ದ ವೇಳೆ ಹೃದಯಾಘಾತದಿಂದ ಮೃತಪಟ್ಟಿದ್ದಾರೆ.

ಮೃತರು ತಂದೆ, ತಾಯಿ, ಪತ್ನಿ ಹಾಗೂ ಪುತ್ರರನ್ನು ಅಗಲಿದ್ದಾರೆ. ಮೃತರ ಸುದ್ದಿ ತಿಳಿದು ಕುಟುಂಬಸ್ಥರು ಪಂಜಾಬ್‌ಗೆ ತೆರಳಿದ್ದಾರೆ.

ಮೂವರು ಖದೀಮರ ಬಂಧನ; ಪಿಸ್ತೂಲ್ ಸೇರಿ ಇತರೆ ಪದಾರ್ಥಗಳು ಜಪ್ತಿ

ಮೈಸೂರು, ಆ.23– ಕಳ್ಳತನ, ಗಾಂಜಾ ಮಾರಾಟ ಸೇರಿದಂತೆ ಕಾನೂನು ಬಾಹಿರ ಚಟುವಟಿಕೆಯಲ್ಲಿ ತೊಡಗಿದ್ದ ಮೂವರು ನಟೋರಿಯಸ್ ಖದೀಮರನ್ನು ಮೈಸೂರಿನ ಸಿಸಿಬಿ ಪೊಲೀಸರು ಬಂಧಿಸಿ, ಪಿಸ್ತೂಲ್ ಇನ್ನಿತರ ವಸ್ತುಗಳನ್ನು ವಶಪಡಿಸಿಕೊಂಡಿದ್ದಾರೆ.

ಬೆಂಗಳೂರು ಗ್ರಾಮಾಂತರ ಜಿಲ್ಲೆ, ಆನೇಕಲ್ ತಾಲೂಕು, ಇಟ್ಟಂಗೂರು ಗ್ರಾಮದ ಇಮ್ರಾನ್ ಖಾನ್ ಅಲಿಯಾಸ್ ಸದ್ದಾಂ ಹುಸೇನ್(33), ಸೈಯದ್ ಅಯೂಬ್ ಹಾಗೂ ಉಮ್ಮರ್ ಪಾಷಾ ಅಲಿಯಾಸ್ ಜಲ್ಲಾ ಎಂಬುವರನ್ನು ಮೇಟಗಳ್ಳಿ ಪೊಲೀಸ್ ಠಾಣೆ ವ್ಯಾಪ್ತಿಯ ಕೆಆರ್‌ಎಸ್ ರಸ್ತೆ ಕೆಐಎಡಿಬಿ ಕಚೇರಿ ಬಳಿ ಬುಧವಾರ ಮಧ್ಯರಾತ್ರಿ ಬಂಧಿಸಿದ್ದಾರೆ.

ಸೈಯದ್ ಅಯೂಬ್ ಹಾಗೂ ಉಮ್ಮರ್ ಪಾಷಾ ಕಳೆದ ಜೂನ್‌ನಲ್ಲಿ ಶ್ಯಾದನಹಳ್ಳಿಯಲ್ಲಿ ನಡೆದಿದ್ದ ಮನೆಗಳ್ಳತನದ ಪ್ರಕರಣದಲ್ಲಿ ತಲೆಮರೆಸಿಕೊಂಡಿದ್ದ ಆರೋಪಿಗಳಾಗಿದ್ದು, ಇವರಿಗೆ ಇಮ್ರಾನ್ ಖಾನ್ ಗಾಂಜಾ ಮಾರಾಟ ಮಾಡಲು ಬಂದಿದ್ದಾಗ ಖಚಿತ ಮಾಹಿತಿ ಮೇರೆಗೆ ಸಿಸಿಬಿ ಪೊಲೀಸರು ದಾಳಿ ನಡೆಸಿ ಅವರನ್ನು ಬಂಧಿಸುವಲ್ಲಿ ಯಶಸ್ವಿಯಾಗಿದ್ದಾರೆ.

ಸೈಯದ್ ಅಯೂಬ್ ಮತ್ತು ಉಮ್ಮರ್ ಪಾಷಾನನ್ನು ವಿಚಾರಣೆ ನಡೆಸಿದಾಗ ಮಹಮ್ಮದ್ ಮುನ್ನಾ ಎಂಬುವನೊಂದಿಗೆ ಸೇರಿ ಮೈಸೂರಿನ ಜೆ.ಪಿ.ನಗರ, ಲಲಿತಾದ್ರಿಪುರ, ಟೀಚರ್ಸ್ ಲೇಔಟ್, ರೂಪಾನಗರ, ಶ್ರೀರಂಗಪಟ್ಟಣ, ಬಸ್ತಿಪುರ, ಕೆ.ಆರ್.ನಗರದಲ್ಲಿ ಮನೆಗಳ್ಳತನ ಹಾಗೂ ದ್ವಿಚಕ್ರ ವಾಹನಗಳನ್ನು ಕಳ್ಳತನ ಮಾಡಿದ್ದೇವೆ. ಕದ್ದ ಚಿನ್ನಾಭರಣವನ್ನು ಮಾರಾಟ ಮಾಡಿ ಬಂದ ಹಣದಿಂದ ಹೋಂಡಾ ಸಿಟಿ ಹಾಗೂ ಸ್ಯಾಂಟ್ರೋ ಕಾರನ್ನು ಖರೀದಿ ಮಾಡಿದ್ದೇವೆ. ಕಳ್ಳತನ ಮಾಡಿದ ದ್ವಿಚಕ್ರ ವಾಹನಗಳನ್ನು ಬಚ್ಚಿಟ್ಟಿದ್ದು, ಕಳ್ಳತನ ಮಾಡುವಾಗ ಯಾರಾದರೂ ಹಿಡಿಯಲು ಬಂದರೆ ಪಿಸ್ತೂಲ್‌ನಿಂದ ಶೂಟ್ ಮಾಡಿ, ತಪ್ಪಿಸಿಕೊಳ್ಳಲೆಂದು ಇಮ್ರಾನ್ ಖಾನ್ ಅಲಿಯಾಸ್ ಸದ್ದಾಂ ಹುಸೇನ್ ಮೂಲಕ ಪಿಸ್ತೂಲ್ ಖರೀದಿ ಮಾಡಿದ್ದಾಗಿ ತಿಳಿಸಿದ್ದಾರೆ.

ನಂತರ ಇಮ್ರಾನ್ ಖಾನ್ ವಿಚಾರಣೆ ನಡೆಸಿದಾಗ ತಾನು ಗಾಂಜಾವನ್ನು ಸೈಯದ್ ಅಯೂಬ್ ಹಾಗೂ ಉಮ್ಮರ್ ಪಾಷಾಗೆ ಮಾರಾಟ ಮಾಡಲು ಬಂದಿದ್ದೇನೆ. ಹೀಗೆ ಗಾಂಜಾ ಮಾರಾಟ ಮಾಡಿ ಬಂದ ಲಾಭದಿಂದ ಹ್ಯೂಂಡಾಯ್ ವಾರ್ನ ಕಾರನ್ನು ಖರೀದಿ ಮಾಡಿದ್ದೇನೆ. ಯಾರಾದರೂ ಸಮಸ್ಯೆ ಮಾಡಿದರೆ ಅವರನ್ನು ಹೆದರಿಸಲೆಂದು ಪಿಸ್ತೂಲ್ ಇಟ್ಟುಕೊಂಡಿದ್ದೇನೆ ಎಂದು ಹೇಳಿದ್ದಾನೆ. ಆ ಪಿಸ್ತೂಲ್‌ನಲ್ಲಿ ಮ್ಯಾಗ್ಜಿನ್ ಹಾಗೂ ಗುಂಡುಗಳು ಇರಲಿಲ್ಲ ಎಂದು ಪೊಲೀಸ್ ಮೂಲಗಳಿಂದ ತಿಳಿದು ಬಂದಿದೆ.

ಸೈಯದ್ ಅಯೂಬ್ ಹಾಗೂ ಉಮ್ಮರ್ ಪಾಷಾ ಶ್ಯಾದನಹಳ್ಳಿ ಮನೆಯಲ್ಲಿ ಕಳ್ಳತನ ಮಾಡಿದ್ದ ವಸ್ತುಗಳನ್ನು ವಶಕ್ಕೆ ಪಡೆದ ನಂತರ ಇಮ್ರಾನ್ ಖಾನ್‌ನ ಕಾರು, ಅದರ ಡ್ಯಾಶ್‌ಬೋರ್ಡ್‌ನಲ್ಲಿದ್ದ ಸಿಲ್ವರ್ ಬಣ್ಣದ ಕಂಟ್ರಿಮೇಡ್ ಪಿಸ್ತೂಲ್, ಡಿಜಿಟಲ್ ತೂಕದ ಯಂತ್ರ, 4 ಕೆಜಿ 66 ಗ್ರಾಂ ಗಾಂಜಾ ವಶಪಡಿಸಿಕೊಳ್ಳಲಾಗಿದೆ.

ಸಿಸಿಬಿ ಇನ್ಸ್‌ಪೆಕ್ಟರ್ ಎಂ.ಮೋಹನ್ ಕುಮಾರ್, ಪಿಎಸ್‌ಐ ಮಾರುತಿ ಅಂತರಗಟ್ಟಿ, ಎಎಸ್‌ಐ ಎಂ.ಆರ್. ಗಣೇಶ್, ಹೆಡ್ ಕಾನ್ಸ್‌ಟೇಬಲ್‌ಗಳಾದ ಉಮಾಮಹೇಶ್, ರಾಮಸ್ವಾಮಿ, ಟಿ.ಪ್ರಕಾಶ್, ಕಾನ್ಸ್‌ಟೇಬಲ್‌ಗಳಾದ ಮಹೇಶ್ ಹಾಗೂ ಗೋವಿಂದ ಖಚಿತ ಮಾಹಿತಿ ಮೇರೆಗೆ ಕಾರ್ಯಾಚರಣೆ ನಡೆಸಿ, ಖದೀಮರನ್ನು ಬಂಧಿಸಿದ್ದಾರೆ. ಈ ಸಂಬಂಧ ಮೇಟಗಳ್ಳಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ

ಸಮಿತಿಗಳು ವ್ಯವಸ್ಥಿತವಾಗಿ ಕರ್ತವ್ಯ ನಿರ್ವಹಿಸಿ

ಜಿಲ್ಲಾಧಿಕಾರಿ ಡಾ.ಕುಮಾರ ಸೂಚನೆ



ಸಭೆಯಲ್ಲಿ ಜಿಲ್ಲಾಧಿಕಾರಿ ಡಾ.ಕುಮಾರ ಮಾತನಾಡಿದರು.

ಮಂಡ್ಯ,ಆ.23– 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಸಂಬಂಧಿಸಿದಂತೆ ಕಳೆದ ಮೂರು ದಿನಗಳಿಂದ ಸಮಿತಿಗಳ ಸಭೆ ನಡೆಸುತ್ತಿದ್ದು, ಪ್ರತಿ ಸಮಿತಿಗಳು ಕೂಡ ತಮ್ಮ ಕರ್ತವ್ಯ ಹಾಗೂ ಜವಾಬ್ದಾರಿಗಳನ್ನು ವ್ಯವಸ್ಥಿತವಾಗಿ ನಿರ್ವಹಿಸುವ ಮೂಲಕ ಸಮ್ಮೇಳನಕ್ಕೆ ಕೈಜೋಡಿಸಿ ಎಂದು ಜಿಲ್ಲಾಧಿಕಾರಿ ಡಾ.ಕುಮಾರ ಅವರು ತಿಳಿಸಿದರು.

ಅವರು ಇಂದು ಜಿಲ್ಲಾ ಪಂಚಾಯತ್‌ನ ಕಾವೇರಿ ಸಭಾಂಗಣದಲ್ಲಿ ನಡೆದ 87 ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಸಂಬಂಧಿಸಿದಂತೆ ವಿವಿಧ ಸಮಿತಿಗಳ ಸಭೆ ನಡೆಸಿ ಮಾತನಾಡಿದರು.

ವಸತಿ ಸಮಿತಿಯು ಸಮ್ಮೇಳನಕ್ಕೆ ಬರುವ ಗಣ್ಯರಿಗೆ, ಘೋಷ್ಠಿಗೆ ಬರುವವರಿಗೆ, ನೋಂದಣಿ ಸಮಿತಿಯಲ್ಲಿ ನೋಂದಣಿ ಮಾಡಿಸುವವರಿಗೆ ವಸತಿ ವ್ಯವಸ್ಥೆ ಕಲ್ಪಿಸಬೇಕು. ಆದ ಕಾರಣ ಜಿಲ್ಲೆಯಲ್ಲಿರುವ ಹೋಟೆಲ್, ಸಮುದಾಯ ಭವನ, ವಿಶ್ವವಿದ್ಯಾನಿಲಯ, ಹಾಸ್ಟೆಲ್, ಹೋಮ್ ಸ್ಟೇ, ರೆಸಾರ್ಟ್‌ಗಳಲ್ಲಿ ವಸತಿ ಕಲ್ಪಿಸಲು ಪತ್ರ ವ್ಯವಹಾರ ನಡೆಸಿ ಈಗಲೇ ಬುಕ್ ಮಾಡುವ ಕಾರ್ಯವಾಗಬೇಕು. ಮದ್ದೂರು, ಶ್ರೀರಂಗಪಟ್ಟಣ ತಾಲೂಕು ಹಾಗೂ ಮೈಸೂರು ಜಿಲ್ಲೆಯಲ್ಲಿ ಇರುವ ಹೋಟೆಲ್, ರೆಸಾರ್ಟ್‌ಗಳಲ್ಲಿ ಕೊಠಡಿಗಳನ್ನು ಕಾಯ್ದಿರಿಸಿ ವಸತಿ ವ್ಯವಸ್ಥೆಯನ್ನು ಕಲ್ಪಿಸಬೇಕು. ಜೊತೆಗೆ ಅಲ್ಲಿ ಮೂಲಭೂತ ವ್ಯವಸ್ಥೆಗಳ ಬಗ್ಗೆಯೂ ಗಮನಹರಿಸಬೇಕು ಎಂದರು.

ವಸತಿ ವ್ಯವಸ್ಥೆ ಇರುವ ಸ್ಥಳದಿಂದ ಕಾರ್ಯಕ್ರಮಕ್ಕೆ ಕರೆದುಕೊಂಡು ಬರಲು ವಾಹನದ ವ್ಯವಸ್ಥೆಯನ್ನು ಮಾಡಲಾಗುವುದು. ವಸತಿ ಸಮಿತಿಯು ನಿಮ್ಮ ಹಂತದಲ್ಲಿ ಕೂಡಲೇ ಸಭೆ ನಡೆಸಿ ಕ್ರಿಯಾಯೋಜನೆಯನ್ನು ಸಲ್ಲಿಸಬೇಕು ಎಂದರು.

ನಗರ ಅಲಂಕಾರ ಮತ್ತು ವಿದ್ಯುತ್ ವ್ಯವಸ್ಥೆ ಸಮಿತಿಯು ಎಲ್ಲಾ ರಸ್ತೆಗಳು ಹಾಗೂ ಮುಖ್ಯ ದ್ವಾರಗಳಿಗೂ ವಿದ್ಯುತ್ ಅಲಂಕಾರ ಮಾಡಬೇಕು. ಅದಕ್ಕೆ ಸಂಬಂಧಿಸಿದ ಯೋಜನೆಗಳನ್ನು ರೂಪಿಸಿ ಎಂದರು.

ಸ್ವಚ್ಛತಾ ಸಮಿತಿ ಹಾಗೂ ನಗರ ಅಲಂಕಾರ ಸಮಿತಿಯನ್ನು ಒಳಗೊಂಡಂತೆ ಒಂದು ಉಪ ಸಮಿತಿಯನ್ನು ರಚಿಸಲಾಗುವುದು. 2 ಸಮಿತಿಯು ಸಹ ಪ್ಲಾಸ್ಟಿಕ್ ನಿಷೇಧಕ್ಕೆ ಸಂಬಂಧಿಸಿದಂತೆ ಜಾಗೃತಿ ಮೂಡಿಸುವ ಕೆಲಸವಾಗಬೇಕು ಎಂದರು.

ವಸ್ತು ಪ್ರದರ್ಶನ ಸಮಿತಿಗೆ ಸಂಬಂಧಿಸಿದಂತೆ ಎಷ್ಟು ಮಳಿಗೆ ಹಾಕಬಹುದು ಎಂದು ಯೋಜನೆ ರೂಪಿಸಿಕೊಳ್ಳಿ. ಒಂದೇ ರೀತಿಯ ಮಳಿಗೆಗಳನ್ನು ಹಾಕುವ ಬದಲು ವಿವಿಧ ರೀತಿಯ ವೈವಿಧ್ಯಮಯ ಮಳಿಗೆಗಳನ್ನು ಏರ್ಪಡಿಸಿ. ಆಹಾರ ಮಳಿಗೆ ಜೊತೆಗೆ ಇಲಾಖೆಗಳಿಗೆ ಸಂಬಂಧಿಸಿದ ಮಳಿಗೆಗಳನ್ನು ತೆರೆದು ಜಾಗೃತಿ ಮೂಡಿಸುವ ಕೆಲಸವಾಗಬೇಕು. ಬೇರೆ ಬೇರೆ ಜಿಲ್ಲೆಗಳಿಗೂ ಮಳಿಗೆ ನೀಡಲು ಅವಕಾಶ ಕಲ್ಪಿಸಲಾಗುವುದು. ಮಳಿಗೆಗಳನ್ನು ವಿನೂತನ ಹಾಗೂ ಪರಿಣಾಮಕಾರಿಯಾಗಿ ನಿರ್ಮಿಸುವ ಸಂಬಂಧ ಈಗಿನಿಂದಲೇ ಚರ್ಚಿಸಿ ಎಂದರು.

ಸಮ್ಮೇಳನಕ್ಕೆ ಬರುವ ಮಹಿಳಾ ಗಣ್ಯರನ್ನು ಸೇರಿದಂತೆ ಪ್ರತಿಯೊಬ್ಬ ಮಹಿಳೆಯರ ಬಗ್ಗೆ ವಿಶೇಷ ಕಾಳಜಿ ವಹಿಸಿ ಅವರಿಗೆ ಬೇಕಾದಂತಹ ಮೂಲಭೂತ ವ್ಯವಸ್ಥೆ ಕಲ್ಪಿಸಲಾಗುವುದು. ಮಹಿಳೆಯರಿಗೆ ಗೌರವ ಹಾಗೂ ರಕ್ಷಣೆಯನ್ನು ನೀಡುವಲ್ಲಿ ಹೆಚ್ಚು ಕಾಳಜಿ ವಹಿಸಿ ಸೂಕ್ತ ವ್ಯವಸ್ಥೆ ನೀಡಲಾಗುವುದು ಎಂದರು.

ಇದೇ ಸಂದರ್ಭದಲ್ಲಿ ಮಾತನಾಡಿದ ಅವರು, ಕನ್ನಡ ರಥ ಯಾತ್ರೆಯು ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಸಂಚರಿಸಲಿದೆ. ಅದಕ್ಕೆ ಸಂಬಂಧಿಸಿದಂತೆ ರೂಟ್ ಮ್ಯಾಪ್ ಹಾಗೂ ವೇಳಾಪಟ್ಟಿಯನ್ನು ಕನ್ನಡ ಜ್ಯೋತಿ ರಥ ನಿರ್ವಹಣಾ ಸಮಿತಿಯು ತಯಾರಿಸಬೇಕು. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಂಪರ್ಕದಲ್ಲಿದ್ದುಕೊಂಡು ಯೋಜನೆಯನ್ನು ರೂಪಿಸಿ ತುರ್ತಾಗಿ ನೀಡಬೇಕು. ವಾಡಿಕೆ ಪ್ರಕಾರ ಕರ್ನಾಟಕ ರಾಜ್ಯದಲ್ಲಿ ಭುವನೇಶ್ವರಿ ದೇವಾಲಯವು ಉತ್ತರ ಕನ್ನಡ ಜಿಲ್ಲೆಯಲ್ಲಿ ಮಾತ್ರ ಇದ್ದು, ಅಲ್ಲಿಂದಲ್ಲಿಯೇ ಕನ್ನಡ ಜ್ಯೋತಿ ರಥಯಾತ್ರೆ ಪ್ರಾರಂಭವಾಗಬೇಕು ಎಂದು ಅನಿಸಿಕೆ ವ್ಯಕ್ತಪಡಿಸಿದರು.

ಸಭೆಯಲ್ಲಿ ಕನ್ನಡ ಸಾಹಿತ್ಯ ಸಮ್ಮೇಳನದ ಸಮನ್ವಯ ಸಮಿತಿ ಅಧ್ಯಕ್ಷೆ ಡಾ.ಮೀರಾ ಶಿವಲಿಂಗಯ್ಯ, ಆಹಾರ ಸಮಿತಿಯ ಉಪಾಧ್ಯಕ್ಷ ಸಿ ಡಿ ಗಂಗಾಧರ್, ಮಹಿಳಾ ಸಮಿತಿಯ ಅಧ್ಯಕ್ಷೆ ಸುನಂದಾ ಜಯರಾಮ್, ಉಪಾಧ್ಯಕ್ಷೆ ಸೌಭಾಗ್ಯ ಮಹದೇವು, ಕನ್ನಡ ಸಾಹಿತ್ಯ ಸಮ್ಮೇಳನದ ಗೌರವ ಕಾರ್ಯದರ್ಶಿ ಹರ್ಷ, ವಸತಿ ಸಮಿತಿ ಹಾಗೂ ನಗರ ಅಲಂಕಾರ ಮತ್ತು ವಿದ್ಯುತ್ ವ್ಯವಸ್ಥೆ ಸಮಿತಿಯ ಎಂ ಟಿ ರಾಜೇಂದ್ರ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಸುಂಕಾತೊಣ್ಣೂರು ಆಲೆಮನೆಗೆ ಶ್ರೀಲಂಕಾ ರೈತರ ನಿಯೋಗ ಭೇಟಿ



ಆಲೆಮನೆಗೆ ಶ್ರೀಲಂಕಾ ರೈತರ ನಿಯೋಗ ಭೇಟಿ ನೀಡಿ, ಸಾವಯವ ಕಬ್ಬು ಬೆಳೆ ಹಾಗೂ ಬೆಲ್ಲ ತಯಾರಿಕೆ ಬಗ್ಗೆ ಮಾಹಿತಿ ಪಡೆಯಿತು.

ಪಾಂಡವಪುರ, ಆ.23– ಸಾವಯವ ಕೃಷಿಕ ಬೆಲ್ಲ ಉತ್ಪಾದನೆ ಮಾಡುವ ಸುಂಕಾತೊಣ್ಣೂರು ಗ್ರಾಮದ ದೇವೇಗೌಡ ಅವರ ಆಲೆಮನೆಗೆ ಶ್ರೀಲಂಕಾ ದೇಶದ ಹಲವು ರೈತರು ಶುಕ್ರವಾರ ಭೇಟಿ ನೀಡಿ ಸಾವಯವ ಕೃಷಿ ಹಾಗೂ ಬೆಲ್ಲ ತಯಾರಿಕೆ ಕುರಿತು ಅಧ್ಯಾಯನ ನಡೆಸಿದರು.

ಶ್ರೀಲಂಕಾ ರೈತರಾದ ರಾಣಿಯಮ್ಮ ಅನುಕ ಹಾಗೂ ಶ್ರಮಿಳಾ ಸೇರಿದಂತೆ ಸುಮಾರು 13ಕ್ಕೂ ಅಧಿಕ ಮಂದಿ ರೈತರು ಸಾಯವಯ ಕೃಷಿಯ ಬಗ್ಗೆ ಮಾಹಿತಿ ಪಡೆದುಕೊಂಡರು.

ಸಾವಯವ ಪದ್ದತಿಯಲ್ಲಿ ಕಬ್ಬು ಬೆಳೆದು ಬಳಿಕ ಸಾವಯವ ಪದ್ದತಿಯಲ್ಲಿಯೇ ಬೆಲ್ಲ ಉತ್ಪಾದನೆ ಮಾಡಿ ಮಾರಾಟ ಮಾಡುವ ಮೂಲಕ ಈ ಭಾಗದಲ್ಲಿ ಸಾವಯವ ಕೃಷಿಕ ಎಂಬ ಹೆಗ್ಗಳಿಕೆಗೆ ಪಾತ್ರರಾಗಿರುವ ದೇವೇಗೌಡ ಅವರೊಂದಿಗೆ ಸುಮಾರು ಎರಡು ಗಂಟೆಗೂ ಅಧಿಕ ಕಾಲ ಸಾವಯವ ಕೃಷಿ, ಬೆಲ್ಲ ತಯಾ ರಿಕೆ ಹಾಗೂ ಮಾರುಕಟ್ಟೆಯ ಬಗ್ಗೆ ಚರ್ಚಿಸಿ ಮಾಹಿತಿ ಪಡೆದುಕೊಂಡರು. ಆಲೆಮನೆಯಲ್ಲಿ ಸಾವಯವ ಪದ್ದತಿಯಲ್ಲಿ ಯಾವುದೇ ರಾಸಾಯನಿಕ ಮಿಶ್ರಣ ಮಾಡಿದೆ, ಬೆಲ್ಲ ತಯಾರಿಕೆ ಮಾಡುವುದು ಹೇಗೆ? ಬೆಲ್ಲ ತಯಾರಿಸಿ ಬಳಿಕ ಸಂರಕ್ಷಣೆ ಹಾಗೂ ಮಾರಾಟ ಮಾಡಿದ ವಿಧಾನವನ್ನು ವೀಕ್ಷಣೆ ಮಾಡಿ, ಬಳಿಕ ಸಾವಯುವ ಬೆಲ್ಲ ಸವಿದ ರೈತರು ದೇವೇಗೌಡರ ಸಾವಯವ ಕೃಷಿಯ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು.

ಶ್ರೀಲಂಕಾ ರೈತರಿಗೆ ಮಾಹಿತಿ ನೀಡಿದ ದೇವೇಗೌಡರು ಆಲೆಮನೆ ಬಳಿಯೇ ಶ್ರೀಲಂಕಾ ರೈತರಿಗೆ ಹಿಂದೂ ಸಂಪ್ರದಾಯದಂತೆ ಬಾಳೆ ಎಲೆಯಲ್ಲಿ ಸಸ್ಯಹಾರಿ ಊಟ ಮಾಡಿಸಿದರು.

ನಂತರ ದೇವೇಗೌಡರ ಪತ್ನಿ ಕೆಂಪಮ್ಮ ಅವರು ಶ್ರೀಲಂಕಾ ದೇಶದ ರೈತ ಮಹಿಳೆಯರಿಗೆ ಹಿಂದೂ ಸಂಪ್ರದಾಯದಂತೆ ಅರಿಸಿಣ, ಕುಂಕುಮ, ಬಳೆ, ಹೂ, ರವಿಕೆ ಪೀಸ್ ಹಾಗೂ ತೆಂಗಿನ ಕಾಯಿಕೊಟ್ಟು ಅಭಿನಂಧಿಸಿದರು. ರೈತರ ದೇವೇಗೌಡರ ಸಾವಯವ ಕೃಷಿಯ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದ ಶ್ರೀಲಂಕಾ ರೈತರು ಭತ್ತ ಬೆಳೆಯುವುದಕ್ಕೆ ಪ್ರಸಿದ್ದಿ ಪಡೆದಿರುವ ಮಂಡ್ಯ ತಾಲೂಕಿನ ಶಿವಳ್ಳಿ ಬೋರೇಗೌಡರ ಜಮೀನಿಗೆ ತೆರಳಿದರು. ಇದೇ ವೇಳೆ ಫಸ್ಟ್ ಅರ್ಥ್ ಪೌಂಡೇಷನ(ಪ್ರಥಮ ಭೂಮಿ)ನ ಕಿರಣ್‌ಪ್ರಕಾಶ್ ಹಾಗೂ ಎಂ.ಪಿ.ಗಂಗಾಧರ್ ಅವರು ನೈಸರ್ಗಿಕ ಕೃಷಿ ಬೇಸಾಯ ಪದ್ದತಿಯ ಬಗ್ಗೆ ಮಾಹಿತಿ ನೀಡಿದರು.

ಸಾವಯವ ಕೃಷಿಕ ರೈತ ದೇವೇಗೌಡ ಮಾತನಾಡಿ, ಸಾವಯವ ಕೃಷಿ, ಸಾವಯವ ಆಹಾರಕ್ಕೆ ಸಾವಿಲ್ಲ, ನಾವುಗಳು ಹಣದಾಸೆಗಾಗಿ ರಾಸಾಯನಿಕ ಕೃಷಿ ಮೂಲಕ ಉತ್ಪಾದನೆ ಮಾಡುತ್ತಿರುವ ಆಹಾರ ನಮಗೆ ವಿಷವಾಗಿ ಪರಿಣಮಿಸಿದೆ. ನಮ್ಮ ಆಹಾರ ಔಷಧ ಆಗಬೇಕೆ ಹೊರತು ವಿಷ ವಾಗಬಾರದು ಎಂದು ಬೇಸರ ವ್ಯಕ್ತಪಡಿಸಿದರು.

ನಾವೆಲ್ಲರು ಭೂಮಿಯನ್ನು ಸಂರಕ್ಷಣೆ ಮಾಡಬೇಕಾಗಿದೆ. ಭೂಮಿಗೆ ಹೆಚ್ಚಾಗಿ ರಾಸಾಯನಿಕ ಬಳಕೆ ಮಾಡುವುದನ್ನು ನಿಲ್ಲಿಸಬೇಕಾಗಿದೆ. ಭೂಮಿ ರಕ್ಷಣೆ ಮಾಡಿದೆ ನಮ್ಮನ್ನ ಭೂಮಿ ರಕ್ಷಿಸುತ್ತದೆ. ಹಾಗಾಗಿ ಸಾಧ್ಯವಾದಷ್ಟು ಎಲ್ಲರು ಸಾವಯಕ ಕೃಷಿಯತ್ತ ಮುಖಮಾಡಬೇಕು ಎಂದು ತಿಳಿಸಿದರು.

ಸಂದರ್ಭದಲ್ಲಿ ಫಸ್ಟ್ ಅರ್ಥ್ ಪೌಂಡೇಷನ(ಪ್ರಥಮ ಭೂಮಿ)ನ ಕಿರಣ್‌ಪ್ರಕಾಶ್ ಹಾಗೂ ಎಂ.ಪಿ.ಗಂಗಾಧರ್ ಸೇರಿದಂತೆ ಹಲವರು ಹಾಜರಿದ್ದರು.

ಚಿನಕುರಳಿಯಲ್ಲಿ ರಥಯಾತ್ರೆಗೆ ಅದ್ದೂರಿ ಸ್ವಾಗತ



ರಾಜ್ಯಕ್ಕೆ 'ಕರ್ನಾಟಕ'ವೆಂದು ನಾಮಕರಣ ಮಾಡಿ 50 ವರ್ಷ ಪೂರೈಸಿದ ಹಿನ್ನೆಲೆಯಲ್ಲಿ ಕನ್ನಡ ಮತ್ತು ಸಂಸ್ಕೃತ ಇಲಾಖೆಯಿಂದ 'ಹೆಸರಾಯಿತು ಕರ್ನಾಟಕ ಉಸಿರಾಗಲಿ ಕನ್ನಡ' ಎಂಬ ಶೀರ್ಷಿಕೆಯಡಿ ರಾಜ್ಯಾದ್ಯಂತ ಪ್ರಚಾರ ನಡೆಸುತ್ತಿರುವ ರಥಯಾತ್ರೆ ಚಿನಕುರಳಿಗೆ ಆಗಮಿಸಿದ ವೇಳೆ ಶಾಸಕ ದರ್ಶನ್, ಗ್ರಾಪಂ ಅಧ್ಯಕ್ಷೆ ಗಾಯಿತ್ರಿ, ಡೇರಿ ಅಧ್ಯಕ್ಷರೂ ಆದ ಗ್ರಾಪಂ ಸದಸ್ಯ ಸಿ.ಶಿವಕುಮಾರ್, ತಾಪಂ ಮಾಜಿ ಸದಸ್ಯ ಸಿ.ಎಸ್.ಗೋಪಾಲಗೌಡ, ಗ್ರಾಪಂ ಉಪಾಧ್ಯಕ್ಷ ಶ್ರೀನಿವಾಸ್, ವಿಎಸ್‌ಎನ್‌ಬಿ ಅಧ್ಯಕ್ಷ ಮಂಜುನಾಥ್, ತಹಸೀಲ್ದಾರ್ ಸಂತೋಷ್, ಇಓ ಲೋಕೇಶ್ ಮೂರ್ತಿ, ಪಿಡಿಓ ಆರತಿಕುಮಾರಿ, ಕಸಾಪ ಅಧ್ಯಕ್ಷ ಪ್ರಕಾಶ್, ಹೋಬಳಿ ಅಧ್ಯಕ್ಷ ಮಹದೇವು, ಕರವೇ ಅಧ್ಯಕ್ಷ ಗಜೇಂದ್ರ ಸೇರಿದಂತೆ ಗ್ರಾಪಂ ಸದಸ್ಯರು, ಡೇರಿ ಹಾಗೂ ಸೊಸೈಟಿ ನಿರ್ದೇಶಕರು, ಮುಖಂಡರು, ಗ್ರಾಮಸ್ಥರು ಅದ್ದೂರಿಯಾಗಿ ಸ್ವಾಗತಿಸಿದರು.

ಜೈನ ಬಸದಿಗೆ ಮೇಘಾಲಯ ರಾಜ್ಯಪಾಲ ಸಿ.ಹೆಚ್.ವಿಜಯಶಂಕರ್ ಭೇಟಿ



ಪಟ್ಟಣದ ಐತಿಹಾಸಿಕ ಜೈನಬಸದಿಗೆ ಭೇಟಿ ನೀಡಿದ ಮೇಘಾಲಯ ರಾಜ್ಯಪಾಲ ಸಿ.ಎಚ್.ವಿಜಯಶಂಕರ್ ಅವರನ್ನು ಬಿಜೆಪಿ ಮುಖಂಡರು ಸನ್ಮಾನಿಸಿದರು.

ಶ್ರೀರಂಗಪಟ್ಟಣ, ಆ.23– ಪಟ್ಟಣದ ಜೈನ ಬಸದಿಗೆ ಭೇಟಿ ನೀಡಿ ಆದಿನಾಥರ ದರ್ಶನ ಪಡೆದ ಮೇಘಾಲಯದ ರಾಜ್ಯಪಾಲ ಸಿ.ಹೆಚ್.ವಿಜಯಶಂಕರ್ ಅವರನ್ನು ಬಿಜೆಪಿ ಮುಖಂಡರು ಅಭಿನಂದಿಸಿದರು.

ಪಟ್ಟಣದ ಇತಿಹಾಸಿಕ ಜೈನ ಬಸದಿಗೆ ಭೇಟಿ ನೀಡಿದ ಅವರು 1008ನೇ ಶ್ರೀ ಆದಿನಾಥ ತೀರ್ಥಂಕರರಿಗೆ ಪ್ರಾರ್ಥನೆ ಸಲ್ಲಿಸಿ, ವಿಶೇಷ ಪೂಜೆ ಸಲ್ಲಿಸಿದರು. ಅರ್ಚಕ ಸ್ಮನ್ಮತಿ ಪೂಜೆ ಕಾರ್ಯ ನೆರವೇರಿಸಿಕೊಟ್ಟರು.

ರಾಜ್ಯಪಾಲ ಸಿ.ಎಚ್.ವಿಜಯ ಶಂಕರ್ ಅವರನ್ನು ಬಿಜೆಪಿ ಮಂಡಲ ಅಧ್ಯಕ್ಷ ಪೀಹಳ್ಳಿ ರಮೇಶ್, ರಾಜ್ಯ ಕಾರ್ಯಕಾರಿಣಿ ಸದಸ್ಯ ಡಾ.ಸಿದ್ದರಾಮಯ್ಯ, ಮುಖಂಡರಾದ ಇಂಡುವಾಳು ಎಸ್. ಸಚ್ಚಿದಾನಂದ, ರೈತ ಮೋರ್ಚಾ ಉಪಾಧ್ಯಕ್ಷ ಕೆ.ಎಸ್ ನಂಜುಂಡೇಗೌಡ, ಜಿಲ್ಲಾ ಕಾರ್ಯದರ್ಶಿ ಹೊಸಹಳ್ಳಿ ಮಹದೇವು, ಟಿ.ಶ್ರೀಧರ್ ಸೇರಿದಂತೆ ಇತರ ಬಿಜೆಪಿ ಮುಖಂಡರು ಸನ್ಮಾನಿಸಿದರು.

ನಂತರ ಸ್ಥಳಿಯ ಬಿಜೆಪಿಯ ಮುಖಂಡರು, ಸ್ಥಳೀಯ ಪುರಸಭೆ ಜನಪ್ರತಿನಿಧಿಗಳು ಹಾಗೂ ಕಾರ್ಯಕರ್ತರು ಸೇರಿದಂತೆ ಸಾರ್ವಜನಿಕರೊಂದಿಗೆ ರಾಜ್ಯಪಾಲ ಸಿ.ಎಚ್. ವಿಜಯಶಂಕರ್ ಫೋಟೋ ತೆಗೆಸಿಕೊಂಡು ಸ್ಥಳೀಯರ ಪ್ರೀತಿಗೆ ಪಾತ್ರರಾದರು.

ಈ ವೇಳೆ ಪುರಸಭಾ ಸದಸ್ಯರಾದ ಎಸ್.ಟಿ. ರಾಜು, ಗಂಜಾಂ ಶಿವು, ಮುಖಂಡರುಗಳಾದ ಪುಟ್ಟರಾಜು, ಬಿ.ಸಿ.ಕೃಷ್ಣೇ ಗೌಡ, ಎಂ.ವಿ.ಕೃಷ್ಣ ಚಂದ್ರಶೇಖರ್, ಲಕ್ಷ್ಮೀ ನಾರಾಯಣ್, ಪ್ರಭಾಕರ್ ಗುಪ್ತ, ಚಂದನ್, ಕಿರಣ್ ಸಿಂಗ್ ಇತರರು ಇದ್ದರು.

ಇಂದು ವಿದ್ಯುತ್ ವ್ಯತ್ಯಯ

ಮಂಡ್ಯ, ಆ.23– ನಾಳೆ (ಆ.24) ಬೆಳಗ್ಗೆ 9 ರಿಂದ ಸಂಜೆ 6ರವರೆಗೆ ಹೊಡಾಘಟ್ಟ, ಕೀಲಾರ, ಹನಕೆರೆ, ಹಳೆ ಬೂದನೂರು, ಹೊಸ ಬೂದನೂರು, ಈಚಗೆರೆ, ಅಂಬರಹಳ್ಳಿ, ಆಲಕೆರೆ, ನಲ್ಲಹಳ್ಳಿ, ಕಚ್ಚಿಗೆರೆ, ಶ್ರೀನಿವಾಸಪುರಗೇಟ್, ಹೊನಗಾನಹಳ್ಳಿ ಮಠ, ತುಂಬಕೆರೆ, ಚಾಮಲಾಪುರ, ಉಮ್ಮಡಹಳ್ಳಿ, ಬಸವನಪುರ ಹಾಗೂ ಸುತ್ತಮುತ್ತಲಿನ ಗ್ರಾಮಗಳಲ್ಲಿ ವಿದ್ಯುತ್ ವ್ಯತ್ಯಯ ಉಂಟಾಗಲಿದೆ ಎಂದು ಪ್ರಕಟಣೆ ತಿಳಿಸಿದೆ.

ರಾಜಕೀಯ ಪ್ರವೇಶದ ಬಳಿಕವೂ ಯಶಸ್ವಿ ಆಪರೇಷನ್

ಮಂಜುನಾಥ್ ಕೆಲಸಕ್ಕೆ ಮೆಚ್ಚುಗೆ



ಬೆಂಗಳೂರು: ರಾಜಕೀಯ ಪ್ರವೇಶದ ಬಳಿಕವೂ ಬೆಂಗಳೂರು ಗ್ರಾಮಾಂತರ ಲೋಕ ಸಭಾ ಕ್ಷೇತ್ರದ ಸಂಸದ ಡಾ. ಮಂಜುನಾಥ್ ಅವರು ವೈದ್ಯಕೀಯ ವೃತ್ತಿ ಮುಂದುವರೆಸಿದ್ದಾರೆ.

ಮೂತ್ರಪಿಂಡ ವೈಫಲ್ಯ ಜೊತೆಗೆ ಹೃದಯ ಸಮಸ್ಯೆ ಹೊಂದಿದ್ದ 54 ವರ್ಷದ ರೋಗಿಗೆ ಹೃದಯದ ರಕ್ತನಾಳಗಳಲ್ಲಿ ಶೇ.90ರಷ್ಟು ರಕ್ತ ಪರಿಚಲನೆ ಸ್ಥಗಿತವಾಗಿತ್ತು. ಪರೀಕ್ಷೆ ನಡೆಸಿ ಹೊಸ ಆರ್ಬಿಟಲ್ ಅಥೆರೆಕ್ಟಮಿ ಸಾಧನ ಬಳಸಿ ಸಂಸದರು ಮತ್ತು ಹಿರಿಯ ವೈದ್ಯರಾದ ಡಾ. ಮಂಜುನಾಥ್ ನೇತೃತ್ವದಲ್ಲಿ ಶಸ್ತ್ರ ಚಿಕಿತ್ಸೆ ಯಶಸ್ವಿ ಮಾಡಲಾಯಿತು.

ರೋಗಿಯು ಜಯನಗರದ ಖಾಸಗಿ ಆಸ್ಪತ್ರೆಯಲ್ಲಿ ದಾಖಲಾಗಿದ್ದರು. ಆರ್ಬಿಟಲ್ ಅಥೆರೆಕ್ಟಮಿ ಸಾಧನಕ್ಕೆ 3 ಲಕ್ಷ ರೂ. ಬೇಕಾಗಿತ್ತು. ಆದರೆ ಸಂಸದರ ವಿನಂತಿ ಮೇರೆಗೆ ಈ ಸಾಧನವನ್ನು ಉಚಿತವಾಗಿ ಒದಗಿಸಲಾಗಿದೆ.

ರಾಜಕೀಯ ಪ್ರವೇಶಿಸಿದ ಬಳಿಕವೂ ವೈದ್ಯಕೀಯ ಸೇವೆ ಮುಂದುವರೆಸಿರುವುದಕ್ಕೆ ಡಾ.ಮಂಜುನಾಥ್ ಅವರಿಗೆ ಸಾಮಾಜಿಕ ಜಾಲತಾಣದಲ್ಲಿ ಮೆಚ್ಚುಗೆ ವ್ಯಕ್ತವಾಗುತ್ತಿದೆ.

ಆದಾಯಕ್ಕಿಂತ ಹೆಚ್ಚು ಆಸ್ತಿ ಪ್ರಕರಣ: ಲೋಕಾಯುಕ್ತ ಪೊಲೀಸರಿಂದ ಡಿ.ಕೆ.ಶಿವಕುಮಾರ್ ವಿಚಾರಣೆ



ಡಿ.ಕೆ.ಶಿವಕುಮಾರ್

ಬೆಂಗಳೂರು: ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರನ್ನು ಆದಾಯಕ್ಕಿಂತ ಹೆಚ್ಚು ಆಸ್ತಿ ಹೊಂದಿದ ಪ್ರಕರಣದಲ್ಲಿ ಲೋಕಾಯುಕ್ತ ಪೊಲೀಸರು ಗುರುವಾರ ಎರಡು ತಾಸು ವಿಚಾರಣೆ ನಡೆಸಿದ್ದಾರೆ. ವಿಚಾರಣೆಗೆ ಹಾಜರಾಗುವಂತೆ ಲೋಕಾಯುಕ್ತ ಪೊಲೀಸರು ಶಿವಕುಮಾರ್ ಅವರಿಗೆ ಸಮನ್ಸ್ ನೀಡಿದ್ದರು. ಅದರಂತೆ ನಗರದಲ್ಲಿನ ಲೋಕಾಯುಕ್ತ ಕಚೇರಿಗೆ ಅವರು ಗುರುವಾರ ಮಧ್ಯಾಹ್ನ ಬಂದಿದ್ದರು. ಲೋಕಾಯುಕ್ತ ಎಸ್‌ಪಿ ಕೆ.ವಂಶಿಕೃಷ್ಣ ಮತ್ತು ಡಿವೈಎಸ್‌ಪಿ ಸತೀಶ್ ಎಂ.ಎಚ್. ಅವರ ತಂಡವು ವಿಚಾ ರಣೆ ನಡೆಸಿದೆ ಎಂದು ಲೋಕಾಯುಕ್ತ ಮೂಲಗಳು ಹೇಳಿವೆ. ಮಧ್ಯಾಹ್ನ 2.15ರಿಂದ 4.15ರವರೆಗೆ ವಿಚಾರಣೆ ನಡೆಸಲಾಗಿದೆ. ಆದಾಯ ಮತ್ತು ಆಸ್ತಿಗೆ ಸಂಬಂಧಿಸಿದಂತೆ ಮಾಹಿತಿ ನೀಡುವಂತೆ ಹಾಗೂ ದಾಖಲೆಗಳನ್ನು ಸಲ್ಲಿಸುವಂತೆ ಸೂಚಿಸಲಾಗಿದೆ ಎಂದು ಮೂಲಗಳು ಹೇಳಿವೆ.

ವಿಚಾರಣೆ ಮುಗಿಸಿ ಹೊರಬಂದ ಶಿವಕುಮಾರ್, ಬುಧವಾರ ವಿಚಾರಣೆಗೆ ಹಾಜರಾಗಲು ನೋಟಿಸ್ ನೀಡಿದ್ದರು. ಆಲಮಟ್ಟಿ ಅಣೆಕಟ್ಟೆಗೆ ಬಾಗಿನ ಅರ್ಪಿಸುವ ಕಾರ್ಯಕ್ರಮವಿದ್ದ ಕಾರಣ ಗುರುವಾರ ಹಾಜರಾಗುತ್ತೇನೆ ಎಂದು ಮನವಿ ಮಾಡಿಕೊಂಡಿದ್ದೆ. ಅದರಂತೆ ವಿಚಾರಣೆಗೆ ಬಂದಿದ್ದೆ. ಅಧಿಕಾರಿಗಳು ಕೇಳಿದ ಪ್ರಶ್ನೆಗಳಿಗೆ ಉತ್ತರ ಕೊಟ್ಟಿದ್ದೇನೆ. ಒಂದಷ್ಟು ವಿಚಾರಗಳಲ್ಲಿ ಸ್ಪಷ್ಟನೆ ಕೇಳಿದ್ದಾರೆ. ನನ್ನ ಬಳಿ ಇರುವ ದಾಖಲೆಗಳನ್ನು ಸಲ್ಲಿಸುತ್ತೇನೆ ಎಂದರು. ಶಿವಕುಮಾರ್ ವಿರುದ್ಧ 2017ರಲ್ಲಿ ಸಿಬಿಐ ಪ್ರಕರಣ ದಾಖಲಿಸಿಕೊಂಡು ತನಿಖೆ ಆರಂಭಿಸಿತ್ತು. ಬದಲಾದ ರಾಜಕೀಯ ಪರಿಸ್ಥಿತಿಯಲ್ಲಿ ಸಿಬಿಐ ತನಿಖೆಗೆ ನೀಡಿದ್ದ ಅನುಮತಿಯನ್ನು ಈಗಿನ ಕಾಂಗ್ರೆಸ್ ಸರ್ಕಾರವು ವಾಪಸ್ ಪಡೆದುಕೊಂಡಿತ್ತು. ಪ್ರಕರಣದ ತನಿಖೆಯನ್ನು ನಡೆಸುವಂತೆ ಲೋಕಾಯುಕ್ತಕ್ಕೆ ಸೂಚಿಸಿತ್ತು. ಪ್ರಕರಣದಲ್ಲಿ ಶಿವಕುಮಾರ್ ಅವರನ್ನು ಲೋಕಾಯುಕ್ತ ವಿಚಾರಣೆಗೆ ಒಳಪಡಿಸಿದ್ದು ಇದೇ ಮೊದಲು.

ಸಿಬಿಐ ಅಧಿಕಾರಿಗಳೇ ಪರವಾಗಿಲ್ಲ

ಸಿಬಿಐನವರೇ ಪ್ರಶ್ನೆ ಕೇಳಲಿಲ್ಲ ಒಂದು ದಿನವೂ ವಿಚಾರಣೆಗೆ ಕರೆಯಲಿಲ್ಲ. ಆದರೆ ಲೋಕಾಯುಕ್ತದವರು ವಿಚಿತ್ರ ಪ್ರಶ್ನೆಗಳನ್ನು ಕೇಳಿ ಹಿಂಸೆ ಕೊಡುತ್ತಿದ್ದಾರೆ. ಇವರಿಗಿಂತ ಸಿಬಿಐನವರೇ ಪರವಾಗಿಲ್ಲ' ಎಂದು ಶಿವಕುಮಾರ್ ಹೇಳಿದ್ದಾರೆ. ಸುದ್ದಿಗಾರರ ಜತೆ ಮಾತನಾಡಿದ ಅವರು 'ಪ್ರಕರಣವನ್ನು ರಾಜ್ಯ ಸರ್ಕಾರ ಸಿಬಿಐನಿಂದ ಲೋಕಾಯುಕ್ತಕ್ಕೆ ವರ್ಗಾವಣೆ ಮಾಡಿತ್ತು. ಆದರೆ ಸಿಬಿಐ ತನಿಖೆ ನಿಲ್ಲಿಸಿಲ್ಲ. ನನ್ನ ಕುಟುಂಬ ಮತ್ತು ಸ್ನೇಹಿತರಲ್ಲಿ ನೂರಕ್ಕೂ ಹೆಚ್ಚು ಜನರಿಗೆ ಸಿಬಿಐ ಕಿರುಕುಳ ನೀಡುತ್ತಿದೆ. ಲೋಕಾಯುಕ್ತವೂ ಇದೇ ಕೆಲಸ ಮಾಡುತ್ತಿದೆ' ಎಂದು ಹೇಳಿದ್ದಾರೆ.

ಮೇಘಾಲಯ ರಾಜ್ಯಪಾಲರಿಗೆ ಸನ್ಮಾನ



ಮೇಘಾಲಯ ರಾಜ್ಯಪಾಲ ಸಿ.ಹೆಚ್. ವಿಜಯಶಂಕರ್ ಅವರನ್ನು ಡಾ. ರಾಜ್ ಶಿವಸೈನ್ಯ ಶಿವರಾಜ್‌ಕುಮಾರ್ ಅಭಿಮಾನಿಗಳ ಸಂಘದಿಂದ ಸನ್ಮಾನಿಸಲಾಯಿತು. ಈ ವೇಳೆ ಚಿತ್ರನಟ ಸೋಮಣ್ಣ, ಬಿ.ಎಸ್. ರವಿ, ಭಾಸ್ಕರ್ ಅರಸು, ರಾಜೇಂದ್ರ, ಮಹೇಶ್, ವಡಿವೇಲು, ವಿಶ್ವನಾಥ್, ಪ್ರಭಾ, ಅಜಯ್ ಉಪಸ್ಥಿತರಿದ್ದರು.


ಎಂ.ಬಿ. ಪಾಟೀಲ್ ವಿರುದ್ಧ ಪ್ರಾಸಿಕ್ಯೂಷನ್‌ಗೆ ಅನುಮತಿ ನೀಡಿ: ರಾಜ್ಯಪಾಲರಿಗೆ ದೂರು ಸಲ್ಲಿಕೆ



ಬೆಂಗಳೂರು: ಬೃಹತ್ ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ್ ವಿರುದ್ದ ಪ್ರಾಸಿಕ್ಯೂಷನ್‌ಗೆ ಅನುಮತಿ ಕೋರಿ ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್‌ಗೆ ದೂರು ಸಲ್ಲಿಕೆಯಾಗಿದೆ. ಸಾಮಾಜಿಕ ಕಾರ್ಯಕರ್ತ ದಿನೇಶ್ ಕಲ್ಲಹಳ್ಳಿ ಅವರು ಇಂದು ರಾಜಭವನಕ್ಕೆ ತೆರಳಿ ದೂರು ನೀಡಿದ್ದಾರೆ.

ಆರೋಪ ಏನು?: ಎಂಬಿ ಪಾಟೀಲ್ ಅವರು ಕರ್ನಾಟಕ ಕೈಗಾರಿಕಾ ಪ್ರದೇಶಗಳ ಅಭಿವೃದ್ಧಿ ಮಂಡಳಿ ಭೂಮಿಯನ್ನು ಕಾನೂನು ಬಾಹಿರವಾಗಿ ಹಂಚಿಕೆ ಮಾಡಿದ್ದಾರೆ. ನಿಯಮದ ಪ್ರಕಾರ ಆನ್‌ಲೈನ್‌ನಲ್ಲಿ ಪ್ರಕ್ರಿಯೆ ನಡೆಸಬೇಕಿತ್ತು. ಆದರೆ ಇವರು ಕೈಗಾರಿಕೆ ನಡೆಸದ ಕಂಪನಿಗಳಿಗೆ ಹಂಚಿಕೆ ಮಾಡಿದ್ದಾರೆ. ಬಿಡದಿ, ವಸಂತನರಸಾಪುರ, ಕೋಲಾರ ನರಸಾಪುರ, ದೊಡ್ಡಬಳ್ಳಾಪುರ ಕೈಗಾರಿಕಾ ಪ್ರದೇಶಗಳಲ್ಲಿ ನಿವೇಶನ ಹಂಚಿಕೆಯಲ್ಲಿ ಅಕ್ರಮ ಎಸಗಲಾಗಿದೆ. ಕಾನೂನು ಬಾಹಿರವಾಗಿ ನಿಯಮಗಳನ್ನು ಗಾಳಿಗೆ ತೂರಿ ನಿವೇಶನ ಹಂಚಿಕೆ ಮಾಡಲಾಗಿದೆ. ಇವರ ಕೆಲಸಗಳಿಗೆ ಕೆಲ ಅಧಿಕಾರಿಗಳು ಸಾಥ್ ನೀಡಿದ್ದಾರೆ. ಈ ಅಕ್ರಮ ಹಂಚಿಕೆಯಿಂದ ಕೆಐಎಡಿಬಿಗೆ ಕೋಟ್ಯಾಂತರ ರೂ. ನಷ್ಟವಾಗಿದೆ ಎಂದು ದೂರಿನಲ್ಲಿ ಆರೋಪಿಸಿದ್ದಾರೆ.

ಮಹಾಕುಂಬಾಭಿಷೇಕ



ಪ್ರಧಾನ ಅರ್ಚಕ ಸುಬ್ರಮಣ್ಯಸ್ವಾಮಿ ನೇತೃತ್ವದಲ್ಲಿ ಶ್ರೀ ಷಷ್ಠಿ ಸುಬ್ರಮಣ್ಯ ಸ್ವಾಮಿ ದೇವಸ್ಥಾನದಲ್ಲಿ ಮಹಾ ಕುಂಬಾಭಿಷೇಕ ಹಾಗೂ ಕಳಸ ಪ್ರತಿಷ್ಠಾಪನೆ ಜರುಗಿತು. ಈ ಕಾರ್ಯಕ್ರಮದಲ್ಲಿ ಮೈಸೂರು ಜಿಲ್ಲಾ ಬಿಜೆಪಿ ಅಧ್ಯಕ್ಷ ಎಲ್.ಆರ್. ಮಹದೇವಸ್ವಾಮಿ ಪತ್ನಿ ಸಮೇತರಾಗಿ ಭಾಗವಹಿಸಿದ್ದರು.

ಕಾಪ್ಸ್ ಸಂಸ್ಥೆಯ ವಿದ್ಯಾರ್ಥಿ ಕುಂಬಾರಕೊಪ್ಪಲು ಕೆ.ಸಿ.ಸುಖಾಂತ್‌ಗೌಡನಿಗೆ ಸಮಗ್ರ ಪ್ರಶಸ್ತಿ



ಮೈಸೂರು, ಆ.23(ಎಸ್‌ಪಿಎನ್)– ಬೆಂಗಳೂರಲ್ಲಿ ಇತ್ತೀಚೆಗೆ ನಡೆದ ವಿಭಾಗೀಯ ಮಟ್ಟದ 14 ವರ್ಷದ ಬಾಲಕರ ಕ್ರೀಡಾಕೂಟ ಅಥ್ಲೆಟಿಕ್ ವಿಭಾಗದಲ್ಲಿ ಕೊಡಗು ಜಿಲ್ಲೆಯ ಗೋಣಿಕೊಪ್ಪದ ಕೂರ್ಗ್ ಕಾಪ್ಸ್ ಪಬ್ಲಿಕ್ ಶಾಲೆಯ 8ನೇ ತರಗತಿ ವಿದ್ಯಾರ್ಥಿ ಕೆ.ಸಿ.ಸುಖಾಂತ್‌ಗೌಡ ಸಮಗ್ರ ಪ್ರಶಸ್ತಿ ಪಡೆದಿದ್ದಾರೆ.

100 ಮೀ. ಮತ್ತು 200 ಮೀ. ಓಟದ ಸ್ಪರ್ಧೆಯಲ್ಲಿ ಚಿನ್ನದ ಪದಕ ಹಾಗೂ 400 ಮೀ. ಓಟದ ಸ್ಪರ್ಧೆಯಲ್ಲಿ ಬೆಳ್ಳಿ ಪದಕ ಪಡೆದು ಚಾಂಪಿಯನ್ ಆಗಿದ್ದಾರೆ. ಕೆ.ಸಿ.ಸುಖಾಂತ್‌ಗೌಡ ಮೂಲತಃ ಮೈಸೂರು ನಗರದ ಕುಂಬಾರಕೊಪ್ಪಲಿನ ಮಾಜಿ ಕಾರ್ಪೊರೇಟರ್ ಹಾಗೂ ಟಿಎಪಿಸಿಎಂಎಸ್ ಮಾಜಿ ಅಧ್ಯಕ್ಷರಾದ ಲಲಿತಮ್ಮ ವಿಷಕಂಠೇಗೌಡರ ಮೊಮ್ಮಗ ಹಾಗೂ ಕಾಂಗ್ರೆಸ್ ಮುಖಂಡ ಚೇತನ್ ವಿಷಕಂಠೇಗೌಡ ಅವರ ಪುತ್ರನಾಗಿದ್ದು, ಕೊಡಗಿನ ಪ್ರತಿಷ್ಠಿತ ಶಿಕ್ಷಣ ಸಂಸ್ಥೆಗಳಲ್ಲಿ ಒಂದಾಗಿರುವ ಕಾಪ್ಸ್ ಪಬ್ಲಿಕ್ ಶಾಲೆಯಲ್ಲಿ ವ್ಯಾಸಂಗ ಮಾಡುತ್ತಿದ್ದಾರೆ.

ಹಿರಿಯ ನಾಗರಿಕರಿಗೆ ಸನ್ಮಾನ



ಮೈಸೂರು ತಾಲೂಕು ಹುಯಿಲಾಳು ಗ್ರಾಮದ ಶ್ರೀ ಮನೆ ಮಂಚಮ್ಮ ದೇವಸ್ಥಾನ ಟ್ರಸ್ಟ್ ವತಿಯಿಂದ ಸ್ವಾತಂತ್ರ್ಯೋತ್ಸವದ ಅಂಗವಾಗಿ ಗ್ರಾಮದ ಹಿರಿಯ ನಾಗರಿಕರಾದ ಅಂಗಡಿ ಕೃಷ್ಣಪ್ಪ, ಜವರೇಗೌಡ, ಶಿವಣ್ಣೇಗೌಡ, ಸಿದ್ದೇಗೌಡ ಅವರನ್ನು ಟ್ರಸ್ಟ್ ಅಧ್ಯಕ್ಷ ಹುಯಿಲಾಳು ರಾಮಸ್ವಾಮಿ ಸನ್ಮಾನಿಸಿದರು. ಈ ವೇಳೆ ರೋಹಿಣಿ, ರೇಣುಕಾ ಹುಯಿಲಾಳು, ಮಂಜುನಾಥ್, ಪ್ರಸಾದ್ ಉಪಸ್ಥಿತರಿದ್ದರು.

ಸರ್ಕಾರದ ಎಲ್ಲಾ ಇಲಾಖೆಗಳ ನಾಮಫಲಕವನ್ನು ಕಡ್ಡಾಯವಾಗಿ ಕನ್ನಡದಲ್ಲೇ ಪ್ರದರ್ಶಿಸಬೇಕು

ಸರ್ಕಾರದ ಮುಖ್ಯ ಕಾರ್ಯದರ್ಶಿ ಆದೇಶ

ಬೆಂಗಳೂರು: ಸರ್ಕಾರದ ಎಲ್ಲಾ ಇಲಾಖೆಗಳ ನಾಮಫಲಕ ಕಡ್ಡಾಯವಾಗಿ ಕನ್ನಡದಲ್ಲಿ ಇರುವಂತೆ ಸರ್ಕಾರದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಆದೇಶ ಹೊರಡಿಸಿದ್ದಾರೆ.

ಕರ್ನಾಟಕ ರಾಜ್ಯದಲ್ಲಿ ಕನ್ನಡವೇ ಆಡಳಿತ ಭಾಷೆಯಾಗಿರುತ್ತದೆ. ರಾಜ್ಯದಲ್ಲಿ ಕನ್ನಡ ಭಾಷೆಯ ಸಮಗ್ರ ಅಭಿವೃದ್ಧಿಗಾಗಿ ಕನ್ನಡ ಭಾಷಾ ಸಮಗ್ರ ಅಭಿವೃದ್ಧಿ ಅಧಿನಿಯಮ, 2022 ಹಾಗೂ ಕನ್ನಡ ಭಾಷಾ ಸಮಗ್ರ ಅಭಿವೃದ್ಧಿ (ತಿದ್ದುಪಡಿ) ಅಧಿನಿಯಮ, 2024 ಜಾರಿಗೆ ಬಂದಿದೆ. ಕನ್ನಡ ಭಾಷಾ ಸಮಗ್ರ ಅಭಿವೃದ್ಧಿ ಅಧಿನಿಯಮ, 2022 ರನ್ವಯ ಕನ್ನಡ ಭಾಷೆಯು ರಾಜ್ಯದ ಹಾಗೂ ಸ್ಥಳೀಯ ಪ್ರಾಧಿಕಾರದ ಅಧಿಕೃತ ಭಾಷೆಯಾಗಿದೆ. ಆದ್ದರಿಂದ, ಸರ್ಕಾರದ ಎಲ್ಲಾ ಇಲಾಖೆಗಳಲ್ಲಿ ಇಲಾಖೆಗಳ ಅಧೀನದಲ್ಲಿ ಬರುವ ಎಲ್ಲಾ ಕ್ಷೇತ್ರ ಇಲಾಖೆಗಳಲ್ಲಿ, ಆಯುಕ್ತಾಲಯ, ನಿರ್ದೇಶನಾಲಯ, ನಿಗಮ, ಮಂಡಳಿ, ಪ್ರಾಧಿಕಾರಗಳ ಆವರಣಗಳಲ್ಲಿನ ಹೆಸರು, ಪದನಾಮ, ಸೇವಾ ಅವಧಿಯ ನಾಮ ಫಲಕಗಳು, ಮಾರ್ಗಗಳ ಸೂಚನಾ ಫಲಕಗಳು, ಇನ್ನಿತರೆ ಯಾವುದೇ ನಾಮಫಲಕಗಳನ್ನು ಕಡ್ಡಾಯವಾಗಿ ಕನ್ನಡದಲ್ಲಿಯೇ ಪ್ರದರ್ಶಿಸಬೇಕು ಎಂದು ಆದೇಶದಲ್ಲಿ ತಿಳಿಸಿದ್ದಾರೆ.

ತೀರಾ ಅನಿವಾರ್ಯವಿದ್ದಲ್ಲಿ ಮಾತ್ರ ಕಡ್ಡಾಯವಾಗಿ ಕನ್ನಡ ಭಾಷೆಯು ಶೇ.60 ರಷ್ಟು ನಾಮಫಲಕದ ಮೇಲ್ಭಾಗದಲ್ಲಿರುವಂತೆ ಹಾಗೂ ಶೇ.40 ರಷ್ಟು ಆಂಗ್ಲಭಾಷೆಯಲ್ಲಿ ಪ್ರದರ್ಶಿಸಲು ಅಗತ್ಯ ಕ್ರಮ ವಹಿಸುವಂತೆ ಸರ್ಕಾರದ ಮುಖ್ಯ ಕಾರ್ಯದರ್ಶಿ ಡಾ. ಶಾಲಿನಿ ರಜನೀಶ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮಾಲೀಕನಿಗೆ ಮಹಾಮೋಸ; ನೌಕರನ ಬಂಧನ

ಮೈಸೂರು, ಆ.23(ಎಸ್‌ಪಿಎನ್)– ಕೆಲಸಕೊಟ್ಟ ಮಾಲೀಕನಿಗೆ ವಂಚಿಸಿ ಪರಾರಿಯಾಗಿದ್ದ ನೌಕರರನನ್ನು ನಜರ್‌ಬಾದ್ ಠಾಣೆ ಪೊಲೀಸರು ಬಂಧಿಸಿದ್ದಾರೆ,

ನಜರ್‌ಬಾದ್ ಜೈನ್ ಸ್ಟೀಲ್ಸ್‌ನ ಮಾಜಿ ನೌಕರ ಶಿವಸ್ವಾಮಿ(27) ಬಂಧಿತನಾಗಿದ್ದು, ಈತನನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ.

ಈತ ನಜರ್‌ಬಾದ್‌ನಲ್ಲಿರುವ ಪಿ. ಲಲಿತ್ ಜೈನ್ ಮಾಲೀಕತ್ವದ ಜೈನ್ ಸ್ಟೀಲ್ಸ್‌ನಲ್ಲಿ ಸೇಲ್ಸ್ ವಿಭಾಗದ ಕಾರ್ಯ ನಿರ್ವಾಹಕನಾಗಿ ಕರ್ತವ್ಯ ನಿರ್ವಹಿಸುತ್ತಿದ್ದ. ಗ್ರಾಹಕರು ಮತ್ತು ವಿತರಕರಿಂದ ವಸೂಲಿ ಮಾಡಿದ್ದ 9.88 ಲಕ್ಷ ರೂ.ಗಳನ್ನು ಕಂಪೆನಿಗೆ ಪಾವತಿ ಮಾಡದೇ ದುರ್ಬಳಕೆ ಮಾಡಿಕೊಂಡು ಪರಾರಿಯಾಗಿದ್ದ. ಈ ಸಂಬಂಧ ಅಂಗಡಿ ಮಾಲೀಕ ಲಲಿತ್ ಜೈನ್, ನಜರ್‌ಬಾದ್ ಠಾಣೆಗೆ 2023ರ ನವಂಬರ್‌ನಲ್ಲಿ ದೂರು ನೀಡಿದ್ದರು. ಈ ಸಂಬಂಧ ಪ್ರಕರಣ ದಾಖಲಿಸಿಕೊಂಡ ಪೊಲೀಸರು, ತನಿಖೆ ಕೈಗೊಂಡು ವರ್ಷದ ಬಳಿಕ ಬನ್ನೂರು ಹೋಬಳಿಯ ಕೆಂಪೇಗೌಡನ ಹುಂಡಿ ಗ್ರಾಮದಲ್ಲಿ ಕಾರ್ಯಾಚರಣೆ ನಡೆಸಿ ಬಂಧಿಸಿದ್ದಾರೆ.

ಸುಶೀಲಮ್ಮ ನಿಧನ



ಮೈಸೂರು, ಆ.23– ಮೈಸೂರು ಶ್ರೀರಾಂಪುರದ ಮಧುವನ ಬಡಾವಣೆ ನಿವಾಸಿ ಶ್ರೀಮತಿ ಸುಶೀಲಮ್ಮ(92) ಅವರು ವಯೋಸಹಜ ಅನಾರೋಗ್ಯದಿಂದ ನಿಧನರಾದರು.

ಇವರು ಪುತ್ರ, ನಿವೃತ್ತ ಬ್ಯಾಂಕ್ ಅಧಿಕಾರಿ ವಿಜಯ್ ಕುಮಾರ್, ಇಬ್ಬರು ಪುತ್ರಿಯರು ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಚಾಮುಂಡಿಬೆಟ್ಟ ತಪ್ಪಲಿನಲ್ಲಿನ ಹರಿಶ್ಚಂದ್ರ ಘಾಟ್‌ನಲ್ಲಿ ಅಂತ್ಯಕ್ರಿಯೆ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಅಕ್ರಮ ನಿವೇಶನ ರದ್ದು ಮಾಡಿ; ವಿಚಾರಣೆಗೆ ವಿಶೇಷ ನ್ಯಾಯಾಲಯ ಸ್ಥಾಪಿಸಿ

● ಬಿಜೆಪಿ ಹಿಂದುಳಿದ ಮೋರ್ಚಾ ರಾಜ್ಯಾಧ್ಯಕ್ಷ ರಘು ಕೌಟಿಲ್ಯ ಆಗ್ರಹ ● 10 ಸಾವಿರಕ್ಕೂ ಹೆಚ್ಚು ನಿವೇಶನ ಅಕ್ರಮ ಮಂಜೂರಾತಿ ● ಸಿಬಿಐ ತನಿಖೆಯಿಂದ ಮಾತ್ರ ಸತ್ಯಾಂಶ ಬಯಲು ಸಾಧ್ಯ ● ಅಧಿಕಾರಿಗಳ ವಿರುದ್ಧ ಕ್ರಮವಿರಲಿ, ನೋಟಿಸ್ ಕೂಡ ನೀಡಿಲ್ಲ ● ಸಿದ್ದರಾಮಯ್ಯನವರೇ ನಿಮ್ಮ ಪತ್ನಿಗೆ ನೀಡಿರುವ 14 ನಿವೇಶನ ವಾಪಸ್ಸು ನೀಡಿ

ಮೈಸೂರು, ಆ.23(ಬಿಎಲ್‌ಆ)– ಮುಡಾದಲ್ಲಿ ಅಕ್ರಮವಾಗಿ ಮಂಜೂರಾಗಿರುವ ನಿವೇಶನಗಳನ್ನು ಮೊದಲು ರದ್ದು ಮಾಡಿ, ಹಗರಣದ ಬಗ್ಗೆ ವಿಚಾರಣೆ ಮಾಡಲು ವಿಶೇಷ ನ್ಯಾಯಾಲಯ ಸ್ಥಾಪಿಸಬೇಕು ಎಂದು ಬಿಜೆಪಿ ಹಿಂದುಳಿದ ಮೋರ್ಚಾ ರಾಜ್ಯಾಧ್ಯಕ್ಷ ರಘು ಕೌಟಿಲ್ಯ ಸರ್ಕಾರವನ್ನು ಆಗ್ರಹಿಸಿದ್ದಾರೆ.

ನಗರದ ಪತ್ರಕರ್ತರ ಭವನದಲ್ಲಿ ಇಂದು ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ನಿವೇಶನ ರದ್ದು ಮಾಡಿರುವ ಬಗ್ಗೆ ಸರ್ಕಾರ ಅಧಿಸೂಚನೆ ಹೊರಡಿಸಬೇಕು. ತರುವಾಯ ಇಡೀ ಹಗರಣದ ಬಗ್ಗೆ ಸಿಬಿಐ ತನಿಖೆಯಾಗಬೇಕು ಎಂದು ಒತ್ತಾಯಿಸಿದರು.

ಮುಡಾದಲ್ಲಿ ನಿವೇಶನಗಳ ಹಗರಣ ಎನ್ನುವುದಕ್ಕಿಂತ ದೊಡ್ಡ ದರೋಡೆ ನಡೆದಿದೆ ಎಂದು ವ್ಯಾಖ್ಯಾನಿಸಬಹುದು. ಈ ಮೊದಲು 5 ಸಾವಿರ ನಿವೇಶನಗಳು ಅಕ್ರಮವಾಗಿ ಮಂಜೂರಾಗಿದೆ ಎನ್ನಲಾಗುತ್ತಿತ್ತು. ಆದರೆ ಈಗ ದಾಖಲೆಗಳನ್ನು ಕೂಲಂಕುಶವಾಗಿ ಪರಿಶೀಲನೆ ಮಾಡಿದಾಗ 10 ಸಾವಿರಕ್ಕೂ ಹೆಚ್ಚು ನಿವೇಶನಗಳು ಅಕ್ರಮವಾಗಿ ಮಂಜೂರಾಗಿವೆ. ಈ ಮೂಲಕ ಸಾವಿರಾರು ಕೋಟಿ ರೂಪಾಯಿ ಭಾರೀ ಹಗರಣ ನಡೆದಿದೆ ಎಂದು ರಘು ಕೌಟಿಲ್ಯ ಆರೋಪಿಸಿದರು.

ಮುಡಾದಲ್ಲಿ ಸಾವಿರಾರು ಕೋಟಿ ರೂಪಾಯಿ ಅವ್ಯವಹಾರವಾಗಿರುವ ಕಾರಣ ಇಡಿಯಿಂದ ಕೂಡ ತನಿಖೆ ಮಾಡುವ ಅವಶ್ಯವಿದೆ ಎಂದು ಅಭಿಪ್ರಾಯಪಟ್ಟರು.

ಸೆಕ್ಯೂರಿಟಿ ಬಾಂಡ್ ಅಥವಾ ಮಂಜೂರಾತಿ ಪತ್ರಗಳ ಅಂಕಿ–ಅಂಶಗಳನ್ನು ಆಧರಿಸಿ ಹಗರಣದ ಇಂಚಿಂಚು ಮಾಹಿತಿ ನೀಡಿದ ರಘು ಕೌಟಿಲ್ಯ, ಮುಡಾ ಸ್ಟೋರ್‌ನಲ್ಲಿ ಕ್ರಮ ಸಂಖ್ಯೆ 2427 ತನಕ ವಿತರಣೆಯಾಗಿದ್ದು, ತರುವಾಯ 10001 ರಿಂದ 14842 ರವರೆಗೆ ಮಂಜೂರಾತಿ ಪತ್ರ ವಿತರಣೆಯಾಗಿದೆ. ಹರಾಜಿನಲ್ಲಿ ವಿತರಣೆಯಾಗಿರುವ ಮಂಜೂರಾತಿ ಪತ್ರಗಳನ್ನು ಕಳೆದರೂ 10 ಸಾವಿರಕ್ಕೂ ಹೆಚ್ಚು ನಿವೇಶನಗಳು ಅಕ್ರಮವಾಗಿ ಹಂಚಿಕೆಯಾಗಿವೆ. ನಿವೇಶನಗಳ ಮಂಜೂರಾತಿ ಮೂಲಕ ದರೋಡೆಯನ್ನೆ ನಡೆಸಿದ್ದಾರೆ ಎಂದು ಆಪಾದಿಸಿದರು.



ಮೈಸೂರಿನ ಪತ್ರಕರ್ತರ ಭವನದಲ್ಲಿ ಶುಕ್ರವಾರ ಬಿಜೆಪಿ ಹಿಂದುಳಿದ ಮೋರ್ಚಾ ರಾಜ್ಯಾಧ್ಯಕ್ಷ ರಘು ಕೌಟಿಲ್ಯ ಪತ್ರಿಕಾಗೋಷ್ಠಿಯನ್ನುದ್ದೇಶಿಸಿ ಮಾತನಾಡಿದರು.

ಮೈಸೂರಿನ ಸಾವಿರಾರು ಕುಟುಂಬಗಳಿಗೆ ಇನ್ನು ಕೂಡ ಸೂರಿಲ್ಲ. ಬಾಡಿಗೆ, ಭೋಗ್ಯದ ಮನೆಗಳಲ್ಲಿ ವಾಸ ಮಾಡುತ್ತಿದ್ದಾರೆ. ಮುಡಾದಿಂದ ಇಂದಲ್ಲ, ನಾಳೆ ನಿವೇಶನ ದೊರೆಯಲಿದೆ ಎಂದು ಚಾತಕ ಪಕ್ಷಿಗಳಂತೆ ಕಾಯುತ್ತಿದ್ದಾರೆ. ಆದರೆ ಅಧಿಕಾರಿಗಳು 50:50 ಅನುಪಾತದ ಹೆಸರಿನಲ್ಲಿ ಸಾವಿರಾರು ನಿವೇಶನವನ್ನು ಭೂ ಮಾಫಿಯಾ ಕೈಗಿತ್ತು, ತಾವು ಸಂತೃಪ್ತರಾಗಿ, ಭೂಮಾಫಿಯಾವನ್ನು ಸಂತೃಪ್ತಗೊಳಿಸಿದ್ದಾರೆ ಎಂದು ದೂರಿದರು.

ಸಾವಿರಾರು ಕೋಟಿ ರೂಪಾಯಿ ಹಗರಣದ ಹಿನ್ನೆಲೆಯಲ್ಲಿ ಅಧಿಕಾರಿಗಳ ವಿರುದ್ಧ ಈ ತನಕ ಯಾವುದೇ ಕ್ರಮ ಕೈಗೊಂಡಿಲ್ಲ. ಕನಿಷ್ಠ, ನೋಟಿಸ್ ಕೂಡ ಜಾರಿ ಮಾಡಿಲ್ಲ. ಇದರಿಂದ ಯಾವುದೇ ನ್ಯಾಯ ನಿರೀಕ್ಷೆ ಸಾಧ್ಯವಿಲ್ಲ. ಈ ಹಿನ್ನೆಲೆಯಲ್ಲಿ ಸರ್ಕಾರ ಕೂಡಲೇ 50:50 ಅನುಪಾತದ ನಿವೇಶನ ಮಂಜೂರಾತಿ ರದ್ದು ಮಾಡಿ, ಹಗರಣವನ್ನು ಸಿಬಿಐ ತನಿಖೆಗೆ ವಹಿಸಬೇಕು. ತರುವಾಯ ಇಡೀ ಪ್ರಕರಣದ ಬಗ್ಗೆ ವಿಚಾರಣೆ ಮಾಡಲು ವಿಶೇಷ ನ್ಯಾಯಾಲಯ ಸ್ಥಾಪನೆ ಮಾಡಬೇಕು ಎಂದು ರಘು ಕೌಟಿಲ್ಯ ಪುನರುಚ್ಚರಿಸಿದರು.

ಸರ್ಕಾರ ಕ್ರಮ ಕೈಗೊಳ್ಳಲಿದೆ ಎಂಬ ನಿರೀಕ್ಷೆ ಇಲ್ಲ. ಆದ ಕಾರಣ ಮೈಸೂರಿನ ಕಾಳಜಿ ಇರುವ ಸಂಘ ಸಂಸ್ಥೆಗಳು ಬೀದಿಗಿಳಿದು ಹೋರಾಟ ಮಾಡಬೇಕು. ಈ ಮೂಲಕ ಜನ ಸಾಮಾನ್ಯರಿಗೆ ಮೀಸಲಾದ ನಿವೇಶನ ಉಳಿಸಲು ಹೋರಾಟ ಜನಾಂದೋಲನವಾಗಿ ರೂಪುಗೊಳ್ಳಬೇಕು ಎಂದು ಜನರಲ್ಲಿ ಮನವಿ ಮಾಡಿದರು.

ಮುಡಾದಲ್ಲಿ ನಡೆದಿರುವ ಅಕ್ರಮಗಳ ಬಗ್ಗೆ ತನಿಖೆ ನಡೆಸಲು ಬಿಜೆಪಿ ಸರ್ಕಾರ ತಜ್ಞರ ಸಮಿತಿ ರಚನೆ ಮಾಡಿತ್ತು. ಮುಡಾದಲ್ಲಿ ಅಕ್ರಮವಾಗಿ ಮಂಜೂರಾಗಿರುವ ನಿವೇಶಗಳು ನಿಯಮ ಬಾಹಿರ ಎಂದು ವರದಿಯಲ್ಲಿ ಸ್ಪಷ್ಟವಾಗಿ ಉಲ್ಲೇಖಿಸಲಾಗಿದೆ ಎಂದು ತಿಳಿಸಿದರು.

ಮುಡಾ ಆಯುಕ್ತ ಜಿಲ್ಲಾಧಿಕಾರಿಗಿಂತ ಪವರ್ ಫುಲ್

ಜಿಲ್ಲೆಯ ಉನ್ನತ ಹುದ್ದೆ, ಐಎಎಸ್ ಶ್ರೇಣಿಯ ಜಿಲ್ಲಾಧಿಕಾರಿಗಿಂತ ಕೆಎಎಸ್ ಅಧಿಕಾರಿಯಾಗಿರುವ ಮುಡಾ ಆಯುಕ್ತರೇ ಪವರ್ ಫುಲ್ ಎಂಬುದು ಮುಡಾದಲ್ಲಿ ನಡೆದಿರುವ ಅವ್ಯವಹಾರದಿಂದ ಬಯಲಾಗಿದೆ ಎಂದು ರಘು ಕೌಟಿಲ್ಯ ಆರೋಪಿಸಿದರರು.

ಅಕ್ರಮ ನಿವೇಶನ ಮಂಜೂರಾತಿ ಮಾಡದಂತೆ ಅಂದಿನ ಜಿಲ್ಲಾಧಿಕಾರಿ ಡಾ. ಕೆ.ವಿ.ರಾಜೇಂದ್ರ ಮುಡಾ ಆಯುಕ್ತ ದಿನೇಶ್ ಕುಮಾರ್‌ಗೆ ಪತ್ರ ಬರೆದಿದ್ದರು. ಆದರೆ ಅತ ಜಿಲ್ಲಾಧಿಕಾರಿ ಆದೇಶಕ್ಕೆ ಕಿಮ್ಮತ್ತು ನೀಡಲಿಲ್ಲ ಎಂದರು. ತರುವಾಯ ಅಕ್ರಮ ಮಂಜೂರಾತಿಯ ನಿವೇಶನಗಳನ್ನು ರಿಜಿಸ್ಟರ್ ಮಾಡದಂತೆ ಸಬ್ ರಿಜಿಸ್ಟ್ರಾರ್‌ಗಳಿಗೆ ಕೂಡ ಆದೇಶ ನೀಡಿದರು. ಆದರೆ ಮುಡಾ ಅಧಿಕಾರಿಗಳ ಜೊತೆ ಷಾಮೀಲಾದ ಸಬ್ ರಿಜಿಸ್ಟ್ರಾರ್‌ಗಳು ಜಿಲ್ಲಾಧಿಕಾರಿ ಆದೇಶಕ್ಕೆ ಕೇರ್ ಮಾಡದೆ ಅಕ್ರಮ ನಿವೇಶನಗಳನ್ನು ನೋಂದಣಿ ಮಾಡುತ್ತಾ ಹೋದರು ಎಂದು ಹೇಳಿದರು. ಈ ಮೂಲಕ ಮುಡಾ ಆಯುಕ್ತ ಜಿಲ್ಲಾಧಿಕಾರಿಗಳ ಅಧಿಕಾರವನ್ನೆ ಶಕ್ತಿಹೀನಗೊಳಿಸಿದರು ಎಂದು ರಘು ಕೌಟಿಲ್ಯ ಆಪಾದಿಸಿದರು.

ಶೇಕಡ 50:50ರ ಅನುಪಾತದ ನಿಯಮಗಳು ಜುಲೈ, 30, 2009 ರಂದು ಜಾರಿಗೆ ಬಂದಿದೆ. ಹೊಸದಾಗಿ ಕೈಗೊಳ್ಳುವ ಯೋಜನೆಗಳಿಗೆ ಈ ನಿಯಮ ಅನ್ವಯವಾಗುತ್ತದೆ ಇದರಿಂದ ಈಗಾಗಲೇ ಅಭಿವೃದ್ಧಿಪಡಿಸಿದ ಹಳೆ ಬಡಾವಣೆಗಳಿಗೆ ಅನ್ವಯವಾಗುವುದಿಲ್ಲ. ಈ ಹಿನ್ನೆಲೆಯಲ್ಲಿ ಬದಲಿ ನಿವೇಶನಗಳ ಮಂಜೂರಾತಿಗಾಗಿ ಶೇಕಡ 50:50 ಅನುಪಾತದಂತೆ ಕೈಗೊಂಡಿರುವ ಯಾವುದೇ ಕ್ರಮವು ನಿಯಮಬಾಹಿರವಾಗಿದೆ ಎಂದು ತಜ್ಞರ ಸಮಿತಿ ಸ್ಪಷ್ಟವಾಗಿ ಹೇಳಿದೆ ಎಂದು ಹೇಳಿದರು.

ಆದರೆ ನಕಲಿ ದಾಖಲಾತಿ ಸೃಷ್ಟಿಸಿ, ಬೇನಾಮಿ ಫಲಾನುಭವಿಗಳನ್ನು ಗುರುತಿಸಿ ಜಿಪಿಎ ಮೂಲಕ ಕೋಟ್ಯಾಂತರ ಬೆಲೆ ಬಾಳುವ 50 ರಿಂದ 100 ನಿವೇಶನಗಳನ್ನು ಒಬ್ಬನೇ ವ್ಯಕ್ತಿ ಪಡೆದುಕೊಂಡಿದ್ದಾನೆ ಎಂದು ಆಪಾದಿಸಿದರು.

ಮುಡಾದಲ್ಲಿ ನಿವೇಶನಗಳನ್ನು ಯಾವ ರೀತಿ ದರೋಡೆ ಮಾಡಿದ್ದಾರೆ ಎಂಬುದು ಧಾರವಾಹಿ ಮಾದರಿ ಪ್ರತಿ ದಿನ ಮಾಧ್ಯಮಗಳಲ್ಲಿ ಪ್ರಕಟವಾಗುತ್ತಿದೆ. ಅದರಲ್ಲೂ 'ಮೈಸೂರು ಮಿತ್ರ' ಹಾಗೂ 'ಸ್ಟಾರ್ ಆಫ್ ಮೈಸೂರ್' ಮುಡಾದ ಬಹುಪಾಲು ಹಗರಣ ಬಯಲು ಮಾಡಿದೆ. ಪ್ರಾಯಶಃ ಇತಿಹಾಸದಲ್ಲಿ ಇಂತಹ ದೊಡ್ಡ ಅಕ್ರಮ ನಡೆದಿಲ್ಲ ಎಂದು ರಘು ಕೌಟಿಲ್ಯ ಅಭಿಪ್ರಾಯಪಟ್ಟರು.

ಇಷ್ಟು ದೊಡ್ಡ ಹಗರಣ ರಾಜಕೀಯ ಕೆಸರೆರಚಾಟಕ್ಕೆ ಬಲಿಯಾಗಬಾರದು. ಭೂಮಾಫಿಯಾ, ತಪ್ಪಿತಸ್ಥ ಅಧಿಕಾರಿಗಳಿಗೆ ಶಿಕ್ಷೆಯಾಗಬೇಕು. ನಾವು ಸಿದ್ದರಾಮಯ್ಯ ವಿರುದ್ಧ ವ್ಯಕ್ತಿಗತ ಹೋರಾಟ ಮಾಡುತ್ತಿಲ್ಲ. ಜೊತೆಗೆ ಯಾವ ಪಕ್ಷದ ಸರ್ಕಾರದ ಅವಧಿಯಲ್ಲಿ ಹಗರಣ ನಡೆದಿದೆ ಎನ್ನು ವುದಕ್ಕಿಂತ ಹಗರಣದಲ್ಲಿ ಭಾಗಿಯಾದವರಿಗೆ ಶಿಕ್ಷೆಯಾಗಬೇಕು. ಈ ಮೂಲಕ ಸೂರು ರಹಿತರಿಗೆ ಮೀಸಲಾದ ನಿವೇಶನ ರಕ್ಷಣೆ ಮಾಡಿ ಅವರಿಗೆ ನೀಡಬೇಕು ಎಂದು ಆಗ್ರಹಿಸಿದರು.

ಪತ್ನಿ ಹೆಸರಿನಲ್ಲಿ ಪಡೆದಿರುವ ನಿವೇಶನ ವಾಪಾಸು ಮಾಡಲು ಸಿದ್ದರಾಮಯ್ಯ ಅವರಿಗೆ ಇನ್ನು ಕಾಲ ಮಿಂಚಿಲ್ಲ. ಸ್ವಯಂ ಪ್ರೇರಣೆಯಿಂದ 14 ನಿವೇಶನ ವಾಪಾಸು ನೀಡಿ, ಈ ಮೂಲಕ ಹಗರಣದಲ್ಲಿ ಭಾಗಿಯಾದವರಿಗೆ ಶಿಕ್ಷೆ ನೀಡಲು ಸಿಬಿಐ ತನಿಖೆಗೆ ಆದೇಶ ಹೊರಡಿಸಿ ಎಂದು ರಘು ಕೌಟಿಲ್ಯ ಒತ್ತಾಯ ಮಾಡಿದರು.

ಬಿಜೆಪಿ ನಗರ ಪ್ರಧಾನ ಕಾರ್ಯದರ್ಶಿ ಕೇಬಲ್ ಮಹೇಶ್, ಒಬಿಸಿ ಮೋರ್ಚಾ ನಗರಾಧ್ಯಕ್ಷ ಮೈ.ಪು.ರಾಜೇಶ್, ಮಾಜಿ ಕಾರ್ಪೋರೇಟರ್ ಶೈಲೇಂದ್ರ ಪತ್ರಿಕಾಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

ಭೈರತಿ ಸುರೇಶ್ ಮುಡಾ ಹಗರಣದ ಕಿಂಗ್ ಪಿನ್

ನಗರಾಭಿವೃದ್ಧಿ ಸಚಿವ ಭೈರತಿ ಸುರೇಶ್ ಮುಡಾ ಹಗರಣದ ಕಿಂಗ್‌ಪಿನ್ ಎಂದು ರಘು ಕೌಟಿಲ್ಯ ಆರೋಪಿಸಿದರು.

ಮುಡಾ ಹಗರಣ ಬಯಲಾದ ನಂತರ ಮೈಸೂರಿಗೆ ಬಂದು ಅಧಿಕಾರಿಗಳ ಸಭೆ ನಡೆಸಿದ ನಗರಾಭಿವೃದ್ಧಿ ಸಚಿವ ಭೈರತಿ ಸುರೇಶ್, ಅಕ್ರಮ ನಿವೇಶನ ಮಂಜೂರಾತಿ ರದ್ದು ಮಾಡುವುದಾಗಿ ಘೋಷಣೆ ಮಾಡಿ ಹೋದರು. ಆದರೆ ಈ ತನಕ ಒಂದು ಅಕ್ರಮ ನಿವೇಶನದ ಮಂಜೂರಾತಿಯೂ ರದ್ದು ಮಾಡಿಲ್ಲವೇಕೆ ಎಂದು ಪ್ರಶ್ನಿಸಿದರು.

ಮೈಸೂರಿಗೆ ಹೆಲಿಕಾಪ್ಟರ್‌ನಲ್ಲಿ ಬಂದು ಕಡತಗಳನ್ನು ಕದ್ದೊಯ್ದು ಭೈರತಿ ಸುರೇಶ್, ಹಗರಣ ಮುಚ್ಚಿ ಹಾಕಲು ದಾಖಲಾತಿಗಳನ್ನು ತಿದ್ದಿದ್ದಾರೆ. ಇಷ್ಟೆಲ್ಲಾ ಆದರೂ ಭೈರತಿ ಸುರೇಶ್‌ರನ್ನು ರಕ್ಷಿಸಲು ಸಿದ್ದರಾಮಯ್ಯ ಇನ್ನಿಲ್ಲದ ಪ್ರಯತ್ನ ಮಾಡುತ್ತಿದ್ದಾರೆ ಎಂದು ದೂರಿದರು.

ಭೈರತಿ ಸುರೇಶ್ ಮುಡಾ ಹಗರಣದ ಮೂಲ ರೂವಾರಿಯಾಗಿದ್ದು, ಈತನನ್ನು ಬಿಟ್ಟು ತನಿಖೆ ನಡೆಸಿದರೆ ಬೆಟ್ಟ ಅಗೆದು, ಇಲಿ ಹಿಡಿದಂತಾಗುತ್ತದೆ. ಆದ ಕಾರಣ ಸಿಬಿಐ ತನಿಖೆಯಿಂದ ಮಾತ್ರ ಈ ಹಗರಣ ತಪ್ಪಿತಸ್ಥರು ಸಿಕ್ಕಿ ಬೀಳಲು ಸಾಧ್ಯ ಎಂದು ರಘು ಕೌಟಿಲ್ಯ ಅಭಿಪ್ರಾಯಪಟ್ಟರು.

ನಾಲ್ವಡಿ ಕೃಷ್ಣರಾಜ ಒಡೆಯರ್ ಸೇವೆ ಮರೆಯಲಾಗದು

ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್



ಜ್ಯೋತಿ ಶಿಕ್ಷಣ ಸಂಸ್ಥೆಯ ಸಮಾರಂಭದಲ್ಲಿ ಸಂಸದ ಯದುವೀರ್ ಅವರನ್ನು ಸನ್ಮಾನಿಸಲಾಯಿತು.

ಮೈಸೂರು,ಆ.23– ಡಾ.ಬಿಎನ್.ವಿ. ಜ್ಯೋತಿ ಮೆಮೋರಿಯಲ್ ಎಜ್ಯುಕೇಷನಲ್ ಟ್ರಸ್ಟ್ ಅಂಗಸಂಸ್ಥೆಯಾದ ಜ್ಯೋತಿ ಇನ್‌ಸ್ಟಿಟ್ಯೂಟ್ ಆಫ್ ಕಾಮರ್ಸ್ ಅಂಡ್ ಮ್ಯಾನೇಜ್‌ಮೆಂಟ್‌ನ ನೂತನ ಕಟ್ಟಡದ ನಾಲ್ವಡಿ ಕೃಷ್ಣರಾಜ ಒಡೆಯರ್ ಬ್ಲಾಕನ್ನು ಮೈಸೂರು–ಕೊಡಗು ಕ್ಷೇತ್ರದ ಲೋಕಸಭಾ ಸದಸ್ಯ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಉದ್ಘಾಟಿಸಿದರು.

ನಂತರ ಅವರು ಮಾತನಾಡುತ್ತಾ, ನೂತನ ಕಟ್ಟಡಕ್ಕೆ 'ನಾಲ್ವಡಿ ಕೃಷ್ಣರಾಜ ಒಡೆಯರ್' ಎಂದು ನಾಮಕರಣ ಮಾಡಿರುವುದು ಸಂತಸವಾಗಿದೆ. ಇವರ ಹೆಸರು ಕನ್ನಡನಾಡಿಗೆ ಹೆಮ್ಮೆಯ ವಿಷಯವಾಗಿದೆ. ಅವರು ತಮ್ಮ ಸಂಪೂರ್ಣ ಜೀವನವನ್ನು ಸಾಮಾಜಿಕ ಹಾಗೂ ಆರ್ಥಿಕ ನ್ಯಾಯಕ್ಕಾಗಿ ಮುಡು ಪಾಗಿಟ್ಟಿದ್ದರು. ಇವರ ಸೇವೆಯನ್ನು ಪರಿಗಣಿಸಿ ಜ್ಯೋತಿ ಶಿಕ್ಷಣ ಸಂಸ್ಥೆಯ ಒಂದು ಕಟ್ಟಡಕ್ಕೆ ಅವರ ಹೆಸರನ್ನು ಇಡಲಾಗಿದೆ. ಸಂಸ್ಥೆಯು ಸಕರಾತ್ಮಕವಾಗಿ ಕೆಲಸಗಳನ್ನು ಮಾಡುತ್ತಿರುವುದಕ್ಕೆ ಶ್ಲಾಘಿಸಬೇಕಾಗಿದೆ. ಇದು ವಿದ್ಯಾರ್ಥಿಗಳ ಶೈಕ್ಷಣಿಕ ಜೀವನದ ಮೇಲೆ ಉತ್ತಮ ಪರಿಣಾಮ ಬೀರುತ್ತವೆ. ಜ್ಯೋತಿ ಸಂಸ್ಥೆಗೆ ಐಎಸ್‌ಓ ಪ್ರಮಾಣ ಪತ್ರ ಬಂದಿದ್ದು, ಮುಂದೆ ದೊಡ್ಡ ಮಟ್ಟದಲ್ಲಿ ಬೆಳೆಯಬೇಕೆಂದು ಪ್ರಾರ್ಥಿಸುತ್ತೇನೆ. ಇಲ್ಲಿಗೆ ಬಂದಾಗ ಸಕರಾತ್ಮಕವಾದ ಕಂಪನ ಬಂತು. ಇದೇ ರೀತಿ ಉಳಿದೆಲ್ಲಾ ಸಂಸ್ಥೆಗಳು ಮಾಡುತ್ತಾ ಬಂದರೆ ಸಮಾಜದ ಅಭಿವೃದ್ಧಿ ನಿಶ್ಚಿತವಾಗುತ್ತದೆ ಎಂದು ಅಭಿಪ್ರಾಯಪಟ್ಟರು.

ಕಾರ್ಯಕಾರಿ ನಿರ್ದೇಶಕ ರಾಜೇಶ್.ಕೆ, ಸಂಸ್ಥೆಯು ಬೆಳೆದುಬಂದ ರೀತಿಯನ್ನು ಮೆಲುಕು ಹಾಕಿದರು. ಅದಮ್ಯ ಚೇತನ ಸಂಸ್ಥೆಯ ತೇಜಸ್ವಿನಿ ಅನಂತಕುಮಾರ್, ಟ್ರಸ್ಟ್ ಅಧ್ಯಕ್ಷರು ಮತ್ತು ವ್ಯವಸ್ಥಾಪಕ ನಿರ್ದೇಶಕಿ ಬಿ.ವಿ. ಸೀತಾ, ನಿರ್ದೇಶಕರು, ಪ್ರಾಂಶುಪಾಲರು, ಶಿಕ್ಷಕ ವೃಂದದವರು ಉಪಸ್ಥಿತರಿದ್ದರು. ಇದೇ ಸಂದರ್ಭದಲ್ಲಿ ಪ್ರಸಕ್ತ ಸಾಲಿನಲ್ಲಿ ಶೈಕ್ಷಣಿಕ, ಕ್ರೀಡಾ ಕ್ಷೇತ್ರದಲ್ಲಿ ಗಣನೀಯ ಸಾಧನೆ ಮಾಡಿದ ವಿದ್ಯಾರ್ಥಿಗಳನ್ನು ಗೌರವಿಸಲಾಯಿತು.

ಎಸ್.ಎಂ.ಖೋತಾಗೆ ಪಿಎಚ್.ಡಿ ಪದವಿ



ಮೈಸೂರು, ಆ.23– ಡಾ. ಧೀರಜ್ ಅಗರವಾಲ್ ಅವರ ಮಾರ್ಗದರ್ಶನದಲ್ಲಿ ಎಸ್.ಎಂ.ಖೋತಾ ಸಂಶೋಧನೆ ನಡೆಸಿ ಸಾದರಪಡಿಸಿದ ಪೆನ್ಷನ್ ಪ್ಲಾನ್ ಯಾಜ್ ಫೈನಾನ್ಸಿಯಲ್ ಸೆಕ್ಯೂರಿಟಿ – ಅ ಸರ್ವೇ ಆಫ್ ಪ್ರೈವೇಟ್ ಸೆಕ್ಟರ್ ವರ್ಕರ್ಸ್ ಮಹಾ ಪ್ರಬಂಧವನ್ನು ರಾಜಸ್ಥಾನದ ಅಲ್ವಾರ ಸನ್ ರೈಜ್ ವಿಶ್ವವಿದ್ಯಾಲಯ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.

ಭಾರತ–ಉಕ್ರೇನ್ 4 ಒಪ್ಪಂದಗಳಿಗೆ ಸಹಿ, ರಷ್ಯಾ ಸಂಘರ್ಷದ ಬಗ್ಗೆಯೂ ಚರ್ಚೆ



ಕೀವ್: ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್ ರೆಝಲೆನ್‌ಸ್ಕಿ ಅವರೊಂದಿಗೆ ಭಾರತ ಪ್ರಧಾನಿ ನರೇಂದ್ರ ಅವರು ಶುಕ್ರವಾರ ಸಭೆ ನಡೆಸಿದರು. ಈ ವೇಳೆ ಭಾರತ ಮತ್ತು ಉಕ್ರೇನ್ ನಾಲ್ಕು ಒಪ್ಪಂದಗಳಿಗೆ ಸಹಿ ಹಾಕಿವೆ.

ಈ ಒಪ್ಪಂದಗಳು ಕೃಷಿ, ಆಹಾರ ಉದ್ಯಮ, ಔಷಧ ಮತ್ತು ಸಂಸ್ಕೃತಿ ಹಾಗೂ ಮಾನವೀಯ ನೆರವು ಕ್ಷೇತ್ರಗಳಲ್ಲಿ ಸಹಕಾರವನ್ನು ಒದಗಿಸುತ್ತವೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ರಷ್ಯಾ–ಉಕ್ರೇನ್ ಸಂಘರ್ಷದ ಬಗ್ಗೆಯೂ ಮಾತುಕತೆ: ಸದ್ಯ ನಡೆಯುತ್ತಿರುವ ಸಂಘರ್ಷದ ಕುರಿತು ಚರ್ಚಿಸಿದೆವು. ಶಾಂತಿ ಕಾಪಾಡುವುದೇ ಈ ಸಭೆಯ ಪ್ರಮುಖ ನಿರ್ಧಾರವಾಗಿತ್ತು. ಮಾನವೀಯತೆಯ ಒಳಿತಿಗಾಗಿ ಸಂಘರ್ಷವನ್ನು ಶಾಂತಿಯುತವಾಗಿ ಬಗೆಹರಿಸಬೇಕಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದ್ದಾರೆ.

ಚರ್ಚೆ ಫಲಪ್ರದ: ಕೀವ್‌ನಲ್ಲಿ ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್ ಝೆಲೆನ್‌ಸ್ಕಿ ಅವರೊಂದಿಗೆ ಫಲಪ್ರದ ಚರ್ಚೆ ನಡೆಸಿದ್ದೇನೆ. ಉಕ್ರೇನ್ ಜೊತೆ ಆರ್ಥಿಕ ಸಂಬಂಧ ಗಾಢವಾಗಿಸಲು ಭಾರತ ಉತ್ಸುಕವಾಗಿದೆ. ಕೃಷಿ, ತಂತ್ರಜ್ಞಾನ, ಫಾರ್ಮಾ ಮತ್ತು ಇತರೆ ಕ್ಷೇತ್ರಗಳಲ್ಲಿ ಸಹಕಾರವನ್ನು ಉತ್ತೇಜಿಸಲು ಮಾತುಕತೆ ನಡೆಸಿದ್ದೇವೆ. ಸಾಂಸ್ಕೃತಿಕ ಕ್ಷೇತ್ರದಲ್ಲೂ ಸಂಬಂಧ ಗಟ್ಟಿ ಮಾಡಲು ಚರ್ಚೆ ನಡೆಸಿದ್ದೇವೆ ಎಂದು ಪ್ರಧಾನಿ ಮೋದಿ ತಿಳಿಸಿದ್ದಾರೆ.

ಉಕ್ರೇನ್‌ಗೆ ಭೇಟಿ ನೀಡಿದ ಭಾರತದ ಮೊದಲ ಪ್ರಧಾನಿ: ನರೇಂದ್ರ ಮೋದಿ ಅವರು ಉಕ್ರೇನ್‌ಗೆ ಭೇಟಿ ನೀಡಿದ ಭಾರತದ ಮೊದಲ ಪ್ರಧಾನಿ ಎನಿಸಿದ್ದಾರೆ. ಪೋಲೆಂಡ್‌ಗೆ ಎರಡು ದಿನಗಳ ಪ್ರವಾಸ ಕೈಗೊಂಡಿದ್ದ ಮೋದಿ ಅಲ್ಲಿಂದ ಉಕ್ರೇನ್ ರಾಜಧಾನಿ ಕೀವ್‌ಗೆ ತೆರಳಿದರು. ಸುಮಾರು 10 ತಾಸಿನ ರೈಲು ಪ್ರಯಾಣದ ಬಳಿಕ ಪ್ರಧಾನಿ ಮೋದಿ ಅವರು ಉಕ್ರೇನ್ ರಾಜಧಾನಿಗೆ ತಲುಪಿದರು.

ಟಿಪ್‌ಸ್ಟರ್ ಟ್ಯಾಲಿ ವಿನ್ನರ್ ಟ್ರೋಫಿ ವಿತರಣೆ



'ಮೈಸೂರು ಮಿತ್ರ' ಹಾಗೂ 'ಸ್ಟಾರ್ ಆಫ್ ಮೈಸೂರ್' ರೇಸ್ ಪ್ರತಿನಿಧಿ ಪಿ.ಜಿ. ಚಂದ್ರಶೇಖರ್ ಅವರಿಗೆ ಮೈಸೂರು ರೇಸ್ ಕ್ಲಬ್ ವತಿಯಿಂದ ಟಿಪ್‌ಸ್ಟರ್ ಟ್ಯಾಲಿ ವಿನ್ನರ್ ಟ್ರೋಫಿಯನ್ನು ಕ್ಲಬ್ ಛೇರ್ಮನ್ ಕೆ.ಎಂ.ಚಂದ್ರೇಗೌಡ ವಿತರಿಸಿದರು. ಈ ವೇಳೆ ಸ್ಟೀವರ್ಡ್‌ಗಳು ಹಾಗೂ ಕಮಿಟಿ ಸದಸ್ಯರು ಉಪಸ್ಥಿತರಿದ್ದಾರೆ.

ಮಂಕಿಫಾಕ್ಸ್ ಸೋಂಕು ಅಂತಹ ಅಪಾಯಕಾರಿಯಲ್ಲ; ಆತಂಕ ಬೇಡ

ವೈದ್ಯಕೀಯ ಶಿಕ್ಷಣ ಸಚಿವ ಡಾ. ಶರಣಪ್ರಕಾಶ್ ಪಾಟೀಲ್ ಅಭಯ



ಬೆಂಗಳೂರು, ಆ.23(ಕೆಎಂಶಿ)–ಆಫ್ರಿಕಾ ಖಂಡದಲ್ಲಿ ಆತಂಕ ಮೂಡಿಸಿರುವ ಮಂಕಿಫಾಕ್ಸ್ ಸೋಂಕು ಭಾರತದಲ್ಲಿ ಹರಡುವ ಅಪಾಯ ಕಡಿಮೆಯಿದ್ದು, ಆತಂಕಕ್ಕೆ ಒಳಗಾಗುವ ಅಗತ್ಯವಿಲ್ಲ ಎಂದು ವೈದ್ಯಕೀಯ ಶಿಕ್ಷಣ ಸಚಿವ ಡಾ. ಶರಣಪ್ರಕಾಶ್ ಪಾಟೀಲ್ ಇಂದಿಲ್ಲಿ ತಿಳಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಮಂಕಿಫಾಕ್ಸ್ ಸೋಂಕು ಕುರಿತು ಆಗಸ್ಟ್ 14ರಂದು ವಿಶ್ವ ಆರೋಗ್ಯಸಂಸ್ಥೆ ಸಾರ್ವಜನಿಕ ಆರೋಗ್ಯ ತುರ್ತುಸ್ಥಿತಿ ಘೋಷಿಸಿದೆಯಾದರೂ ಆ ಬಗ್ಗೆ ಆತಂಕ ಬೇಡ, ವೈದ್ಯಕೀಯ ಶಿಕ್ಷಣ ಇಲಾಖೆಯ ಹಿರಿಯ ಅಧಿಕಾರಿಗಳ ಜೊತೆ ಚರ್ಚಿಸಿದ್ದು, ಅಗತ್ಯ ಸಂದರ್ಭದಲ್ಲಿ ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ಸಭೆ ನಡೆಸಲಾಗಿದೆ ಎಂದರು.

ಇದು ವೈರಲ್ ಸೋಂಕು ಆಗಿರಲಿದ್ದು, ವಿಕ್ಟೋರಿಯಾ ಆಸ್ಪತ್ರೆಯಲ್ಲಿ ರೋಗ ಪರೀಕ್ಷೆ ಉಚಿತವಾಗಿದೆ, ಸದ್ಯಕ್ಕೆ 50 ಹಾಸಿಗೆಯ ಐದು ಐಸಿಯು ವ್ಯವಸ್ಥೆ ಮಾಡಲಾಗಿದೆ, ರಾಜ್ಯದಲ್ಲಿ ಇದುವರೆಗೂ ಒಂದೂ ಪ್ರಕರಣ ಪತ್ತೆಯಾಗಿಲ್ಲ, ಆದರೂ, ಏಕಾಏಕಿ ಕಂಡುಬಂದರೆ ಸಮಸ್ಯೆಯಾಗದಿರಲಿ ಎಂಬ ಉದ್ದೇಶದಿಂದ ಎಲ್ಲಾ ಮುನ್ನೆಚ್ಚರಿಕೆ ಸಿದ್ಧತೆ ಮಾಡಿಕೊಳ್ಳಲಾಗಿದೆ.

ಎನ್‌ಸಿಡಿಸಿ ಜಂಟಿ ನಿರ್ವಹಣಾ ಸಂಸ್ಥೆ ಸೋಂಕು ಹರಡುವಿಕೆ ಅಪಾಯದ ಮೌಲ್ಯಮಾಪನ ನಡೆಸುತ್ತಿದೆ, ಒಂದು ವೇಳೆ ಪ್ರಕರಣಗಳಿದ್ದರೆ ಆರಂಭ ಹಂತದಲ್ಲೇ ಎಚ್ಚರಿಸಲಾಗುವುದು.

ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಪ್ರಯಾಣಿಕರ ಸ್ಕ್ರೀನಿಂಗ್ ಬಗ್ಗೆ ಆರೋಗ್ಯ ಇಲಾಖೆಗೆ ಕೇಂದ್ರ ಸರ್ಕಾರ ಸೂಚನೆ ನೀಡುತ್ತದೆ ಎಂದರು.

ಜಂಬೂ ಸವಾರಿ ಮೆರವಣಿಗೆಯಲ್ಲಿ ಭಾಗವಹಿಸುವ ಕಲಾ ತಂಡಗಳಿಂದ ಅರ್ಜಿ ಆಹ್ವಾನ

ಮೈಸೂರು, ಆ.23(ಎಸ್‌ಬಿಡಿ)– ದಸರಾ ಮಹೋತ್ಸವದ ಜಂಬೂ ಸವಾರಿ ಮೆರವಣಿಗೆಯಲ್ಲಿ ಭಾಗವಹಿಸಲು ಕಲಾತಂಡಗಳಿಂದ ಅರ್ಜಿ ಆಹ್ವಾನಿಸಲಾಗಿದೆ.

ದಸರಾ ಮಹೋತ್ಸವದ ಪ್ರಮುಖ ಆಕರ್ಷಣೆ ಜಂಬೂಸವಾರಿ ಮೆರವಣಿಗೆ ಅ.12ರಂದು ನಡೆಯಲಿದೆ. ಆ ಮೆರವಣಿಗೆಯಲ್ಲಿ ಭಾಗವಹಿಸಲು ರಾಜ್ಯದ ಎಲ್ಲಾ ಜಿಲ್ಲೆಗಳ ಜಾನಪದ ಕಲಾತಂಡಗಳಿಂದ ಅರ್ಜಿ ಆಹ್ವಾನಿಸಲಾಗಿದ್ದು, ಅರ್ಜಿ ಸಲ್ಲಿಕೆಗೆ ಸೆ.10 ಕೊನೆ ದಿನವಾಗಿದೆ.

ಮೆರವಣಿಗೆಯಲ್ಲಿ ಭಾಗವಹಿಸಲು ಬಯಸುವ ಕಲಾತಂಡಗಳು ತಮ್ಮ ತಂಡದ ಉತ್ತಮ ಭಾವಚಿತ್ರ, ತಂಡದ ಸದಸ್ಯರುಗಳ ವಿವರ, ಅಂಚೆ ವಿಳಾಸ ಹಾಗೂ ಮುಖ್ಯಸ್ಥರ ಮೊಬೈಲ್ ಸಂಖ್ಯೆ ಇನ್ನಿತರ ವಿವರವನ್ನೊಳಗೊಂಡ ಅರ್ಜಿಯನ್ನು 'ಉಪ ವಿಶೇಷಾಧಿಕಾರಿಗಳು, ದಸರಾ ಮೆರವಣಿಗೆ ಉಪಸಮಿತಿ ಹಾಗೂ ಪೊಲೀಸ್ ಆಯುಕ್ತರು, ಮೈಸೂರು ನಗರ' ಅಥವಾ 'ಸಹಾಯಕ ನಿರ್ದೇಶಕರು (ಕೋ–ಆರ್ಡಿನೇಟರ್) ದಸರಾ ಮೆರವಣಿಗೆ ಉಪಸಮಿತಿ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಮೈಸೂರು' ಇವರಿಗೆ ಸಲ್ಲಿಸಬಹುದು.

ಅರ್ಜಿಯನ್ನು ಸಲ್ಲಿಸಿದ ಕಲಾತಂಡಗಳ ಪೈಕಿ ತಜ್ಞರ ಸಮಿತಿ ಮೂಲಕ ಉತ್ತಮ ಪೋಷಾಕು, ಸಾಂಪ್ರದಾಯಿಕ, ವಿಶಿಷ್ಟ ಶೈಲಿ ಹಾಗೂ ಕಲಾ ಪ್ರಕಾರವನ್ನು ಪ್ರದರ್ಶಿಸುವ ತಂಡಗಳನ್ನು ಆಯ್ಕೆ ಮಾಡಿ, ಜಂಬೂ ಸವಾರಿ ಮೆರವಣಿಗೆಯಲ್ಲಿ ಅವಕಾಶ ಕಲ್ಪಿಸಲಾಗುವುದು ಎಂದು ದಸರಾ ಮೆರವಣಿಗೆ ಮತ್ತು ಪಂಜಿನ ಕವಾಯತು ಉಪಸಮಿತಿ ಉಪ ವಿಶೇಷಾಧಿಕಾರಿಯಾದ ನಗರ ಪೊಲೀಸ್ ಆಯುಕ್ತೆ ಸೀಮಾ ಲಾಟ್ಕರ್ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ದೇಶ – ವಿದೇಶ

ಥೈಲ್ಯಾಂಡ್‌ನಲ್ಲಿ ವಿಮಾನ ಪತನ; 9 ಮಂದಿ ಸಾವು



ಬ್ಯಾಂಕಾಂಕ್: ಥೈಲೆಂಡ್‌ನಲ್ಲಿ ಪ್ರಯಾಣಿಕರ ಸಣ್ಣ ವಿಮಾನವೊಂದು ಪತನಗೊಂಡಿದ್ದು, 9 ಮಂದಿ ಸಾವನ್ನಪ್ಪಿದ್ದಾರೆ. ರಾಜಧಾನಿ ಬ್ಯಾಂಕಾಂಕ್‌ನಿಂದ ಟೇಕ್ ಆಫ್ ಆಗಿ ಸ್ವಲ್ಪ ಸಮಯದ ಬಳಿಕ ವಿಮಾನ ಪತನಗೊಂಡಿದೆ. ವಿಮಾನ ನಿಲ್ದಾಣದಿಂದ ಸುಮಾರು 40 ಕಿ.ಮೀ ದೂರದಲ್ಲಿರುವ ಮ್ಯಾಂಗ್ರೋವ್ ಜೌಗು ಪ್ರದೇಶದಲ್ಲಿ ವಿಮಾನದ ಅವಶೇಷಗಳು ಕಂಡುಬಂದಿವೆ.

ವಿಮಾನದಲ್ಲಿ 7 ಪ್ರಯಾಣಿಕರು, ಇಬ್ಬರು ಪೈಲಟ್‌ಗಳು ಇದ್ದರು, ವಿಮಾನದಲ್ಲಿದ್ದವರ ಗುರುತು ತಕ್ಷಣವೇ ಸ್ಪಷ್ಟವಾಗಿಲ್ಲ, ಆದರೆ ವಿಮಾನದಲ್ಲಿದ್ದವರಲ್ಲಿ ಹ್ಯಾಂಕಾಂಗ್‌ನ ಐವರು, ಚೀನೀ ಪ್ರವಾಸಿಗರು ಹಾಗೂ ಸಿಬ್ಬಂದಿ ಇದ್ದರು. ಥೈಲ್ಯಾಂಡ್ ನಾಗರಿಕ ವಿಮಾನಯಾನ ಪ್ರಾಧಿಕಾರದ ಪ್ರಕಾರ, ಥಾಯ್ ಫ್ಲೈಯಿಂಗ್ ಸರ್ವೀಸ್ ಕಂಪನಿಯಿಂದ ನಿರ್ವಹಿಸಲ್ಪಡುವ ಸೆಸ್ನಾ ಕಾರವಾನ್ ಗುರುವಾರ ಮಧ್ಯಾಹ್ನ 2.46ಕ್ಕೆ ವಿಮಾನ ನಿಲ್ದಾಣದಿಂದ ಟೇಕ್ ಆಫ್ ಆಗಿತ್ತು. ಟೇಕ್ ಆಫ್ ಆದ 11 ನಿಮಿಷಗಳ ಬಳಿಕ ಏರ್ ಟ್ರಾಫಿಕ್ ಕಂಟ್ರೋಲ್ ಸಂಪರ್ಕವನ್ನು ಕಳೆದುಕೊಂಡರು.

ಭಾರತ ಮೂಲದ ಬಸ್ ನೇಪಾಳ ನದಿಗೆ ಬಿದ್ದು 14 ಮಂದಿ ಸಾವು



ಕಠ್ಮಂಡು, ಆ.23– ಮಧ್ಯ ನೇಪಾಳದ ಮರ್ಸ್ಯಾಂಗ್ಡಿ ನದಿಗೆ ಶುಕ್ರವಾರ ಭಾರತೀಯ ನೋಂದಾಯಿತ ಪ್ರಯಾಣಿಕ ಬಸ್ ಉರುಳಿ ಬಿದ್ದಿದೆ ಈ ದುರ್ಘಟನೆ'ಯಲ್ಲಿ ಕನಿಷ್ಠ 14 ಜನರು ಸಾವನ್ನಪ್ಪಿದ್ದಾರೆ ಎಂದು ವರದಿಗಳು ತಿಳಿಸಿವೆ. ತನಾಹುನ್ ಜಿಲ್ಲೆಯ ಐನಾ ಪಹಾರಾದಲ್ಲಿ ಹೆದ್ದಾರಿ ಮೂಲಕ ರೆಸಾರ್ಟ್ ಪಟ್ಟಣವಾದ ಪೊಖರಾದಿಂದ ರಾಜಧಾನಿ ಕಠ್ಮಂಡು ಕಡೆಗೆ ಹೋಗುತ್ತಿತ್ತು. ಇದುವರೆಗೆ 29 ಮಂದಿಯನ್ನು ರಕ್ಷಿಸಿ ಆಸ್ಪತ್ರೆಗೆ ಸೇರಿಸಲಾಗಿದೆ ಎಂದು ಜಿಲ್ಲಾ ಪೊಲೀಸ್ ಕಛೇರಿ ತನಾಹುವಿನ ಮಾಹಿತಿ ಅಧಿಕಾರಿ ಮೋಹನ್ ಬಹದ್ದೂರ್ ಖಾನ್ ತಿಳಿಸಿದ್ದಾರೆ.

ಸಶಸ್ತ್ರ ಪೊಲೀಸ್ ಪಡೆ ನೇಪಾಳದ ವಿಪತ್ತು ನಿರ್ವಹಣಾ ತರಬೇತಿ ಶಾಲೆಯ ಹಿರಿಯ ಪೊಲೀಸ್ ವರಿಷ್ಠಾಧಿಕಾರಿ (ಎಸ್‌ಎಸ್‌ಪಿ) ಮಾಧವ್ ಪೌಡೆಲ್ ನೇತೃತ್ವದ 45 ಸಶಸ್ತ್ರ ಪೊಲೀಸ್ ಪಡೆಗಳ ತಂಡವು ಈಗಾಗಲೇ ಅಪಘಾತ ಸ್ಥಳಕ್ಕೆ ತಲುಪಿದ್ದು ರಕ್ಷಣಾ ಕಾರ್ಯಾಚರಣೆ ನಡೆಸುತ್ತಿದೆ. ಜಿಲ್ಲಾ ಪೊಲೀಸ್ ಕಛೇರಿ ಪ್ರಕಾರ, ಶುಕ್ರವಾರ ಬೆಳಿಗ್ಗೆ 11.30ರ ಸುಮಾರಿಗೆ ಈ ದುರಂತ ಸಂಭವಿಸಿದೆ.

ಅರ್ಹತೆ ಹೊಂದಿರದ ಸಿಬ್ಬಂದಿ ಬಳಕೆ: ಏರ್ ಇಂಡಿಯಾಗೆ 90 ಲಕ್ಷ ರೂ. ದಂಡ



ನವದೆಹಲಿ, ಆ.23– ಅರ್ಹತೆ ಇಲ್ಲದ ಸಿಬ್ಬಂದಿಯನ್ನು ವಿಮಾನಯಾನಕ್ಕೆ ಬಳಕೆ ಮಾಡಿದ್ದಕ್ಕೆ ಏರ್ ಇಂಡಿಯಾಗೆ ಡಿಜಿಸಿಎ 90 ಲಕ್ಷ ರೂ. ದಂಡ ವಿಧಿಸಿದೆ. ಅಲ್ಲದೇ ಏರ್ ಇಂಡಿಯಾದ ಕಾರ್ಯಾಚರಣೆಯ ನಿರ್ದೇಶಕರಿಗೆ 6 ಲಕ್ಷ ರೂ. ಮತ್ತು ತರಬೇತಿ ನಿರ್ದೇಶಕರಿಗೆ 3 ಲಕ್ಷ ರೂ. ದಂಡ ವಿಧಿಸಿದೆ.

ಏರ್ ಇಂಡಿಯಾ ಅನುಭವ ಇಲ್ಲದ ಲೈನ್ ಕ್ಯಾಪ್ಟನ್‌ಗಳನ್ನು ಬಳಸಿಕೊಂಡು ವಿಮಾನ ಹಾರಾಟ ನಡೆಸಿದೆ. ಇದು ಸುರಕ್ಷತಾ ನೀತಿ ಉಲ್ಲಂಘನೆಯಾಗಿದೆ ಇದನ್ನು ನಾವು ಗಂಭೀರವಾಗಿ ಪರಿಗಣಿಸಿದ್ದೇವೆ ಎಂದು ಡಿಜಿಸಿಎ ಏರ್ ಇಂಡಿಯಾಗೆ ಎಚ್ಚರಿಕೆ ನೀಡಿದೆ.

ಜು.10 ರಂದು ಏರ್‌ಲೈನ್ ಸಲ್ಲಿಸಿದ ವರದಿಯ ಬಳಿಕ ಡಿಜಿಸಿಎ ದಾಖಲಾತಿಗಳ ಪರಿಶೀಲನೆ, ವೇಳಾಪಟ್ಟಿ ಸೇರಿದಂತೆ ವಿಮಾನದ ಕಾರ್ಯಾಚರಣೆಗಳನ್ನು ಪರಿಶೀಲಿಸಿ ತನಿಖೆ ನಡೆಸಿತ್ತು. ತನಿಖೆ ವೇಳೆ ಹಲವಾರು ನಿಯಮ ಉಲ್ಲಂಘನೆಯಾಗಿರುವ ವಿಚಾರ ಬೆಳಕಿಗೆ ಬಂದಿತ್ತು. ಬಳಿಕ ನೋಟಿಸ್ ಜಾರಿಗೊಳಿಸಲಾಗಿತ್ತು. ಆದರೆ ನೋಟಿಸ್‌ಗೆ ನೀಡಿರುವ ಉತ್ತರ ತೃಪ್ತಿಕರವಾಗಿಲ್ಲ. ಈ ಕಾರಣಕ್ಕೆ ನಿಯಮದ ಪ್ರಕಾರ ದಂಡ ವಿಧಿಸಲಾಗಿದೆ.

ಮಹಿಳೆಯರಿಗೆ ತಾಲಿಬಾನ್‌ನಿಂದ ಹೊಸ ನಿರ್ಬಂಧ: ಮಾತನಾಡುವಂತಿಲ್ಲ, ಮುಖ ತೋರಿಸುವಂತಿಲ್ಲ



ಅಫ್ಘಾನಿಸ್ತಾನ, ಆ.23– ಅಫ್ಘಾನಿಸ್ತಾನದ ತಾಲಿಬಾನ್ ಆಡಳಿತಗಾರರು ಹೊಸ ಕಾನೂನನ್ನು ಜಾರಿಗೆ ತಂದಿದ್ದಾರೆ. ಇದರಲ್ಲಿ ಮಹಿಳೆಯರು ಸಾರ್ವಜನಿಕವಾಗಿ ಮಾತನಾಡುವುದನ್ನು ಮತ್ತು ಅವರ ಮುಖವನ್ನು ತೋರಿಸುವುದನ್ನು ನಿಷೇಧಿಸಲಾಗಿದೆ.

ತಾಲಿಬಾನ್ ನಾಯಕ ಹಿಬತುಲ್ಲಾ ಅಖುಂಡ್ಜಾದಾ ಈ ನಿಯಮವನ್ನು ಅನುಮೋದಿಸಿದ್ದು, ತಾಲಿಬಾನ್ ಸಚಿವಾಲಯವು ಈ ಸಂಬಂಧ 114 ಪುಟಗಳ ದಾಖಲೆಯನ್ನು ಬಿಡುಗಡೆ ಮಾಡಿದ್ದು, ಇಸ್ಲಾಮಿಕ್ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲನೆ ಮಾಡಲು ಇದನ್ನು ಜಾರಿಗೊಳಿಸಲಾಗಿದೆ ಎಂದು ತಿಳಿಸಿದೆ. ಮಹಿಳೆಯರು ತಮ್ಮ ಮುಖ ಒಳಗೊಂಡಂತೆ ತಮ್ಮ ಸಂಪೂರ್ಣ ದೇಹವನ್ನು ಸಾರ್ವಜನಿಕವಾಗಿ ಹೋಗುವಾಗ ಮುಚ್ಚಿಕೊಳ್ಳಬೇಕು. ಮಹಿಳೆಯರು ಸಾರ್ವಜನಿಕವಾಗಿ ಮಾತನಾಡುವುದನ್ನು ಅಥವಾ ಹಾಡುವುದನ್ನು ಸಹ ನಿಷೇಧಿಸಲಾಗಿದೆ ಮಹಿಳೆಯ ಧ್ವನಿಯನ್ನು ಖಾಸಗಿ ಎಂದು ಪರಿಗಣಿಸಲಾಗುತ್ತದೆ ಮತ್ತು ಇತರರಿಗೆ ಕೇಳಬಾರದು ಎಂದು ಕಾನೂನು ಹೇಳುತ್ತದೆ.

ಅಮೆರಿಕದಲ್ಲಿ ವೇಶ್ಯಾವಾಟಿಕೆ ಜಾಲ: ಪೊಲೀಸರ ಬಲೆಗೆ ಬಿದ್ದ 7 ಭಾರತೀಯರು

ಟೆಕ್ಸಾಸ್ (ಅಮೆರಿಕ), ಆ.23– ವೇಶ್ಯಾವಾಟಿಕೆ ವಿರುದ್ಧ ಕಾರ್ಯಾಚರಣೆ ನಡೆಸಿದ ಅಮೆರಿಕ ಪೊಲೀಸರು, 7 ಭಾರತೀಯರನ್ನು ಬಂಧಿಸಿದ್ದಾರೆ. ಅಮೆರಿಕದ ಟೆಕ್ಸಾಸ್ ರಾಜ್ಯದ ಡೆಂಟನ್ ಪ್ರದೇಶದಲ್ಲಿ ಈ ಕಾರ್ಯಾಚರಣೆ ನಡೆದಿದೆ ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ.

ಪೊಲೀಸರ ಕಾರ್ಯಾಚರಣೆ ವೇಳೆ ಬಂಧಿತರಾದವರ ಪೈಕಿ ತೆಲುಗು ಭಾಷಿಕರೇ ಹೆಚ್ಚಾಗಿದ್ದಾರೆ. ಇವರನ್ನು ನಿಖಿಲ್ ಬಂಡಿ, ಮೊನೀಶ್ ಗಲ್ಲಾ ನಿಖಿಲ್ ಕುಮ್ಮರಿ, ಜೈಕಿರಣ್ ಮೇಕಲಾ ಹಾಗೂ ಕಾರ್ತೀಕ್ ರಾಯಪತಿ ಎಂದು ಗುರ್ತಿಸಲಾಗಿದೆ. ಸಂಘಟಿತ ವೇಶ್ಯಾವಾಟಿಕೆ, ಬಂಧನದಿಂದ ತಪ್ಪಿಸಿಕೊಳ್ಳುವ ಯತ್ನ ಸೇರಿದಂತೆ ಹಲವು ಆರೋಪಗಳನ್ನು ಈ ಆರೋಪಿಗಳ ಮೇಲೆ ಹೊರಿಸಲಾಗಿದೆ.

ಪೊಲೀಸರು ವಿಚಾರಣೆಗೆ ಕರೆ ತಂದ ಒಟ್ಟು 18 ಮಂದಿ ಪೈಕಿ ಇಬ್ಬರು ಆರೋಪಿಗಳು ಅಪ್ರಾಪ್ತ ಬಾಲಕಿಯರನ್ನು ವೇಶ್ಯಾವಾಟಿಕೆಗೆ ಬಳಸಿಕೊಳ್ಳುತ್ತಿದ್ದರು ಎಂದು ತಿಳಿದು ಬಂದಿದೆ. ಇದಲ್ಲದೆ ಇನ್ನೂ ಮೂವರು ಆರೋಪಿಗಳ ವಿರುದ್ಧ ವೇಶ್ಯಾವಾಟಿಕೆ ತಂಡವನ್ನು ಪೊಲೀಸರ ಬಂಧನದಿಂದ ತಪ್ಪಿಸಲು ನೆರವಾದ ಆರೋಪ ಹೊರಿಸಲಾಗಿದೆ.

ಸಭೆಯಲ್ಲಿ ಗೂಗಲ್ ಮ್ಯಾಪ್ ಅವಾಂತರ ಅನಾವರಣ

ಮಡಿಕೇರಿಯಲ್ಲಿ ಏಕಮುಖ ಸಂಚಾರ, ವಾಹನ ನಿಲುಗಡೆ ಸಂಬಂಧ ನಿವಾಸಿಗಳೊಂದಿಗೆ ಪೊಲೀಸರ ಚರ್ಚೆ

ಮಡಿಕೇರಿ, ಆ.23–ಜಿಲ್ಲಾ ಕೇಂದ್ರ ಮಡಿಕೇರಿಯಲ್ಲಿ ವಾಹನ ಸಂಚಾರ ಸಂಕಷ್ಟ, ನಿಲುಗಡೆ ಸಮಸ್ಯೆ ಬಗ್ಗೆ ಪೊಲೀಸರು ಶುಕ್ರವಾರ ನಡೆಸಿದ ಜನಸಂಪರ್ಕ ಸಭೆಯಲ್ಲಿ ಗೂಗಲ್ ಮ್ಯಾಪ್ ಅವಾಂತರದಿಂದ ಮಡಿಕೇರಿಯಲ್ಲಿ ಉಂಟಾಗುತ್ತಿರುವ ಸಂಚಾರ ಸಮಸ್ಯೆಯ ಕೂಗು ಕೇಳಿ ಬಂತು.



ಮಡಿಕೇರಿ ರೆಡ್‌ಬ್ರಿಕ್ಸ್‌ನ ಸತ್ಕಾರ್ ಸಭಾಂಗಣದಲ್ಲಿ ಡಿವೈಎಸ್‌ಪಿ ಮಹೇಶ್‌ಕುಮಾರ್ ಅಧ್ಯಕ್ಷತೆಯಲ್ಲಿ ಜನಸಂಪರ್ಕ ಸಭೆ ನಡೆಯಿತು.

ನಗರದ ರೆಡ್‌ಬ್ರಿಕ್ಸ್‌ನ ಸತ್ಕಾರ್ ಸಭಾಂಗಣದಲ್ಲಿ ಡಿವೈಎಸ್‌ಪಿ ಮಹೇಶ್ ಕುಮಾರ್ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಉದ್ಯಮಿ ಮೊಹಮ್ಮದ್ ಆಸಿಫ್ ಮಾತನಾಡಿ, ಪ್ರವಾಸಿ ಕೇಂದ್ರವಾಗಿರುವ ಮಡಿಕೇರಿಗೆ ಹೆಚ್ಚಿನ ಸಂಖ್ಯೆಯಲ್ಲಿ ಪ್ರವಾಸಿಗರು ಆಗಮಿಸುತ್ತಾರೆ. ಗೂಗಲ್ ಮ್ಯಾಪ್‌ನ ಆಧಾರದಲ್ಲಿ ನಗರದಲ್ಲಿ ಸಂಚರಿಸುವ ವೇಳೆ ಏಕಮುಖ ಸಂಚಾರ ಮಾಹಿತಿ ಇಲ್ಲದೆ ಗೊಂದಲ ಮತ್ತು ಅವಾಂತರ ವಾಗುತ್ತಿದೆ. ನಗರದ ಹಲವೆಡೆ ವಾಹನ ನಿಲುಗಡೆ ಸ್ಥಳಗಳಲ್ಲಿ ಕೆಲ ವಾಹನಗಳನ್ನು ಬೆಳಗ್ಗೆಯಿಂದ ಸಂಜೆವರೆಗೆ ನಿಲ್ಲಿಸಲಾಗುತ್ತಿದೆ. ಇದು ಕೂಡ ಸಮಸ್ಯೆಗೆ ಕಾರಣವಾಗುತ್ತಿದೆ ಎಂದು ತಿಳಿಸಿದರು.

ನಂತರ ವೃತ್ತ ನಿರೀಕ್ಷಕ ಪಿ.ಕೆ.ರಾಜು ಮಾತನಾಡಿ, ನಗರಕ್ಕೆ ಗೂಗಲ್ ಮ್ಯಾಪ್ ಆಧರಿಸಿ ಬರುವ ಪ್ರವಾಸಿಗರು, ಇಲ್ಲಿನ ರಸ್ತೆ ನಿಯಮ ಅರಿಯದೆ ಸಾಗುವುದರಿಂದ ಉಂಟಾಗುತ್ತಿರುವ ಅವಾಂತರ ಬಗ್ಗೆ ಪ್ರಸಾಪಿಸಿ, ಪ್ರಸ್ತುತ ನಗರದ ಸಂಚಾರಿ ನಿಯಮಗಳ ಬಗ್ಗೆ 'ಗೂಗಲ್' ಸಂಸ್ಥೆಯನ್ನು ಸಂಪರ್ಕಿಸಿ ನಗರದ ಸಂಚಾರ ಮಾಹಿತಿ ನೀಡಿ ಸಮಸ್ಯೆ ಬಗೆಹರಿಸುವ ಪ್ರಯತ್ನ ಮಾಡುವುದಾಗಿ ತಿಳಿಸಿದರು.

ಪ್ರಸ್ತುತ ನಗರದಲ್ಲಿ ವಾಹನ ನಿಲುಗಡೆಗೆ ಮಾರ್ಕ್ ಮಾಡಿರುವ ಸ್ಥಳಗಳಲ್ಲಿ ವಾಹನ ನಿಲುಗಡೆ ಸರಿಯಾಗಿ ನಡೆಯುತ್ತಿದೆ. ಉಳಿದ ಪ್ರದೇಶಗಳಲ್ಲಿ ನಿಲುಗಡೆಯಲ್ಲಿ ಸಮಸ್ಯೆ ಉಂಟಾಗುತ್ತಿದೆ. ಈ ಹಿನ್ನೆಲೆ ವಾಹನ ನಿಲುಗಡೆ ಸ್ಥಳಗಳಲ್ಲಿ ಬಣ್ಣ ಬಳಿದು ಮಾರ್ಕಿಂಗ್ ಮಾಡಲು ಉದ್ಯಮಿಗಳು ಪೊಲೀಸ್ ಇಲಾಖೆಗೆ ನೆರವಾಗಬೇಕೆಂದು ಮನವಿ ಮಾಡಿದರು.

ಹಿರಿಯ ಪತ್ರಕರ್ತ ಜಿ.ಚಿದ್ವಿಲಾಸ್ ಮಾತನಾಡಿ, ನಗರ ವ್ಯಾಪ್ತಿ ಇತ್ತೀಚಿನ ದಿನಗಳಲ್ಲಿ ಜನ ಮತ್ತು ವಾಹನ ದಟ್ಟಣೆಯಿಂದ ಸಂಚಾರ ಕಷ್ಟವಾಗುತ್ತಿದೆ. ಇಕ್ಕಟ್ಟಿನ ರಸ್ತೆ, ವಾಹನ ನಿಲುಗಡೆಗೆ ಅಗತ್ಯ ಜಾಗದ ಕೊರತೆ ಎದ್ದು ಕಾಣುತ್ತಿದೆ. ಮಾರುಕಟ್ಟೆ ಭಾಗದಲ್ಲಿ ವಾಹನ ದಟ್ಟಣೆ ಕಡಿಮೆ ಮಾಡುವ ನಿಟ್ಟಿನಲ್ಲಿ ಮಾರುಕಟ್ಟೆ ಬಳಿಯಿಂದ ಸಿ.ವಿ.ಶಂಕರ್ ರಸ್ತೆವರೆಗೆ ಏಕಮುಖ ಸಂಚಾರ ಬದಲಾಗಿ ದ್ವಿಪಥ ವಾಹನ ಸಂಚಾರಕ್ಕೆ ಅವಕಾಶ ಒದಗಿಸಿದಲ್ಲಿ ಸಂಚಾರ ಒತ್ತಡ ಕಡಿಮೆಗೊಳಿಸಬಹುದು. ಪತ್ರಿಕಾ ಭವನದ ಜಂಕ್ಷನ್ ಬಳಿ ಸದಾ ವಾಹನ ದಟ್ಟಣೆ ಅಧಿಕವಾಗಿರುತ್ತದೆ. ಈ ರಸ್ತೆಯ ಆಸ್ಪತ್ರೆಗಳಿಗೆ ಬರುವವರು ಏಕಮುಖ ಸಂಚಾರದಿಂದ ಸುತ್ತಿ ಬಳಸಿ ಬರಬೇಕಾದ ಸಂಕಷ್ಟವಿದೆ ಎಂದು ಪೊಲೀಸರ ಗಮನಕ್ಕೆ ತಂದರು.

ನಗರಸಭಾ ಅಧಿಕಾರಿ ಸೌಮ್ಯ ಮಾತನಾಡಿ, ನಗರದಲ್ಲಿ ವಾಹನ ದಟ್ಟಣೆ ಹೆಚ್ಚಾಗದಂತೆ ನೋಡಿಕೊಳ್ಳುವಲ್ಲಿ ಸಾರ್ವಜನಿಕರ ಹೊಣೆಗಾರಿಕೆಯೂ ಇದೆ ಎಂದರು.

ಮಡಿಕೇರಿ ನಗರ ಸಂಚಾರಿ ಠಾಣಾಧಿಕಾರಿಗಳಾದ ಶ್ರೀಧರ್, ತಮ್ಮಯ್ಯ, ಎಎಸ್‌ಐ ನಂದ, ಸಾರ್ವಜನಿಕರು ಸಭೆಯಲ್ಲಿ ಪಾಲ್ಗೊಂಡಿದ್ದರು.

ಕೋಟೆ ಮಾರಿಯಮ್ಮ ದೇವಾಲಯದ ಚಿನ್ನಾಭರಣ, ಹುಂಡಿ ಕಳವು ಮಾಡಿದ್ದ

ಅಸ್ಸಾಂ ಮೂಲದ ಇಬ್ಬರು ಕಳ್ಳರ ಬಂಧನ



ಸುದ್ದಿಗೋಷ್ಠಿಯಲ್ಲಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ.ರಾಮರಾಜನ್ ಮಾತನಾಡಿದರು.





ಮೀರ್ ಹುಸೇನ್, ಅಲ್ತಾಬ್ ಆಲಿ

ಮಡಿಕೇರಿ, ಆ.23–ನಗರದ ಕರಗ ಶಕ್ತಿ ದೇವತೆಗಳಲ್ಲಿ ಒಂದಾಗಿರುವ ಶ್ರೀ ಕೋಟೆ ಮಾರಿಯಮ್ಮ ದೇವಾಲಯದ ಬೀಗ ಮುರಿದು ಚಿನ್ನಾಭರಣ ಸಹಿತ ಹುಂಡಿ ಹಣ ಕಳವು ಮಾಡಿದ ಅಸ್ಸಾಂ ಮೂಲದ ಇಬ್ಬರು ಆರೋಪಿಗಳನ್ನು ಕೊಡಗು ಜಿಲ್ಲಾ ಪೊಲೀಸರು ಬಂಧಿಸಿದ್ದಾರೆ.

ಮಡಿಕೇರಿ ತಾಲೂಕಿನ ಕಾಂತೂರು–ಮೂರ್ನಾಡು ಗ್ರಾಮದ ತೆಕ್ಕಡ ಪ್ರಸನ್ನ ಅವರ ತೋಟದ ಲೈನ್ ಮನೆಯಲ್ಲಿ ವಾಸವಿದ್ದ ಅಸ್ಸಾಂನ ಅಲ್ತಾಬ್ ಆಲಿ (27) ಹಾಗೂ ಕೃತ್ಯ ನಡೆಸಲು ಅಸ್ಸಾಂನಿಂದ ಬಂದ ಮೀರ್ ಹುಸೇನ್ ಅಲಿಯಾಸ್ ನೂರ್ ಹುಸೇನ್(36) ಬಂಧಿತರು. ಆರೋಪಿಗಳು ಕಳವು ಮಾಡಿದ್ದ 3 ಗ್ರಾಂ ಚಿನ್ನದ ಮಾಂಗಲ್ಯ, 111 ಗ್ರಾಂ ಬೆಳ್ಳಿಯ ಕಿರೀಟ, 59 ಗ್ರಾಂ ಬೆಳ್ಳಿಯ ದೃಷ್ಟಿ ಬೊಟ್ಟು ಹಾಗೂ ಹುಂಡಿಯಲ್ಲಿದ್ದ 95,501 ನಗದನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ.ರಾಮರಾಜನ್ ಮಾಹಿತಿ ನೀಡಿದರು.

ಮಡಿಕೇರಿಯಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಎಸ್‌ಪಿ, ಶ್ರೀ ಕೋಟೆ ಮಾರಿಯಮ್ಮ ದೇವಾಲಯದಲ್ಲಿ ಆ.16ರಂದು ಮಧ್ಯರಾತ್ರಿ ಅಪರಿಚಿತರು ದೇವಸ್ಥಾನದ ಮುಖ್ಯ ದ್ವಾರದ ಬೀಗ ಮುರಿದು 2 ಹುಂಡಿ ಹಾಗೂ ದೇವಿಯ ಮೂರ್ತಿಗೆ ಧರಿಸಿದ್ದ ಚಿನ್ನಾಭರಣಗಳನ್ನು ಕಳ್ಳತನ ಮಾಡಿದ್ದರು. ಈ ಕುರಿತು ದೇವಾಲಯದ ಮ್ಯಾನೇಜಿಂಗ್ ಟ್ರಸ್ಟಿ ಟಿ.ಪಿ.ಸೋಮಯ್ಯ ಮಡಿಕೇರಿ ನಗರ ಪೊಲೀಸ್ ಠಾಣೆಗೆ ದೂರು ನೀಡಿದ್ದರು ಎಂದು ಹೇಳಿದರು.

ಸ್ಥಳದಲ್ಲಿದ್ದ ಸಿಸಿ ಕ್ಯಾಮರಾ ದೃಶ್ಯಗಳು, ಸೂಕ್ಷ್ಮ ಮಾಹಿತಿ ಮತ್ತು ತಾಂತ್ರಿಕ ಸಾಕ್ಷ್ಯಗಳನ್ನು ಸಂಗ್ರಹಿಸಲಾಗಿತ್ತು. ಆರೋಪಿಗಳು ಸಂಚರಿಸಿದ ಮಾರ್ಗವನ್ನೂ ತನಿಖೆ ನಡೆಸಿ, ಆ.22ರಂದು ಮೂರ್ನಾಡು–ಕಾಂತೂರು ಗ್ರಾಮದಲ್ಲಿ ಅಸ್ಸಾಂ ಮೂಲದ ಇಬ್ಬರನ್ನು ಬಂಧಿಸಲಾಗಿದೆ ಎಂದರು.

ಈ ಪೈಕಿ ಅಲ್ತಾಬ್ ಆಲಿ 10 ವರ್ಷಗಳಿಂದ ಜಿಲ್ಲೆಯಲ್ಲಿ ನೆಲೆಸಿದ್ದು, ಮಡಿಕೇರಿ ಬಗ್ಗೆ ಪೂರ್ಣ ಮಾಹಿತಿ ಹೊಂದಿರುವುದಲ್ಲದೇ ಸ್ಥಳೀಯ ಭಾಷೆಯನ್ನು ಬಲ್ಲವನಾಗಿದ್ದಾನೆ. ಕೃತ್ಯ ಎಸಗುವ ದೃಷ್ಟಿಯಿಂದಲೇ ಅಸ್ಸಾಂನಿಂದ ಮೀರ್ ಹುಸೇನ್ ಅಲಿಯಾಸ್ ನೂರ್ ಹುಸೇನ್‌ನನ್ನು ಆ.13ರಂದು ಇಲ್ಲಿಗೆ ಕರೆಸಿಕೊಳ್ಳಲಾಗಿದೆ. ಹುಂಡಿ ಹಣವನ್ನು ಅಲ್ತಾಬ್ ಆಲಿ ತನ್ನ ಬ್ಯಾಂಕ್ ಖಾತೆಗೆ ಜಮಾ ಮಾಡಿದ್ದು, ಅದನ್ನು ಜಪ್ತಿ ಮಾಡಲಾಗಿದೆ ಎಂದು ಮಾಹಿತಿ ನೀಡಿದರು.

ಹೆಚ್ಚುವರಿ ಜಿಲ್ಲಾ ಪೊಲೀಸ್ ಅಧೀಕ್ಷಕ ಸುಂದರ್ ರಾಜ್, ಡಿವೈಎಸ್‌ಪಿ ಮಹೇಶ್ ಕುಮಾರ್, ಮಡಿಕೇರಿ ನಗರ ವೃತ್ತನಿರೀಕ್ಷಕ ಪಿ.ಕೆ.ರಾಜು, ಅನೂಪ್ ಮಾದಪ್ಪ, ನಗರ ಠಾಣಾಧಿಕಾರಿ ಲೋಕೇಶ್, ಜಿಲ್ಲಾ ಅಪರಾಧ ಗುಪ್ತ ದಳದ ಸಿಬ್ಬಂದಿ ಕಾರ್ಯಾಚರಣೆ ನಡೆಸಿದ್ದರು.

ಬಿ.ಆರ್.ಗಣೇಶ್‌ಗೆ ಶ್ರದ್ಧಾಂಜಲಿ...



ಗುರುವಾರ ಸಂಪಾಜೆ ಬಳಿ ಕಾರು ಅಪಘಾತದಲ್ಲಿ ಮೃತಪಟ್ಟ ವಿರಾಜಪೇಟೆ ಕರ್ನಾಟಕ ಸಂಘದ ನಿರ್ದೇಶಕ ಬಿ.ಆರ್.ಗಣೇಶ್ ಅವರಿಗೆ ಸಂಘದ ಆಡಳಿತ ಮಂಡಳಿ ಸದಸ್ಯರು ಶ್ರದ್ಧಾಂಜಲಿ ಸಲ್ಲಿಸಿದರು. ಅಧ್ಯಕ್ಷ ಮಾಳೇಟಿರ ಎಂ.ಬೆಲ್ಲು ಬೋಪಯ್ಯ, ಕಾರ್ಯದರ್ಶಿ ಮುಂಡ್ಯೋಳಂಡ ಕುಸುಮ ಸೋಮಣ್ಣ, ಚೇನಂಡ ಸುರೇಶ್ ನಾಣಯ್ಯ, ಕಂಜಿತಂಡ ಎಂ.ಮೊಣ್ಣಪ್ಪ, ಚಿಲ್ಲವಂಡ ಪಿ.ಕಾವೇರಪ್ಪ, ಪುಗ್ಗೆರ ನಂದ, ಬೊಳ್ಯಪಂಡ ಎಂ.ಸುರೇಶ್, ಕಚೇರಿ ಕಾರ್ಯದರ್ಶಿ ಎಂ.ಪಿ.ರಾಧ ಇದ್ದರು.

ಒಂಟಿ ವೃದ್ಧೆ ಮನೆಗೆ ನುಗ್ಗಿ ಹಣ, ಚಿನ್ನದ ಸರ ದೋಚಿದ್ದ

ಆರೋಪಿ ಕೇವಲ 5 ಗಂಟೆಯಲ್ಲೇ ಬಂಧನ



ಸುದರ್ಶನ್

ಮಡಿಕೇರಿ, ಆ.23–ಹಾಡಹಗಲೇ ಒಂಟಿ ವೃದ್ಧೆ ಮನೆಗೆ ನುಗ್ಗಿ ಆಕೆಯ ಮೇಲೆ ಹಲ್ಲೆ ನಡೆಸಿ ಹಣ ಮತ್ತು ಚಿನ್ನದ ಸರ ದೋಚಿದ್ದ ಆರೋಪಿಯನ್ನು ಕೃತ್ಯ ನಡೆದ ಕೇವಲ 5 ಗಂಟೆಯಲ್ಲೇ ಭಾಗಮಂಡಲ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಚೇರಂಬಾಣೆ ನಿವಾಸಿ ಸುದರ್ಶನ್ (24) ಬಂಧಿತ ಆರೋಪಿ. ಈತ ಮಹಿಳೆ ಕುತ್ತಿಗೆಯಿಂದ ಕಳವು ಮಾಡಿದ್ದ 60 ಗ್ರಾಂ ಚಿನ್ನದ ಸರ, 620 ರೂ. ನಗದನ್ನು ವಶಪಡಿಸಿಕೊಳ್ಳಲಾಗಿದೆ.

ಪ್ರಕರಣ ಹಿನ್ನೆಲೆ: ಗುರುವಾರ ಬೆಳಗ್ಗೆ 11.30ರಲ್ಲಿ ಭಾಗಮಂಡಲ ಪೊಲೀಸ್ ಠಾಣೆ ವ್ಯಾಪ್ತಿಯ ಚೇರಂಬಾಣೆ ಗ್ರಾಮದಲ್ಲಿ ಆರೋಪಿ ಸುದರ್ಶನ್, ತಮ್ಮ ಸಂಬಂಧಿ 75 ವರ್ಷದ ಪುಷ್ಪಾ ಮನೆಗೆ ನುಗ್ಗಿ ಚಾಕು ತೋರಿಸಿ ಬೆದರಿಸಿ ಹಲ್ಲೆ ನಡೆಸಿ, ಆಕೆಯ ಕುತ್ತಿಗೆಯಲ್ಲಿದ್ದ ಚಿನ್ನದ ಸರ ಮತ್ತು ಗಾದ್ರೇಜ್‌ನಲ್ಲಿದ್ದ 620 ರೂ. ನಗದನ್ನು ಕದ್ದು ಪರಾರಿಯಾಗಿದ್ದ.

ಈ ಸಂಬಂಧ ಪುಷ್ಪಾ ಪುತ್ರ ಕೆ.ಕೆ. ಗೋಪಾಲಕೃಷ್ಣ ಭಾಗಮಂಡಲ ಪೊಲೀಸ್ ಠಾಣೆಗೆ ದೂರು ನೀಡಿದ್ದರು. ತಕ್ಷಣ ಕಾರ್ಯಪ್ರವೃತ್ತರಾದ ಭಾಗಮಂಡಲ ಮತ್ತು ನಾಪೋಕ್ಲು ಠಾಣೆ ಪೊಲೀಸರು ಗುರುವಾರ ಸಂಜೆ 5.30ರಲ್ಲಿ ಆರೋಪಿಯನ್ನು ಪತ್ತೆಹಚ್ಚಿ ಬಂಧಿಸಿ, ಚಿನ್ನದ ಸರ, ನಗದು ಮತ್ತು ಚಾಕುವನ್ನು ವಶಪಡಿಸಿಕೊಂಡಿದ್ದಾರೆ.

> ಕೊಡಗು ಜಿಲ್ಲೆಯಲ್ಲಿ ನಡೆದ ಅಪರಾಧ ಪ್ರಕರಣಗಳನ್ನು ತ್ವರಿತಗತಿಯಲ್ಲಿ ಬೇಧಿಸಲು ಕ್ರಮ ಕೈಗೊಳ್ಳಲಾಗುತ್ತಿದೆ. 2022ರಲ್ಲಿ ನಡೆದಂತಹ ಕೃತ್ಯಗಳ ಆರೋಪಿಗಳನ್ನು ಬಂಧಿಸಲಾಗುತ್ತಿದೆ. ಹೆಚ್ಚುವರಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ, ಡಿವೈಎಸ್‌ಪಿಗಳು, ವೃತ್ತ ನಿರೀಕ್ಷಕರು, ಠಾಣಾಧಿಕಾರಿಗಳು, ಸಿಬ್ಬಂದಿ ಕೂಡ ಅಪರಾಧ ಕೃತ್ಯಗಳನ್ನು ಬೇಧಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತಿದ್ದಾರೆ. ಅವರ ಶ್ರಮಕ್ಕೆ ಶ್ಲಾಘನೀಯ.
> –ಕೆ.ರಾಮರಾಜನ್, ಎಸ್‌ಪಿ ಕೊಡಗು ಜಿಲ್ಲೆ

ಮಡಿಕೇರಿ ಡಿವೈಎಸ್‌ಪಿ ಮಹೇಶ್ ಕುಮಾರ್, ವೃತ್ತ ನಿರೀಕ್ಷಕ ಅನೂಪ್ ಮಾದಪ್ಪ, ಭಾಗಮಂಡಲ ಠಾಣಾಧಿಕಾರಿ ಶೋಭಾ ಲಮಾಣಿ, ನಾಪೋಕ್ಲು ಠಾಣಾಧಿಕಾರಿ ಈ.ಮಂಜುನಾಥ್, ಅಪರಾಧ ಪತ್ತೆದಳ ಹಾಗೂ ತಾಂತ್ರಿಕ ವಿಭಾಗದ ಸಿಬ್ಬಂದಿ ಕಾರ್ಯಾಚರಣೆಯಲ್ಲಿ ಭಾಗವಹಿಸಿದ್ದರು.

ಕೊಡವ ಜೊಪ್ಪೆಗೆ ಕಥೆಗಳಿಗೆ ಆಹ್ವಾನ

ಮಡಿಕೇರಿ, ಆ.23–ಕರ್ನಾಟಕ ಕೊಡವ ಸಾಹಿತ್ಯ ಅಕಾಡೆಮಿ ವತಿಯಿಂದ 'ಕೊಡವ ಕಥೆ ಜೊಪ್ಪೆ'ಯನ್ನು ಹೊರತರಲು ಸೂಕ್ತ ಕಥೆಗಳನ್ನು ಆಹ್ವಾನಿಸಿದೆ.

ಸುಮಾರು 25 ರಿಂದ 30ರಷ್ಟು ಕಥೆಗಳನ್ನು ಒಂದೇ ಪುಸ್ತಕದಲ್ಲಿ ಪ್ರಕಟಿಸಲಾಗುವುದು. ಕಥೆಗಳು 5–6 ಪುಟಗಳನ್ನು ಮೀರುವಂತಿಲ್ಲ. ಕಥಾವಸ್ತು ಕಥೆಗಾರರ ಕಲ್ಪನೆಗೆ ಬಿಟ್ಟಿದ್ದು, ಕಥೆಗಳು ಪ್ರತ್ಯಕ್ಷ–ಪರೋಕ್ಷವಾಗಿ ಯಾರಿಗೂ ತೇಜೋವಧೆಯಾಗಲಿ, ಜಾತಿ–ಧರ್ಮಗಳ ಭಾವನೆಗಳಿಗೆ ಘಾಸಿಉಂಟು ಮಾಡುವಂತಿರಬಾರದು. ಕಥೆಗಳು ಸಾಧ್ಯವಾದಷ್ಟು ಕೊಡವ ಸಂಸ್ಕೃತಿ–ಪದ್ಧತಿ, ಮೂಲತನಕ್ಕೆ ಒತ್ತುಕೊಡುವಂತಿದ್ದು, ಸಾರ್ವಕಾಲಿಕವಾಗಿರಲಿ. ಕಥೆಗಾರರು ಇತ್ತೀಚಿನ ಭಾವಚಿತ್ರದೊಂದಿಗೆ ಬ್ಯಾಂಕ್ ಪಾಸ್‌ಪುಸ್ತಕದ ಪ್ರತಿಯೊಂದಿಗೆ ಸೆಪ್ಟೆಂಬರ್ 20ರೊಳಗೆ ಅಧ್ಯಕ್ಷರು, ರಿಜಿಸ್ಟ್ರಾರ್, ಕರ್ನಾಟಕ ಕೊಡವ ಸಾಹಿತ್ಯ ಅಕಾಡೆಮಿ, ಜೂನಿಯರ್ ಕಾಲೇಜು ರಸ್ತೆ, ಸ್ಕೌಟ್ಸ್ ಭವನ, ಮಡಿಕೇರಿ ಈ ವಿಳಾಸಕ್ಕೆ ಕಥೆಗಳನ್ನು ಕಳುಹಿಸಬೇಕು ಎಂದು ಅಕಾಡೆಮಿ ಅಧ್ಯಕ್ಷ ಅಜ್ಜಿನಿಕಂಡ ಸಿ.ಮಹೇಶ್ ನಾಚಯ್ಯ ತಿಳಿಸಿದ್ದಾರೆ.

ಸಾಲಬಾಧೆಯಿಂದ ಗುತ್ತಿಗೆದಾರ ಆತ್ಮಹತ್ಯೆ

ಕುಶಾಲನಗರ, ಆ.23– ಸಾಲಬಾಧೆ ಹಾಗೂ ಅನಾರೋಗ್ಯದಿಂದ ಗುತ್ತಿಗೆದಾರ ಮನೆಯಲ್ಲೇ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ಸಮೀಪದ ಹಾರಂಗಿಯಲ್ಲಿ ಶುಕ್ರವಾರ ನಡೆದಿದೆ.

ಹಾರಂಗಿ (ಹುಲುಗುಂದ) ನಿವಾಸಿ, ಗುತ್ತಿಗೆದಾರ ಶರವಣ (48) ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಈತ ಸಾಲಬಾಧೆಯಿಂದ ಮನನೊಂದು ಹಾಗೂ ಅನಾರೋಗ್ಯದಿಂದ ಬಳಲುತ್ತಿದ್ದು, ಶುಕ್ರವಾರ ಮನೆಯಲ್ಲಿಯೇ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ಮೃತ ವ್ಯಕ್ತಿಗೆ ಪತ್ನಿ, ಪುತ್ರ ಹಾಗೂ ಪುತ್ರಿ ಇದ್ದಾರೆ. ಕುಶಾಲನಗರ ಠಾಣೆ ಪೊಲೀಸರು ಸ್ಥಳ ಪರಿಶೀಲಿಸಿ, ಈ ಸಂಬಂಧ ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಈರಯ್ಯ ನಿಧನ



ಕುಶಾಲನಗರ, ಆ.23–ಕೂಡುಮಂಗಳೂರು ಗ್ರಾಮ ಪಂಚಾಯಿತಿ ಸದಸ್ಯರಾದ ಜನತಾ ಕಾಲೋನಿ ನಿವಾಸಿ ಈರಯ್ಯ (65) ಅನಾರೋಗ್ಯದಿಂದ ಶುಕ್ರವಾರ ನಿಧನರಾದರು.

ಮೃತರು ಪತ್ನಿ, ಇಬ್ಬರು ಪುತ್ರರು, ಪುತ್ರಿಯನ್ನು ಅಗಲಿದ್ದಾರೆ. ಶನಿವಾರ ಕೂಡುಮಂಗಳೂರಿನ ರುದ್ರಭೂಮಿಯಲ್ಲಿ ಅಂತ್ಯಕ್ರಿಯೆ ನಡೆಯಲಿದೆ ಎಂದು ಕುಟುಂಬದವರು ತಿಳಿಸಿದ್ದಾರೆ.

ಪತ್ರಕರ್ತರು ನಾಟಕ ಪರಂಪರೆ ಉಳಿಸಬೇಕು



ಚಾಮರಾಜನಗರ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ವತಿಯಿಂದ ಹಿರಿಯ ಪತ್ರಕರ್ತ ಅಬ್ರಹಾಂ ಡಿ.ಸಿಲ್ವಾ ಅವರನ್ನು ಸನ್ಮಾನಿಸಲಾಯಿತು.

ಚಾಮರಾಜನಗರ, ಆ.23–ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘ ಒಗ್ಗಟ್ಟು ಪ್ರದರ್ಶಿಸುವ ಮೂಲಕ ನಾಟಕ ಪರಂಪರೆ ಉಳಿಸಿಕೊಂಡು ಹೋಗಬೇಕು ಎಂದು ಹಿರಿಯ ಪತ್ರಕರ್ತ, ಕರ್ನಾಟಕ ನಾಟಕ ಅಕಾಡೆಮಿ ಪ್ರಶಸ್ತಿ ಪುರಸ್ಕೃತ ಅಬ್ರಹಾಂ ಡಿ.ಸಿಲ್ವಾ ಹೇಳಿದರು.

ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ವತಿಯಿಂದ ನಡೆದ ಸಮಾರಂಭದಲ್ಲಿ ಸನ್ಮಾನ ಸ್ವೀಕರಿಸಿ ಮಾತನಾಡಿದ ಅವರು, ನಾನು 40 ವರ್ಷ ಪತ್ರಿಕಾರಂಗದಲ್ಲಿ ಸೇವೆ ಸಲ್ಲಿಸಿದ್ದು, ಮಾಧ್ಯಮ ಅಕಾಡೆಮಿ ಪ್ರಶಸ್ತಿಯೂ ಲಭಿಸಿದೆ. ಈಗ ನಾಟಕ ಅಕಾಡೆಮಿ ಪ್ರಶಸ್ತಿ ಬಂದಿದೆ. ಇದೇ ರೀತಿ ಚಾಮರಾಜನಗರ ಪತ್ರಕರ್ತರು ಒಗ್ಗಟ್ಟಿನ ಪರಂಪರೆಯನ್ನು ಮುಂದುವರೆಸಿಕೊಂಡು ಹೋಗಬೇಕು ಎಂದು ಮನವಿ ಮಾಡಿದರು.

ನನಗೆ ಕಾಲೇಜು ದಿನಗಳಿಂದಲೂ ನಾಟಕದ ಗೀಳಿತ್ತು. ರಾಜ್ಯದ ಯಾವುದೇ ಮೂಲೆಯಲ್ಲಿ ನಾಟಕ ನಡೆದರೂ, ಹೋಗಿ ನೋಡುತ್ತಿದ್ದೆ. 1973ರಲ್ಲಿ ಗೆಳೆಯರ ಜತೆಗೂಡಿ ಶಾಂತಲಾ ಕಲಾವಿದರ ತಂಡ ಆರಂಭಿಸುವ ಮೂಲಕ ಅನೇಕ ನಾಟಕಗಳನ್ನು ಪ್ರದರ್ಶಿಸಿ ಯಶಸ್ವಿಯಾಗಿದ್ದೇವೆ. ನಮ್ಮ ತಂಡದ ಸಹಯೋಗದಲ್ಲಿ ನಾನಾ ಕಡೆಯಿಂದ ಕಲಾವಿದರನ್ನು ಆಹ್ವಾನಿಸಿ ನಾಟಕ ಪ್ರದರ್ಶಿಸಲಾಗಿದೆ ಎಂದು ತಿಳಿಸಿದರು.

ಪತ್ರಕರ್ತ ನಾಗೇಶ್ ಸೋಸ್ಲೆ ಮಾತನಾಡಿ, ಒಬ್ಬ ಪತ್ರಕರ್ತನಾದವನಿಗೆ ಜ್ಞಾನದ ಜೊತೆಗೆ ಗುಣವು ಇರಬೇಕು. ಇವೆರಡು ಅಬ್ರಹಾಂ ಡಿ.ಸಿಲ್ವಾ ಅವರಲ್ಲಿದೆ. ಅವರು ಎಂದಿಗೂ ಪ್ರಶಸ್ತಿಗೆ ಲಾಬಿ ಮಾಡಿದವರಲ್ಲ. ಅವರ ಪ್ರತಿಭೆ ಗುರುತಿಸಿ ನಾಟಕ ಅಕಾಡೆಮಿ ಪ್ರಶಸ್ತಿ ಸಿಕ್ಕಿದೆ ಎಂದರು. ಕಾರ್ಯಕ್ರಮದಲ್ಲಿ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಕೆ.ಬಿ.ದೇವರಾಜು, ಪತ್ರಕರ್ತರಾದ ಗೂಳೀಪುರ ನಂದೀಶ್, ಪ್ರಸಾದ್ ಲಕ್ಕೂರು, ಸಂಘದ ಸದಸ್ಯರು, ನಿರ್ದೇಶಕರು ಹಾಜರಿದ್ದರು.

ಮುಂದಿನ ತಿಂಗಳು ಜಿಲ್ಲಾದ್ಯಂತ ಜೀತಮುಕ್ತ ಅಭಿಯಾನ

ಪರಿಶಿಷ್ಟ ಜಾತಿ ಹಿತರಕ್ಷಣಾ ಸಮಿತಿ ಸಭೆಯಲ್ಲಿ ಜಿಲ್ಲಾಧಿಕಾರಿ ಶಿಲ್ಪನಾಗ್ ಮಾಹಿತಿ

ಚಾಮರಾಜನಗರ, ಆ.23–ಮುಂದಿನ ತಿಂಗಳು ಜಿಲ್ಲಾದ್ಯಂತ ಜೀತಮುಕ್ತ ಜಿಲ್ಲೆ ಅಭಿಯಾನ ಹಮ್ಮಿಕೊಳ್ಳಲಾಗುವುದು. ಅಭಿಯಾನ ಅಂಗವಾಗಿ ಜಿಲ್ಲೆಯ ಪ್ರತಿ ಗ್ರಾಮ ಪಂಚಾಯಿತಿಯಲ್ಲಿ ವಿಶೇಷ ಗ್ರಾಮ ಸಭೆ ಏರ್ಪಡಿಸಿ, ಜೀತಮುಕ್ತರಿಗೆ ಪುನರ್ವಸತಿ ಕಲ್ಪಿಸಲು ಪಿಡಿಓಗಳಿಗೆ ಸೂಚಿಸಲಾಗುವುದು ಎಂದು ಜಿಲ್ಲಾಧಿಕಾರಿ ಶಿಲ್ಪನಾಗ್ ತಿಳಿಸಿದರು.



ಚಾಮರಾಜನಗರ ಜಿಲ್ಲಾಡಳಿತ ಭವನದ ಹಳೇ ಕೆಡಿಪಿ ಸಭಾಂಗಣದಲ್ಲಿ ನಡೆದ ಪರಿಶಿಷ್ಟ ಜಾತಿ ಹಿತರಕ್ಷಣಾ ಸಮಿತಿ ಸಭೆಯಲ್ಲಿ ಡಿಸಿ ಶಿಲ್ಪನಾಗ್ ಮಾತನಾಡಿದರು.

ನಗರದ ಜಿಲ್ಲಾಡಳಿತ ಭವನದ ಹಳೇ ಕೆಡಿಪಿ ಸಭಾಂಗಣದಲ್ಲಿ ಶುಕ್ರವಾರ ನಡೆದ ಪರಿಶಿಷ್ಟ ಜಾತಿ ಹಿತರಕ್ಷಣಾ ಸಮಿತಿ ಸಭೆಯಲ್ಲಿ ಸಮುದಾಯದ ಮುಖಂಡರಿಂದ ಕುಂದುಕೊರತೆ ಆಲಿಸಿ, ಮಾತನಾಡಿದರು.

ಜಿಲ್ಲೆಯ ಹಲವು ಭಾಗಗಳಲ್ಲಿ ಜೀತಪದ್ಧತಿಯಿಂದ ವಿಮುಕ್ತರಾದವರಿಗೆ ಪುನರ್ವಸತಿ ಕಲ್ಪಿಸಿಲ್ಲ. ಜೊತೆಗೆ ಗುರುತಿನ ಚೀಟಿ ನೀಡಿಲ್ಲ ಇದರಿಂದ ಸರ್ಕಾರಿ ಸೌಲಭ್ಯಗಳಿಂದ ವಂಚಿತರಾಗಿದ್ದಾರೆ. ಇವರಿಗೆ ಮೀಸಲಾಗಿದ್ದ ಜಮೀನಿನ ಸಾಗುವಳಿಗೆ ಹಕ್ಕುಪತ್ರ ನೀಡಿದ್ದರೂ ಸದರಿ ಜಮೀನಿನಲ್ಲಿ ಬೇರೆಯವರು ಕೃಷಿ ಮಾಡುತ್ತಿದ್ದಾರೆ. ಸೂಕ್ತ ಜಮೀನು ನೀಡಿ, ಪುನರ್ವಸತಿ ಕಲ್ಪಿಸಬೇಕು. ಮುಕ್ಕಡಹಳ್ಳಿ ಗ್ರಾಪಂ ವ್ಯಾಪ್ತಿ 8 ಜೀತ ವಿಮುಕ್ತರಾಗಿದ್ದು, ಇವರಿಗೆ 10 ಸಾವಿರ ಪರಿಹಾರ ಬಿಟ್ಟರೆ ಬೇರೆ ಯಾವುದೇ ಪರಿಹಾರ ಸಿಕ್ಕಿಲ್ಲ. ಮನೆ, ಜಮೀನು ಕೊಡಿಸುವಂತೆ ಸಮುದಾಯದ ಮುಖಂಡರು ಸಭೆಯಲ್ಲಿ ಮನವಿ ಮಾಡಿದರು.

ಇದಕ್ಕೆ ಉತ್ತರಿಸಿದ ಜಿಲ್ಲಾಧಿಕಾರಿ, ಇದನ್ನು ವಿಶೇಷ ಪ್ರಕರಣವಾಗಿ ಪರಿಗಣಿಸಿ ಸಂತ್ರಸ್ತ ಕುಟುಂಬಗಳಿಗೆ ಸರ್ಕಾರಿ ಜಾಗದಲ್ಲಿ ಪುನರ್ವಸತಿ ಕಲ್ಪಿಸಲು ಕ್ರಮ ವಹಿಸಲಾಗುವುದು. ಒಂದು ವೇಳೆ ಸರ್ಕಾರಿ ಜಾಗ ಇಲ್ಲದಿದ್ದರೆ ಖಾಸಗಿಯವರಿಂದ ಜಾಗ, ಜಮೀನು ಖರೀದಿಸಿ ನೀಡಲಾಗುವುದು. ಅಲ್ಲದೆ, ಗ್ರಾಮ ಪಂಚಾಯಿತಿ ಗ್ರಾಮಸಭೆಗಳಲ್ಲಿ ಜೀತಮುಕ್ತರಿಗೆ ಆದ್ಯತೆ ನೀಡಲಾಗುವುದು. ಈ ಬಗ್ಗೆ ಸಭಾ ನಡಾವಳಿಗಳಲ್ಲಿ ನಮೂದಿಸಿ ಕಾರ್ಯರೂಪಕ್ಕೆ ತರಲು ತಿಳಿಸಲಾಗುವುದು ಎಂದರು.

ತಾಲೂಕಿನ ಬಸವನಪುರ ಗ್ರಾಮದ 3.20 ಎಕರೆ ಸರ್ಕಾರಿ ಜಾಗದ ಪೈಕಿ 1 ಎಕರೆಯನ್ನು ಪರಿಶಿಷ್ಟ ಜನಾಂಗದ ಸ್ಮಶಾನಕ್ಕೆ ಮಂಜೂರಾಗಿದ್ದರೂ ಅಧಿಕಾರಿಗಳು ಅದನ್ನು ಖಾಸಗಿ ವ್ಯಕ್ತಿಗೆ ಖಾತೆ ಮಾಡಿಕೊಟ್ಟಿದ್ದಾರೆ. ಯಣಗುಂಬ ಗ್ರಾಮದಲ್ಲಿ 5 ಜನರಿಗೆ ಸಾಗುವಳಿ ಚೀಟಿ ನೀಡಿ ಖಾತೆ ಮಾಡಿ ಕೊಟ್ಟಿಲ್ಲ. ಹನೂರು ತಾಲೂಕಿನ ಅಂಬಿಕಾಪುರ ಗ್ರಾಮದಲ್ಲಿ ಸ್ಮಶಾನ ಅಭಿವೃದ್ಧಿಪಡಿಸಿಲ್ಲ. ದಲಿತ ಕುಟುಂಬಗಳಿಗೆ ಗ್ರಾಮದ 1.53 ಎಕರೆ ಜಾಗದಲ್ಲಿ ನಿವೇಶನ ನೀಡುವ ಕುರಿತ ಮನವಿಗೆ ಸ್ಪಂದಿಸಿದ ಜಿಲ್ಲಾಧಿಕಾರಿ, ಕೂಡಲೇ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿ ವರದಿ ನೀಡುವಂತೆ ತಹಸೀಲ್ದಾರ್‌ಗೆ ನಿರ್ದೇಶನ ನೀಡಿದರು.

> ಜಿಲ್ಲೆಯ ಯಾವುದೇ ಭಾಗದಲ್ಲಿ ಸಾಮಾಜಿಕ ಬಹಿಷ್ಕಾರ, ಅಸ್ಪೃಶ್ಯತೆ ಆಚರಣೆ ಸಹಿಸುವುದಿಲ್ಲ. ಇದು ಸೂಕ್ಷ್ಮ ವಿಚಾರವಾಗಿದೆ. ಜಿಲ್ಲಾಡಳಿತ ಇದನ್ನು ಗಂಭೀರವಾಗಿ ಪರಿಗಣಿಸಿ, ನಿರ್ದಾಕ್ಷಿಣ್ಯ ಕ್ರಮ ಜರುಗಿಸಲಿದೆ.
> –ಶಿಲ್ಪನಾಗ್, ಜಿಲ್ಲಾಧಿಕಾರಿ

> ಜಿಲ್ಲೆಯ ಎಲ್ಲೆಡೆ ಪರಿಶಿಷ್ಟ ಸಮುದಾಯದ ಮೇಲೆ ಯಾವುದೇ ದೌರ್ಜನ್ಯಗಳಾಗದಂತೆ ಎಚ್ಚರ ವಹಿಸಲಾಗುತ್ತಿದೆ. ಪ್ರತಿ ತಿಂಗಳು ಸಮುದಾಯದ ಸಮಸ್ಯೆಗಳನ್ನು ಪರಿಹರಿಸಲು ಪರಿಶಿಷ್ಟ ಹಿತರಕ್ಷಣಾ ಸಭೆ ಆಯೋಜಿಸಲಾಗುತ್ತಿದೆ. ಅಸ್ಪೃಶ್ಯತೆ ಆಚರಣೆಯಾಗದಂತೆ ಸಾರ್ವಜನಿಕರಿಗೆ ಜಾಗೃತಿ ಮೂಡಿಸಲಾಗುತ್ತಿದೆ.
> –ಡಾ.ಬಿ.ಟಿ.ಕವಿತಾ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ

ಸಭೆಯಲ್ಲಿ ಜಿಪಂ ಸಿಇಓ ಮೋನಾ ರೋತ್, ಅಪರ ಜಿಲ್ಲಾಧಿಕಾರಿ ಗೀತಾ ಹುಡೇದ, ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿ ಬಿಂದ್ಯಾಶ್ರೀ, ಮುಖಂಡರಾದ ಸಿ.ಕೆ.ಮಂಜುನಾಥ್, ಸಿ.ಎಂ.ಕೃಷ್ಣಮೂರ್ತಿ, ಕೆ.ಎಂ.ನಾಗರಾಜು, ಅರಕಲವಾಡಿ ನಾಗೇಂದ್ರ, ಸಂಘಸೇನಾ, ಚಾ.ಗು.ನಾಗರಾಜು, ಮುತ್ತಿಗೆ ಮೂರ್ತಿ, ಪರ್ವತ್‌ರಾಜ್, ಸಿ.ಕೆ.ರವಿಕುಮಾರ್, ದಡದಹಳ್ಳಿ ಶಂಕರ, ಬಸವನಪುರ ರಾಜಶೇಖರ್, ಯರಿಯೂರು ರಾಜಣ್ಣ, ಸಿ.ಎಂ. ಕೃಷ್ಣ, ಪ್ರಸನ್ನ, ಅಂಬರೀಷ್, ಸುರೇಶ್ ನಾಯಕ, ಶ್ರೀಕಂಠ, ದೊಡ್ಡಿಂದುವಾಡಿ ಸಿದ್ದರಾಜು, ನಾಗರಾಜು, ಶಿವಣ್ಣ, ನಾಗೇಶ್, ಮಹೇಶ್, ವಾಸು, ಬ್ಯಾಡಮೂಡ್ಲು ಬಸವಣ್ಣ, ನಟರಾಜು, ಭಾನುಪ್ರಕಾಶ್, ಸಿದ್ದಯ್ಯ, ಸುಭಾಷ್ ಮಾಡ್ರಹಳ್ಳಿ, ಕಂದಹಳ್ಳಿ ನಾರಾಯಣ, ಸೋಮಸುಂದರ್, ಮಾಂಬಳ್ಳಿ ರಜನಿಕಾಂತ್, ರಂಗಸ್ವಾಮಿ, ದೊಡ್ಡರಾಯಪೇಟೆ ಮೂರ್ತಿ, ಸಮುದಾಯದ ಮುಖಂಡರು ಉಪಸ್ಥಿತರಿದ್ದರು.

ಸಿದ್ದರಾಮಯ್ಯ ಕಳಂಕ ರಹಿತ ರಾಜಕಾರಣಿ



ಆಲಹಳ್ಳಿ ಗ್ರಾಮದಲ್ಲಿ ಶುದ್ಧ ಕುಡಿಯುವ ನೀರಿನ ಘಟಕಕ್ಕೆ ಶಾಸಕ ಎ.ಆರ್.ಕೃಷ್ಣಮೂರ್ತಿ ಚಾಲನೆ ನೀಡಿದರು.

ಕೊಳ್ಳೇಗಾಲ, ಆ.23–ಮುಖ್ಯಮಂತ್ರಿ ಸಿದ್ದರಾಮಯ್ಯ ತಮ್ಮ ರಾಜಕೀಯ ಜೀವನದಲ್ಲಿ ಯಾವುದೇ ಕಪ್ಪು ಚುಕ್ಕೆ ಇಲ್ಲದ ಕಳಂಕ ರಹಿತ ರಾಜಕಾರಣಿಯಾಗಿದ್ದಾರೆ. ಇವರ ಬಗ್ಗೆ ರಾಜ್ಯದ ಜನರು ವಾಸ್ತವಾಂಶ ಅರಿಯಬೇಕಿದೆ ಎಂದು ಶಾಸಕ ಎ.ಆರ್.ಕೃಷ್ಣಮೂರ್ತಿ ಹೇಳಿದರು.

ತಾಲೂಕಿನ ಟಗರಪುರದಲ್ಲಿ ವಿವಿಧ ಕಾಮಗಾರಿಗೆ ಚಾಲನೆ ನೀಡಿ ಮಾತನಾಡಿದ ಅವರು, ಸಿದ್ದರಾಮಯ್ಯ ಬಡವರು ಹಾಗೂ ದೀನದಲಿತರ ಅಭಿವೃದ್ಧಿಗೆ ಸ್ಪಂದಿಸುತ್ತಿದ್ದಾರೆ. ಇಂತಹ ಧೀಮಂತ ನಾಯಕರ ಬಗ್ಗೆ ಹಸಿ ಸುಳ್ಳು ಹೇಳಿಕೊಂಡು ಮುಡಾ ಪ್ರಕರಣದಲ್ಲಿ ಅವರಿಗೆ ಮಸಿ ಬಳಿಯುವ ಕೆಲಸ ಮಾಡಲಾಗುತ್ತಿದೆ ಎಂದು ತಿಳಿಸಿದರು. ನ್ಯಾಯಾಲಯದಲ್ಲಿ ದಂಡ ಕಟ್ಟಿದ್ದ ವ್ಯಕ್ತಿಯ ದೂರನ್ನೇ ಆಧಾರವಾಗಿಟ್ಟುಕೊಂಡು ರಾಜ್ಯಪಾಲರು ರಾಜಕೀಯ ದುರುದ್ದೇಶದಿಂದ ಸಿದ್ದರಾಮಯ್ಯ ವಿರುದ್ಧ ಪ್ರಾಸಿಕ್ಯೂಷನ್‌ಗೆ ಅನುಮತಿ ನೀಡಿರುವುದು ಸರಿಯಲ್ಲ. ಇದರಿಂದ ಜನರಿಗೆ ತಪ್ಪು ಸಂದೇಶ ಸಾರಲಾಗುತ್ತಿದೆ ಎಂದರು.

ಇದೇ ವೇಳೆ ತಾಲೂಕಿನ ಆಲಹಳ್ಳಿ ಗ್ರಾಮದಲ್ಲಿ ಶುದ್ಧ ಕುಡಿಯುವ ನೀರಿನ ಘಟಕ ಸೇರಿದಂತೆ ವಿವಿಧೆಡೆ ಕಾಮಗಾರಿಗಳಿಗೆ ಶಾಸಕರು ಚಾಲನೆ ನೀಡಿದರು.

ಕಾರ್ಯಕ್ರಮದಲ್ಲಿ ಹೊಂಗನೂರು ಚಂದ್ರು, ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿ ತಾಲೂಕು ಅಧ್ಯಕ್ಷ ರಾಜೇಂದ್ರ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಆಲಹಳ್ಳಿ ತೋಟೇಶ್, ನಗರಸಭೆ ಮಾಜಿ ಅಧ್ಯಕ್ಷ ರಮೇಶ್, ಸದಸ್ಯ ರಮೇಶ್, ಚೇತನ್ ದೊರೆರಾಜು, ಮಹಾಲಿಂಗ, ರಾಜೇಂದ್ರ, ಗೊಬ್ಬಳಿಪುರ ರಾಚಪ್ಪ, ಸಂತೇಮರಳ್ಳಿ ಮಹೇಶ್, ಮಲ್ಲಣ್ಣ ಪಿಡಿಓ ಮಲ್ಲೇಶ ಇನ್ನಿತರರಿದ್ದರು.

ಮಹದೇವಯ್ಯ, ಸುನೀಲ್‌ಗೆ ಪ್ರಥಮ ಸ್ಥಾನ



ಚಾಮರಾಜನಗರ: ಬೆಂಗಳೂರಿನಲ್ಲಿ ನಡೆದ ರಾಜ್ಯ ಮಟ್ಟದ ಸರ್ಕಾರಿ ನೌಕರರ ಕ್ರೀಡಾಕೂಟದಲ್ಲಿ ಜಿಲ್ಲೆಯಿಂದ ಭಾಗವಹಿಸಿದ್ದ ಜಿಲ್ಲಾ ನೌಕರರ ಸಂಘದ ಖಜಾಂಚಿ ಎಸ್.ಮಹದೇವಯ್ಯ ಹಾಗೂ ಶಿಕ್ಷಕ ಸುನೀಲ್ ಗ್ರಾಡ್ಮರ್ ಅವರು ಬ್ಯಾಡ್ಮಿಂಟನ್ ಸಿಂಗಲ್ಸ್ ಮತ್ತು ಡಬಲ್ಸ್ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ ಗಳಿಸಿದ್ದಾರೆ.

ಇವರಿಗೆ ಜಿಲ್ಲಾ ನೌಕರರ ಸಂಘ ಹಾಗೂ ಪಂಚಾಯತ್ ರಾಜ್ ಇಲಾಖೆ ವತಿಯಿಂದ ಅಭಿನಂದನೆ ಸಲ್ಲಿಸಲಾಗಿದೆ.

ಗಂಗವಾಡಿಯಲ್ಲಿ ಆರೋಗ್ಯ ತಪಾಸಣಾ ಶಿಬಿರ



ಯಳಂದೂರು, ಆ.23–ತಾಲೂಕಿನ ಗಂಗವಾಡಿ ಗ್ರಾಮದ ವೀರಭದ್ರೇಶ್ವರ ಜ್ಞಾನವಿಕಾಸ ಕೇಂದ್ರದಲ್ಲಿ ಮೈಸೂರಿನ ಸ್ಪಂದನ ಆಸ್ಪತ್ರೆ ವತಿಯಿಂದ ಆರೋಗ್ಯ ತಪಾಸಣಾ ಉಚಿತ ಶಿಬಿರ ಆಯೋಜಿಸಲಾಗಿತ್ತು.

ಧರ್ಮಸ್ಥಳ ಗ್ರಾಮಾಭಿವೃದ್ಧಿ ತಾಲೂಕಿನ ಯೋಜನಾಧಿಕಾರಿ ಆನಂದ್ ಶಿಬಿರಕ್ಕೆ ಚಾಲನೆ ನೀಡಿದರು. ಗ್ರಾಪಂ ಸದಸ್ಯ ನಾಗರಾಜು ಅಧ್ಯಕ್ಷತೆ ವಹಿಸಿದ್ದರು. ಡಾ.ಸಿ.ಎಂ.ಅವಿನಾಶ್ ಪಾಟೀಲ್, ಜಿಲ್ಲಾ ಜನಜಾಗೃತಿ ವೇದಿಕೆ ಸದಸ್ಯ ವೆಂಕಟರಂಗಯ್ಯ, ವೈದ್ಯೆ ಕಾವ್ಯ, ಆರೋಗ್ಯ ಸಹಾಯಕಿ ಶೀಲಾ, ಜ್ಞಾನವಿಕಾಸ ಸಮನ್ವಯಾಧಿಕಾರಿ ವಿನುತಾ, ಸೇವಾ ಪ್ರತಿನಿಧಿ ಹಾಗೂ ಸಂಘದ ಸದಸ್ಯರು ಇದ್ದರು.

ದೇವಸ್ಥಾನಕ್ಕೆ ನಿರಂತರ ಜ್ಯೋತಿ ಸಂಪರ್ಕ



ಹರಳುಕೋಟೆ ಆಂಜನೇಯ, ಜನಾರ್ಧನಸ್ವಾಮಿ ದೇವಸ್ಥಾನಕ್ಕೆ ನಿರಂತರ ಜ್ಯೋತಿ ಸಂಪರ್ಕ ಕಲ್ಪಿಸಿದ ಸೆಸ್ಕ್ ಸಿಬ್ಬಂದಿಯನ್ನು ದೇವಸ್ಥಾನದ ವತಿಯಿಂದ ಅಭಿನಂದಿಸಲಾಯಿತು.

ಚಾಮರಾಜನನಗರ, ಆ.23–ಶಾಸಕ ಸಿ.ಪುಟ್ಟರಂಗಶೆಟ್ಟಿ ಅವರಿಗೆ ಭಕ್ತರು ಮತ್ತು ಸಾರ್ವಜನಿಕರು ಹರಳುಕೋಟೆ ಆಂಜನೇಯಸ್ವಾಮಿ ಮತ್ತು ಜನಾರ್ಧನಸ್ವಾಮಿ ದೇವಸ್ಥಾನಕ್ಕೆ ನಿರಂತರ ಜ್ಯೋತಿ ಕಲ್ಪಿಸುವಂತೆ ಮನವಿ ಮಾಡಿದ ಹಿನ್ನೆಲೆಯಲ್ಲಿ ಸೆಸ್ಕ್ ಸಿಬ್ಬಂದಿ ಶುಕ್ರವಾರ ನಿರಂತರ ಜ್ಯೋತಿ ಸಂಪರ್ಕ ನೀಡಿದರು.

ಸೆಸ್ಕ್ ಮುಖ್ಯ ಇಂಜಿನಿಯರ್ ಮಹದೇವಸ್ವಾಮಿ, ಪ್ರಸನ್ನ ಮಾರ್ಗದರ್ಶನದಲ್ಲಿ ಶಾಖಾಧಿಕಾರಿಗಳಾದ ಚಂದ್ರನಾಯಕ, ಮಂಜುನಾಥ್ ಮತ್ತು ಸಿಬ್ಬಂದಿ ವಿದ್ಯುತ್ ಸಂಪರ್ಕ ಕಲ್ಪಿಸಿದರು. ಈ ಸಂದರ್ಭದಲ್ಲಿ ಲೆಕ್ಕಾಧಿಕಾರಿಗಳು ಮತ್ತು ನೌಕರರ ಸಂಘದ ಉಪಾಧ್ಯಕ್ಷ ಎನ್.ಮಹೇಶ್ ಉಪಸ್ಥಿತರಿದ್ದರು. ಜನಾರ್ಧನಸ್ವಾಮಿ ದೇವಸ್ಥಾನದ ಅರ್ಚಕ ಅನಂತಪ್ರಸಾದ್ ಸೆಸ್ಕ್ ಸಿಬ್ಬಂದಿಗೆ ಅಭಿನಂದಿಸಿದರು.

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ ರೂ. 600 + 30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821–2496522/23

ಬೇಕಾಗಿದ್ದಾರೆ
ಮೈಸೂರಿನ ಸರಸ್ವತಿಪುರಂನಲ್ಲಿರುವ ವಧು–ವರರ ಮಾಹಿತಿ ಕೇಂದ್ರದಲ್ಲಿ ಕೆಲಸ ಮಾಡಲು ಕಂಪ್ಯೂಟರ್ ಅನುಭವವಿರುವ ಮಹಿಳೆಯರು ಬೇಕಾಗಿದ್ದಾರೆ.
7619331333

SITE FOR SALE
40X60 West Facing MIT Engg. College, Back Gate, Dhatri Nagar
9986309304

ಸೈಟ್ ಮಾರಾಟಕ್ಕಿದೆ
ಪೊಲೀಸ್ ಲೇಔಟ್ 3ನೇ ಹಂತ ಹಾಗೂ B.V.L ಲೇಔಟ್
9731204530

ದಟ್ಟಗಳ್ಳಿಯಲ್ಲಿ ಇರುವ ಶುಭಪ್ರದ ಸೀರೆ ಶೋ ರೂಮಿಗೆ
ಮಹಿಳೆಯರು ಸೇಲ್ಸ್‌ಗೆ ಬೇಕಾಗಿದ್ದಾರೆ
ವಯಸ್ಸು: 25 – 35ರ ವರೆಗೆ
Mob: 6364546699

ವೃದ್ಧಾಶ್ರಮ
ನಮ್ಮ ಸಂಸ್ಥೆಯಲ್ಲಿ ವಯಸ್ಸಾದ ವೃದ್ಧರು, ಪುರುಷ ಮತ್ತು ಮಹಿಳೆಯರಿಗೆ ಹಾಸಿಗೆ ಹಿಡಿದ ವೃದ್ಧರು ಮತ್ತು ಪಾರ್ಶ್ವವಾಯು ಪೀಡಿತರನ್ನು ನಮ್ಮ ಸಂಸ್ಥೆಯಲ್ಲಿ ನೋಡಿಕೊಳ್ಳಲಾಗುವುದು ನಮ್ಮ ಸಂಸ್ಥೆಯಲ್ಲಿ ಸಸ್ಯಹಾರಿ ತಿಂಡಿ–ಊಟ ಮತ್ತು ಬಿಸಿ ನೀರಿನ ಸೌಲಭ್ಯ, ನಿಯಮಿತ ವೈದ್ಯಕೀಯ ಸೌಲಭ್ಯವಿರುತ್ತದೆ, ಇಚ್ಛೆಯುಳ್ಳವರು ಸಂಪರ್ಕಿಸಿ:
9110455297 | 9591557126

SITE FOR SALE
40x60 W/F site
University Layout, Near Mother Teresa Architecture College.
Mob: 9740088990

LAND CARE SOLUTIONS
HOUSE FOR SALE
(Prime Location)
North / West Corner | 5 BHK | 3920 Sqft, No. 1226, G&H Block, Kuvempunagar, Mysore
Call: 9845414842 | 0821-3137855

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 7204494854

ಬೇಕಾಗಿದ್ದಾರೆ
ನಮ್ಮ ಸಂಸ್ಥೆಗೆ ಕೆಲಸ ಮಾಡಲು ಸಮಾಜ ಸೇವಾ ಮನೋಭಾವದ ವಿದ್ಯಾವಂತ ಯುವತಿಯರು ಬೇಕಾಗಿದ್ದಾರೆ. ಆಕರ್ಷಕ ಸಂಬಳ ನೇರ ಸಂಪರ್ಕಿಸಿ: 9am to 6pm
6361740552

SITE FOR SALE
30x40 S/F 4th Stage Vijayanagar 2nd Phase
7019769205

ರಿಯಾಯಿತಿ ದರಕ್ಕೆ ಮನೆ ಮಾರಾಟಕ್ಕಿದೆ
ಮೈಸೂರು ರಾಜಕುಮಾರ್ ರಸ್ತೆ ಪಶ್ಚಿಮಕ್ಕೆ 40x25 ಅಳತೆಯಲ್ಲಿ 6 ಚದರಮನೆ ರಿಯಾಯಿತಿ ದರಕ್ಕೆ ಮಾರಾಟಕ್ಕಿದೆ.
9880793880

WANTED
ಲಾಲ್ ಬಹದ್ದೂರ್ ಶಾಸ್ತ್ರಿ ನಗರ, ಗೋಪಾಲಗೌಡ ನಗರ ಹಾಗೂ ಲಲಿತಾದ್ರಿನಗರದಲ್ಲಿ ಸೈಟುಗಳು ಬೇಕಾಗಿದೆ.
20x30, 30x40
9900125239

ನೀವು ಒಬ್ಬ ಟೀಚರ್ ಆಗ ಬೇಕೇ?
SSLC ಪಾಸ್ PUC, Degree ಪಾಸ್/ಫೇಲ್ NURSERY TEACHERS TRAINING ಟ್ರೈನಿಂಗ್ ನಂತರ ತಕ್ಷಣ ಕೆಲಸ ಬನ್ನಿ ಸೇರಿ, ಪಾಸಾಗಿ, ಸಂಪಾದಿಸಿ PUC ಓದುತ್ತಿರುವವರು ಸಹ ಸೇರಬಹುದು. Jnana Gangothri Convent Rajendra Nagara Mysore Whatsapp/call
9113980741

ಬೇಕಾಗಿದ್ದಾರೆ
ಹಾಸ್ಟೆಲ್‌ಗೆ ಅಡುಗೆ ಹೆಲ್ಪರ್ ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ. ವಸತಿ ಉಚಿತ, ಸ್ಥಳ: ಸುಳ್ಯ
9902176566

ತಾರಸಿ ಸೋರಿಕೆ ರಿಪೇರಿ
ನಿಮ್ಮ ಮನೆಯ ತಾರಸಿ ಅಥವಾ ಕಟ್ಟಡದ ಯಾವುದೇ ಭಾಗದ Water Profing ಮತ್ತು ಇನ್ನಿತರ ಸಿವಿಲ್ ಕಾಮಗಾರಿಗೆ ಸಂಪರ್ಕಿಸಿ: 10 ರಿಂದ 15 ವರ್ಷಗಳ ವಾರೆಂಟಿ ಚಾಲೆಂಜ್. ವಾಟ್ಸ್‌ಪ್ ಮಾಡಿ
9916021886

ಮನೆ ಬಾಡಿಗೆಗೆ ಇದೆ
ರಾಜಶೇಖರ ಆಸ್ಪತ್ರೆ ಹಿಂಭಾಗ ಮನೆ ನಂ.172, ರಾಗಿಮಿಲ್ 2ನೇ ಅಡ್ಡ ರಸ್ತೆ, ಮೊದಲನೇ ಮಹಡಿ, 3 ಬೆಡ್ ರೂಂ, ಹಾಲ್, ಅಡುಗೆ ಮನೆ, ಊಟದ ಹಾಲ್, ದೇವರ ಮನೆ, ಸ್ನಾನದ ಮನೆ, ಸೋಲಾರ್, ಗೀಸರ್, ನೀರಿನ ಸೌಕರ್ಯ ಉತ್ತರ ಬಾಗಿಲು
7975023201
7815812948

ಸೈಟು ಬೇಕಾಗಿದೆ
ಹುಣಸೂರು ಮುಖ್ಯ ರಸ್ತೆಯ ಸುತ್ತಮುತ್ತ ಐಶ್ವರ್ಯ ಪೆಟ್ರೋಲ್ ಬಂಕ್‌ನಿಂದ ಬಿಳಿಕೆರೆವರೆಗೆ ಮತ್ತು ಆನಂದಸಾಗರ, ಪ್ರಗತಿನಗರ, ವಿಜಯನಗರ ಸುತ್ತಮುತ್ತ ಬೇಕಾಗಿದೆ. ಮಾರಾಟ ಮಾಡು OWNER ಮಾತ್ರ ಕರೆ ಮಾಡಿ
9448958332

ನಿರ್ಮಲ ಸರ್ವೀಸ್
ಸಂಪು ಕ್ಲೀನಿಂಗ್‌ಗಾಗಿ ಸಂಪರ್ಕಿಸಿ:
6364079244

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 9108566022

ತಕ್ಷಣ ಬೇಕಾಗಿದ್ದಾರೆ
Medical Shop ನಲ್ಲಿ PHARMA AIDE ಆಗಿ ಕೆಲಸ ಮಾಡುವವರು. Exp: 2-15 years. Location: Bogadi
Mob: 9880587586

ಟೈಲರ್‌ಗಳು ಬೇಕಾಗಿದ್ದಾರೆ
ಫುಲ್ ಟೈಮ್, ಪಾರ್ಟ್‌ಟೈಮ್ ವಿಜಯನಗರ 4ನೇ ಹಂತ
8217884837
9845819941

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 8618373596

ಬೇಕಾಗಿದ್ದಾರೆ
ಮೈಸೂರಿನ ವಿಶ್ವೇಶ್ವರನಗರ ಮಹರ್ಷಿ ಶಾಲೆಯ ಬಳಿ ಇರುವ ಕಾರ್ಖಾನೆಗೆ ಬೆಳಿಗ್ಗೆ 7 ಗಂಟೆ ಯಿಂದ ಸಂಜೆ 5 ಗಂಟೆಯವರೆಗೆ ಹೌಸ್ ಕೀಪಿಂಗ್ (ಕಸ ಗುಡಿಸಲು) ಕೆಲಸ ಮಾಡಲು (ಪುರುಷ) ಹುಡುಗರು ಬೇಕಾಗಿದ್ದಾರೆ. ವೇತನ ತಿಂಗಳಿಗೆ 12000/- ಸಾವಿರ ರೂ.ಗಳು ಬೆಳಿಗ್ಗೆ ತಿಂಡಿ, ಮಧ್ಯಾಹ್ನ ಊಟ ವಾರದ ರಜಾ ESI, PF ಸೌಲಭ್ಯವಿರುತ್ತದೆ
9731976148

ಶೋಭಾ ಪ್ರಾಪರ್ಟೀಸ್
ಪೂರ್ಣ ಅಭಿವೃದ್ಧಿ ಹೊಂದಿದ ಸೈಟ್‌ಗಳು ಮಾರಾಟಕ್ಕಿವೆ ಇಲವಾಲ ನಂತರ
8050009696

ಬೇಕಾಗಿದ್ದಾರೆ
ಸೆಕ್ಯೂರಿಟಿ ಗಾರ್ಡ್
ಉತ್ತಮ ವೇತನ, ಪಿಎಫ್ ಮತ್ತು ಇಎಸ್‌ಐ ಸೌಲಭ್ಯವಿರುತ್ತದೆ. ಸ್ಥಳ: ಮೈಸೂರು ಸಿಟಿ ಮತ್ತು ಹೆಬ್ಬಾಳು ಕೈಗಾರಿಕ ನಗರ, ಸಂಪರ್ಕಿಸಿ:
9741515239, 7829393555, 9739376832

WANTED TEACHERS
Shree Guruchennamallikarjuna Swmay Education Trust (SGCM) (English Medium) Opposite Taluk Office, T. Narasipura, Mysore District
1) B.Sc., B.Ed. / M.Sc., B.Ed. (PCMB)- 1 post
2) B.Sc., B.Ed. / M.Sc., B.Ed. (CBZ): 1 post
3) B.A., B.Ed. / MA, B.Ed. (Hindi): 1 post.
Apply above post within 5 days. Contact:
Mob: 9880361180

ಬೋಳು ತಲೆಯ ಸಮಸ್ಯೆಯೇ?

SMART HAIR FIXING
574, 9th Cross, Anikethana Road, kuvempunagar, Mysuru
MYSURU 9611028523 BANGALORE 9343142258

IMKTA - PRE-SCHOOL TEACHER TRAINING
Diploma Courses for SSLC, PU or any Degree Candidates.
Regular / Saturday / Correspondence Courses with practical training. www: imkta.in
ALPHA INTERNATIONAL SCHOOL @ Srirampura
Call: 7829937469
ONLINE TRAINING AVAILABLE

ಬಸವ ಮಾರ್ಗ ಫೌಂಡೇಶನ್
42ನೇ ಉಚಿತ ಕುಡಿತ ಬಿಡಿಸುವ ಶಿಬಿರ. ದಿನಾಂಕ: 12–09–24 ರಿಂದ 22–09–24 ರವರೆಗೆ
8803344999
9742919191

ವಿಶೇಷತೆ ಆರ್ಥೋಪೆಡಿಕ್ ಕ್ಲಿನಿಕ್
ಪಾದ ಮತ್ತು ಪಾದದ ಕೀಲಿನ ಸಮಸ್ಯೆಗಳಿಗೆ
ಭೇಟಿ ಕೊಡಿ: ಮಹಾವೀರ್ ಪಾದ ಮತ್ತು ಪಾದದ ಕೀಲಿನ ಸೆಂಟರ್ ನಂ.926, ವಿಶ್ವಧಾತ್ರಿ ರಸ್ತೆ, ವಿವೇಕಾನಂದನಗರ, ವಿವೇಕಾನಂದ ವೃತ್ತ, ಮೈಸೂರು–23
ಪ್ರತಿ ಮಂಗಳವಾರ ಬೆ:9 ರಿಂದ ಮ:12 ಫಿಸಿಯೋಥೆರಪಿ ಪ್ರತಿ ದಿನ ಸಂಜೆ 5.30pm-8pm ಸಂದರ್ಶನಕ್ಕೆ ಕರೆ ಮಾಡಿ
7204080539, 0821-4000961
Main Clinic ಬೆಂಗಳೂರಿನಲ್ಲಿ

2 SITES FOR SALE
(30x40) Trimurthy Nagara (Near Central St. Joseph School & Acharya Vidyakula) Mysore-Hunsur Road - 22 Lakshs
95388-39926

ಮೊಬೈಲ್‌ನಲ್ಲಿ ಕೆಲಸ ವಾರದ ಸಂಬಳ
NO TARGET, TYPING WORK
ತಿಂಗಳಿಗೆ ರೂ.10,000 ರಿಂದ ರೂ.25,000 ಗಳಿಸಬಹುದು.
8884439666

ಉದ್ಯೋಗ ಅವಕಾಶ
ಬಂದ ದಿನವೇ ಕೆಲಸ (ಮಾರ್ಕೆಟಿಂಗ್ ಅಲ್ಲ) ಮೈಸೂರಿನ ಪ್ರತಿಷ್ಠಿತ MNC ಹಾಗೂ IT ಕಂಪನಿಗಳಿಗೆ 4th, SSLC, PUC, ITI, Any Degree ಪಾಸ್ / ಫೇಲ್ ಆದ ಯುವಕ / ಯುವತಿಯರು ತಕ್ಷಣ ಬೇಕಾಗಿದ್ದಾರೆ. ESI / PF ನೊಂದಿಗೆ ಊಟ, ವಸತಿಯಿರುತ್ತದೆ ಸಂಬಳ – ರೂ. 15200 – 86,100
7411565140, 7892046990

ಮನೆ ಮಾರಾಟಕ್ಕಿದೆ
ಹೊಸದಾಗಿ ಕಟ್ಟಿರುವ ಮನೆ 21 ಚದರಡಿ ಇದ್ದು, ಡೂಪ್ಲೆಕ್ಸ್ ಮನೆ, 30x40 ಕಾರ್ನರ್ ನಿವೇಶನ ಸಂಖ್ಯೆ 23, ಶ್ರೀನಗರ ಬಡಾವಣೆ, ವಿಬಿ ಸಿಟಿ ಪಕ್ಕ ಕೆ.ಆರ್.ಎಸ್. ರಸ್ತೆ, ಮೈಸೂರು.
9538072720, 9886217207

Change of Name
I, Namitha Kumari, residng at #4310, 1st Cross, 2nd Main, Gandhinagar, Narasimha Raja Mohalla, Mysuru-570 007, my son's name is Chirag M. I have changed my son's name as Chirag Raj M. on my own free will, in front of Notary Krishnamurthy on 21-8-2024. Hereafter, in all actions and proceedings, in all records, deeds and instruments in writings and in all dealings and all transactions and upon all occasions whatsoever use and sign the name of Chirag Raj M.
Sd/- Namitha Kumari

WANTED
S & M EVENT MANAGEMENT
Organisors for marriage planning.
We need partners - male / female and Telecallers - female.
Marketing Executive: Female.
CALL: SIDDESH
Mob: 8105182922

ಶಿಕ್ಷಕ/ಶಿಕ್ಷಕಿಯರು ಬೇಕಾಗಿದ್ದಾರೆ
Head Master- 01
Spoken English - 01
NST - 02
8147472526
9448071449

ಬಾದಾಮಿ, ಗೋಡಂಬಿ, ಪಿಸ್ತಾ ಅಂಜೂರ ಖರ್ಜೂರ, ಒಣದ್ರಾಕ್ಷಿ, ದೊರೆಯುತ್ತದೆ.
(5 ಕಿ.ಮೀ ವರೆಗೂ ಉಚಿತ ಡೆಲಿವರಿ)
ರಾಜ್ ಗುರು ಡ್ರೈಫ್ರೂಟ್ಸ್, ನಾರಾಯಣ ಶಾಸ್ತ್ರಿ ರಸ್ತೆ, ಮೈಸೂರು
7022293342
9845460211

WANTED
Wanted teachers for CBSE School in Mysore City, residential / non-residential school. M.Sc., B.Ed. (PCM). Contact:
6361711308, 8147031036

ಸೋಲಾರ್ ವಾಟರ್ ಹೀಟರ್ Solar Water Heater

ಸೇಲ್ಸ್, ಸರ್ವೀಸ್ ರಿಪೇರಿ, ಎಕ್ಸ್‌ಚೇಂಜ್ ಹಾಗೂ ಬಿಡಿ ಭಾಗಗಳಿಗಾಗಿ ಸಂಪರ್ಕಿಸಿ
Vinaykrishna
9611648636

WANTED
HOUSE FOR RENT
Near Dattagalli Rotary West School, facing North or East or South. Contact:
Mob: 9972471345

ಡ್ರೈವರ್ ಬೇಕಾಗಿದ್ದಾರೆ
50 ವರ್ಷ ವಯಸ್ಸು ಮೇಲ್ಪಟ್ಟವರಿಗೆ ಮಾತ್ರ ಆದ್ಯತೆ. ಸಂಬಳ: ತಿಂಗಳಿಗೆ 15,000. ಸಂಪರ್ಕಿಸಿ:
Mob: 9448336788

HOUSE FOR SALE
Shanthaveri Gopalagowda Nagar 30x40 East face site, North face door, 2 BHK. Rs. 90 Lakh.
Mob: 9448601655

ಬೇಕಾಗಿದ್ದಾರೆ
ಮೈಸೂರು ಮೇಟಗಳ್ಳಿ ಮತ್ತು ಹೆಬ್ಬಾಳು ಕೈಗಾರಿಕಾ ಪ್ರದೇಶದಲ್ಲಿರುವ ಪ್ರತಿಷ್ಠಿತ ಕಾರ್ಖಾನೆಗಳಿಗೆ ಹುಡುಗರು ಬೇಕಾಗಿದ್ದಾರೆ. ವಯಸ್ಸು: 18 ರಿಂದ 35 ವರ್ಷ ವಿದ್ಯಾರ್ಹತೆ: 7 ರಿಂದ PUC ಮತ್ತು ITI ರಿಯಾಯಿತಿ ದರದಲ್ಲಿ ಊಟ ಮತ್ತು ವಸತಿ ಸೌಲಭ್ಯವಿರುತ್ತದೆ.
9480404036

ಬೇಕಾಗಿದ್ದಾರೆ
ಹಳೆ ಆರ್‌ಎಂಸಿ ಸರ್ಕಲ್‌ನ ಪೆಟ್ರೋಲ್ ಬಂಕ್‌ಗೆ ಕ್ಯಾಷಿಯರ್ & ಹೆಲ್ಪರ್ಸ್ (ಪುರುಷ/ಮಹಿಳೆ) ವಯಸ್ಸು : 18 ರಿಂದ 40 ಬೇಕಾಗಿದ್ದಾರೆ.
9035541774

SITE FOR SALE
Bank loan available
20x30, 30x40
Near J.P. Nagar, Mysuru
Mob: 8050345574

ಪ್ರಸಿದ್ಧ ಕೇರಳ ಶ್ರೀ ಭಗವತಿ ಜ್ಯೋತಿಷ್ಯರು
ಪಂ|| ಕುಮಾರ್ ಪ್ರಸಾದ್ ಗುರೂಜಿ
Mob: 9731839596
ಸ್ತ್ರೀ–ಪುರುಷಪ್ರೇಮ, ಸಂತಾನ, ದಾಂಪತ್ಯ, ಸಮಸ್ಯೆ, ನಿಮ್ಮ ಯಾವುದೇ ಗುಪ್ತ, ಸಮಸ್ಯೆಗಳಿಗೆ, ಅಷ್ಟಮಂಗಳ, ಪ್ರಶ್ನೆಯಿಂದ, ನೇರ ಉತ್ತರ ಹಾಗೂ ಶಾಶ್ವತ, ಪರಿಹಾರಕ್ಕಾಗಿ, ಚೋಟನೀಕರ, ಭಗವತಿ ತಾಯಿ, ರಾಜರಾಜೇಶ್ವರಿ, ಕುಟ್ಟಿಚೇತನ್, ಕೇರಳದ, ಮಾಂತ್ರಿಕ ಶಕ್ತಿಯಿಂದ, 2 ದಿನದಲ್ಲಿ ಪರಿಹಾರ ಮಾಡಿಕೊಡುತ್ತಾರೆ.
ಖಾಯಂ ಮನೆ ವಿಳಾಸ: ಲಕ್ಷ್ಮಿ ನಿವಾಸ ನಂ.19/D2, ಬುದ್ಧ ಮಾರ್ಗ, ಹೋಟೆಲ್ ದೋಸೆ ಕಾರ್ನರ್ ಪಕ್ಕ, ಹೊಸ DC ಆಫೀಸ್ ಎದುರು, ಸಿದ್ಧಾರ್ಥ ಲೇಔಟ್, ಮೈಸೂರು

Sudarshan Saur SOLAR WATER HEATER

ATTRACTIVE OFFER
ಸೇಲ್ಸ್ & ಸರ್ವೀಸ್
10 ವರ್ಷಗಳ ಗ್ಯಾರಂಟಿ
Bajaj Finserv Available
SUNZONE SOLAR SYSTEM
Vishwamanava Double Road, Kuvempunagar, Mysuru
9845175443

ಕೊಳ್ಳೇಗಾಲದ ಜ್ಯೋತಿಷ್ಯರು
ಪಂ. ಎಸ್. ಕುಮಾರಸ್ವಾಮಿ (ಮೋಡಿ ಮಾಂತ್ರಿಕರು)
MOB: 9880583804
ಇವರು ಕೊಳ್ಳೇಗಾಲದ ಚೌಡಿ, ಭೂತರಾಯ ಅಘೋರಚರ ಶಕ್ತಿಯಿಂದ ಸ್ತ್ರೀ ಪುರುಷ ಪ್ರೇಮ, ದಾಂಪತ್ಯ ಸಮಸ್ಯೆ, ಶತ್ರು ದೋಷ, ಸಾಲ ಬಾಧೆ, ಯಾವುದೇ ಸಮಸ್ಯೆಗಳಿಗೆ ಮೋಡಿ ಮಾಂತ್ರಿಕ ಶಕ್ತಿಯಿಂದ ಚೌಡಿ ಮತ್ತು ಭೂತರಾಯನ ಪ್ರಯೋಗ ದಿಂದ ಎರಡೇ ದಿನದಲ್ಲಿ ಪರಿಹಾರ ಮಾಡಿಕೊಡುತ್ತಾರೆ.
ಖಾಯಂ ವಿಳಾಸ: ಎಟಿಎಂ ಪಕ್ಕ, ಟಿಕೆಟ್ ಬುಕ್ಕಿಂಗ್ ಕೌಂಟರ್ ಹತ್ತಿರ (ರಿಲಾಯನ್ಸ್ ಮಾಲ್) (ಕೆ.ಎಸ್.ಆರ್.ಟಿ.ಸಿ) ಸಬರ್ಬ್ ಬಸ್ ಸ್ಟ್ಯಾಂಡ್, ಮೈಸೂರು–1

ಸೈಟ್ ಮಾರಾಟಕ್ಕಿದೆ
60x40 (ನಮೂನೆ–3) West facing Bhogadi (Near SBM Layout)
8618513849

ಸೈಟ್ ಮಾರಾಟಕ್ಕಿದೆ
30x40 (ಅಕ್ಕ–ಪಕ್ಕ 2 ಸೈಟುಗಳು) KBL ಲೇಔಟ್, ಬನ್ನೂರು ರಸ್ತೆ, ದೇವೇಗೌಡ ಸರ್ಕಲ್ ಹತ್ತಿರ ಪೆಟ್ರೋಲ್ ಬಂಕ್ ಹಿಂಭಾಗ
9845236456

ಮನೆ ಮಾರಾಟಕ್ಕಿದೆ
100% ವಾಸ್ತು 30x40 E/F 2BHK ಅರವಿಂದ ನಗರ / ಕುವೆಂಪುನಗರ (Park Opp) Rs. 1.30 Crore, Nego
9844756558

ಮನೆ ಮಾರಾಟಕ್ಕಿದೆ
40x60 ವಿಜಯನಗರ 2ನೇ ಹಂತ, ವಾಟರ್ ಟ್ಯಾಂಕ್ ಹತ್ತಿರ, ಮೈಸೂರು.
7026887031, 7019935739

ಲಾಡ್ಜ್ ಹಾಗೂ ಮಳಿಗೆಗಳು ಬಾಡಿಗೆಗಿದೆ
12 ರೂಮ್ – ಬೆಡ್, ಚೇರ್ಸ್, ಟೇಬಲ್ ಮತ್ತು ಗೀಸರ್ ಸೌಕರ್ಯಗಳುಳ್ಳ ಲಾಡ್ಜ್ ಹಾಗೂ 3 ಮಳಿಗೆ (ಪ್ರತಿ ಮಳಿಗೆ: 300 sq ft) ಮತ್ತು ಹಾಲ್ (900 sq ft) ಬಾಡಿಗೆಗಿದೆ. ರಿಂಗ್ ರೋಡ್, ಆನಂದನಗರ, ಬೋಗಾದಿ, ಮೈಸೂರು. ಸಂಪರ್ಕಿಸಿ:
Mob: 9845728638

MUDA Approved Site
40x60 S/E Corner @ Rs. 60 Lac
40x60 East Face @ Rs 58 Lac
Bank Loan available
Near St Joseph's School, Yellwala, Hunsur Road, Mysore
Call 95385 83377

ಜಮೀನು ಮಾರಾಟಕ್ಕಿದೆ
ಚಲ್ಲಳ್ಳಿ (ಬಿಳಿಕೆರೆ ಹತ್ತಿರ) 30 ಗುಂಟೆ ಮತ್ತು 20 ಗುಂಟೆ, ಒಂದು ಗುಂಟೆಗೆ ರೂ. 1,25,000/–.
Mob: 9620563026

ಮಾರಾಟಕ್ಕಿದೆ
ತಿಂಗಳಿಗೆ 36 ಸಾವಿರ ರೂಪಾಯಿಗಳು ಬಾಡಿಗೆ ಬರುತ್ತಿರುವ 30x60 ಅಡಿ ಅಳತೆ ನಿವೇಶನದಲ್ಲಿ ನಿರ್ಮಿಸಿರುವ PG ಹಾಸ್ಟೆಲ್ ಮಾರಾಟಕ್ಕಿದೆ. TVS ಫ್ಯಾಕ್ಟರಿ ಹತ್ತಿರ ಸಿಂಧುವಳ್ಳಿ ಕಡಕೊಳ
9008680972

WANTED
Sales Assistant Part or Full time for Filling petrol & Diesel for a petrol Bunk. Cashier plus Helper Preference PUC & above Salary as per Qualification
9844002226

ಬೇಕಾಗಿದ್ದಾರೆ
ಕುವೆಂಪು ನಗರದ ಹೋಟೆಲ್ ಒಂದಕ್ಕೆ ಕ್ಯಾಪ್ಟನ್, ಸಪ್ಲೈಯರ್, ಹೌಸ್ ಕೀಪಿಂಗ್ (ಮಹಿಳೆಯರಿಗೂ ಆದ್ಯತೆ) ಕಟ್ಟಿಂಗ್ ಮತ್ತು ರುಬ್ಬುವವರು ಬೇಕಾಗಿದ್ದಾರೆ.
7676111390

ಬೇಕಾಗಿದ್ದಾರೆ
ರುಚಿಕಾರವಾದ ಅಡುಗೆ ಮಾಡಿದ ಮಹಿಳೆ ಹಾಗೂ ತೋಟಗಾರಿಕೆ ಕೆಲಸ ಮಾಡಲು ಗಂಡ–ಹೆಂಡತಿ ವಸತಿ ಸೌಲಭ್ಯವಿದೆ.
8861721926

ಕೇರಳ ಪ್ರವಾಸ
ಒಟ್ಟು 4 ದಿನಗಳು ಹೊರಡುವ ದಿ: 05 ಅಕ್ಟೋಬರ್ 2024
ಗೋವಾ ಪ್ರವಾಸ 04 ದಿನಗಳು ಹೊರಡುವ ದಿ: 13 ಅಕ್ಟೋಬರ್ 2024
ಎಲ್ಲಾ ಸೇರಿ ಒಬ್ಬರಿಗೆ 8000/– ರೂಪಾಯಿಗಳು
ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ:
7022271023

ತಕ್ಷಣ ಬೇಕಾಗಿದ್ದಾರೆ
ಟೆಲಿಕಾಲಿಂಗ್ ಮಾಡಲು ಹುಡುಗಿಯರು ಮತ್ತು ಮಹಿಳೆಯರು ಬೇಕಾಗಿದ್ದಾರೆ. ವಿದ್ಯಾರ್ಹತೆ: SSLC & PUC & ಆಕರ್ಷಕ ಸಂಬಳ ಮತ್ತು ಇನ್‌ಸಂಟೀವ್ ಕೂಡ ಇರುತ್ತದೆ. ಸ್ಥಳ ಕುವೆಂಪುನಗರ ಡಿಪೋ ಹತ್ತಿರ, ಮೈಸೂರು ಮತ್ತು ಮದ್ದೂರು, ಕೊಪ್ಪ ಸರ್ಕಲ್ ಹತ್ತಿರ, ಮದ್ದೂರು
8861732326, 8951949622
7406032966

SITES FOR SALE
30x40 & 40x60 KRS Road, Near to Infosys
8792207164
6361799533

28x40 S/W
ಕಾರ್ನರ್ DTCP 'A' ಖಾತೆ (ರೇರಾ ಅನುಮೋದಿತ) ಸೈಟ್ ಮಾರಾಟಕ್ಕಿದೆ. 16 ಲಕ್ಷಗಳು GSS ಲೇಔಟ್ TVS ಫ್ಯಾಕ್ಟರಿ ಹತ್ತಿರ ಮೈಸೂರು
9972557534

ಹೋಂ ನರ್ಸ್ ಬೇಕಾಗಿದ್ದಾರೆ
ವಯಸ್ಸಾದವರನ್ನು, ರೋಗಿಗಳನ್ನು ನೋಡಿಕೊಳ್ಳಲು ಅನುಭವ ಇರುವ ಇಲ್ಲದೆ ಇರುವ ಯುವಕ, ಯುವತಿಯರು ಮಹಿಳೆಯರು ಬೇಕಾಗಿದ್ದಾರೆ. ನಮ್ಮ ಸಂಸ್ಥೆಯಲ್ಲಿ ಉಳಿದುಕೊಂಡು ಕೆಲಸ ಮಾಡುವವರು ತಕ್ಷಣ ಸಂಪರ್ಕಿಸಿ: ಸಾಯಿ ಸೇವಾ ಟ್ರಸ್ಟ್ (ರಿ.)
9035113222
9739292222

WANTED
Pest Control Operator- ESI, PF & Bonus
9900632749

50x80 E/F DTCP 'A'
ಖಾತೆ ಸೊಸೈಟಿ ಸೈಟು ಮಾರಾಟಕ್ಕಿದೆ. 52 ಲಕ್ಷಗಳು (60 ಅಡಿ ರಸ್ತೆ ಇದೆ) ನಂಜುಂಡೇಶ್ವರ ನಗರ, TVS ಫ್ಯಾಕ್ಟರಿ ಹತ್ತಿರ ಮೈಸೂರು
9742198093

ಮನೆ ಬಾಡಿಗೆಗೆ ಇದೆ
30x40 ಅಳತೆ ಗ್ರೌಂಡ್ ಫ್ಲೋರ್ ಪೂರ್ವಕ್ಕೆ ಬಾಗಿಲು 2BHK ಸೋಲಾರ್ ನೀರಿನ ವ್ಯವಸ್ಥೆ ಇದೆ ವಾಡ್ರೂಬ್ ಸಹ ಇದೆ ಮನೆ ನಂ. 40 ವಿವೇಕಾನಂದ ಬ್ಲಾಕ್ ಶಿಕ್ಷಕರ ಬಡಾವಣೆ
9035085532
9901259464

ಸುವರ್ಣಾವಕಾಶ
ಮೈಸೂರಿನಲ್ಲಿ ನೂತನವಾಗಿ ಶುರುವಾಗಿರುವ ಕಂಪನಿ & ಆಫೀಸ್‌ಗಳಿಗೆ Packing, Helper, Quality, Telephone attender, Receptionist, Typing Drivers Etc ಮುಂತಾದ ಕೆಲಸಗಳಿಗೆ 7th, 10th, PUC, ITI, Diploma, Any Degree Pass/ Fail ಆದ ಯುವಕ/ಯುವತಿಯರು ಬೇಕಾಗಿದ್ದಾರೆ. ಸಂಬಳ: 14500/- 39500/- (ESI+PF OT)
6364103418, 9513829246

WANTED
looking for worker who works in cafe shop, he / she may be experienced or no experience full time or part time.
Job position Cheff (Coffee, Tea, Sandwich, Burger)
Qualifications-10th or pUC
Teaday- New kantaraj urs road, Kavitha bakery circle, TK layout, Mysore . Sanjay TC
9718515635

ಸೈಟು ಮಾರಾಟಕ್ಕಿದೆ
KRS ಹೊಸ ಹುಂಡವಾಡಿ ಹತ್ತಿರ ತುಂಬಾ ಅಭಿವೃದ್ಧಿ ಹೊಂದಿರುವ ಲೇಔಟ್‌ನಲ್ಲಿ 11B ಖಾತೆ ಹೊಂದಿರುವ 30x40 ಉತ್ತರ ದಿಕ್ಕಿನ ಸೈಟು ನಂ.25 ಮಾರಾಟಕ್ಕಿದೆ ಬೆಲೆ 12 ಲಕ್ಷ 60 ಸಾವಿರ
9900256387

ತಕ್ಷಣ ಬೇಕಾಗಿದ್ದಾರೆ
ನಂಜನಗೂಡಿನ ಚಿಕ್ಕಯ್ಯನಛತ್ರದಲ್ಲಿನ ಹೆಸರಾಂತ ಕಂಪನಿಗೆ ಸೆಕ್ಯೂರಿಟಿ ಸೂಪರ್ ವೈಸರ್ ಹಾಗೂ ಸೆಕ್ಯೂರಿಟಿ ಗಾರ್ಡ್ಸ್ ಬೇಕಾಗಿದ್ದಾರೆ. ಕೆಲಸದ ಸಮಯ 8 ಗಂಟೆ/26 ದಿನಗಳು ಸೌಲಭ್ಯಗಳು–ವಾರದ ರಜೆ, ಇಎಸ್‌ಐ, ಪಿಎಫ್ ಹಾಗೂ ಕ್ಯಾಂಟೀನ್ ಸೌಲಭ್ಯವಿರುತ್ತದೆ.
9108990972
9900066478

ಸೈಟ್ ಮಾರಾಟಕ್ಕಿದೆ
30x40 ಸುವರ್ಣನಗರ ಬೋಗಾದಿ, ಮೈಸೂರು
6363475941

ಸೈಟುಗಳು ಮಾರಾಟಕ್ಕಿದೆ
ಮೈಸೂರು ತಾಲ್ಲೂಕು ವರುಣ ಬಳಿ ಸೈಟು ಮಾರಾಟಕ್ಕಿದೆ ಎಸ್.ಬಿ.ಸುರೇಶ್ ಮೊದಲು ಬಂದವರಿಗೆ ಆದ್ಯತೆ
9901987456

ಬೇಕಾಗಿದ್ದಾರೆ
ಹೋಟೆಲ್ ಅಮರಾವತಿ 1 ಹುದ್ದೆ – ಅಕೌಂಟೆಂಟ್ (ಕ್ಯಾಷಿಯರ್) ಹಿರಿಕಾಟಿ ಗೇಟ್, ಬೇಗೂರು ಹೋಬಳಿ, ಗುಂಡ್ಲುಪೇಟೆ ತಾಲ್ಲೂಕು
9448601899

ನಿಮ್ಮ ಮನೆಯಲ್ಲಿ ನಲ್ಲಿ ಮತ್ತು ಸ್ಯಾನಿಟರಿ ಕೆಲಸ, ಟೈಲ್ಸ್ ಕೆಲಸ, ತಾರಸಿ ಸೋರಿಕೆ, ಬಣ್ಣದ ಕೆಲಸ ಎಲೆಕ್ಟ್ರಿಕಲ್ ಕೆಲಸ, ಹಾಗೂ ಸಿವಿಲ್ ಅಲ್ಟ್ರೇಷನ್ ಕೆಲಸದ ತೊಂದರೆ ಇದ್ದರೆ ಕರೆ ಮಾಡಿ
9164573142
8151035074

40x60 Rs.1200 sqft
ತಳೂರು ಸರ್ಕಲ್ ಪಕ್ಕ ಉದ್ದೇಶಿತ ಫೆರಿಫರಲ್ ರಿಂಗ್ ರಸ್ತೆಯ ಬಳಿ ಸೈಟುಗಳು ಮಾರಾಟಕ್ಕಿವೆ
8197850616

ಮೈಸೂರು ಮಿತ್ರ – ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ಮೇಘಾಲಯ ಜನರ ನೋವು ನಲಿವಿಗೆ ಸ್ಪಂದಿಸುವೆ

ರಾಜ್ಯಪಾಲ ಸಿ.ಎಚ್.ವಿಜಯಶಂಕರ್



ಮೇಘಾಲಯ ರಾಜ್ಯಪಾಲ ವಿಜಯಶಂಕರ್ ಅವರನ್ನು ಮುಖಂಡರು ಅಭಿನಂದಿಸಿದರು.

ಹುಣಸೂರು, ಆ.23– ಮೇಘಾಲಯದಲ್ಲಿ ಕೇವಲ ರಾಜಭವನಕ್ಕೆ ಸೀಮಿತವಾಗದೆ, ಅಲ್ಲಿನ ಜನರ ಸಮಸ್ಯೆಗಳನ್ನು ಆಲಿಸಿ ಅವರ ನೋವು–ನಲಿವಿಗೆ ಸ್ಪಂದಿಸುವೆ ಎಂದು ಮೇಘಾಲಯ ರಾಜ್ಯಪಾಲ ಸಿ.ಎಚ್.ವಿಜಯಶಂಕರ್ ತಿಳಿಸಿದರು.

ರಾಜ್ಯಪಾಲ ಹುದ್ದೆ ಸ್ವೀಕರಿಸಿದ ಬಳಿಕ ಮೊದಲ ಬಾರಿಗೆ ಹುಣಸೂರಿಗೆ ಆಗಮಿಸಿ ಕುರುಬ ಸಮಾಜದವರಿಂದ ನಾಗರಿಕರ ಸನ್ಮಾನ ಸ್ವೀಕರಿಸಿ ಮಾತನಾಡಿದ ಅವರು, ನನ್ನ 40 ವರ್ಷದ ರಾಯಕೀಯ ಜೀವನದಲ್ಲಿ ನಮ್ಮ ಜಿಲ್ಲೆಯ ಆದಿವಾಸಿಗಳ ಬದುಕಿನ ಬಗ್ಗೆ ತಿಳಿದಿದ್ದೇನೆ. ಅವರನ್ನು ಮುಖ್ಯವಾಹಿನಿಗೆ ತರಲು ಶ್ರಮಿಸುತ್ತೇನೆ. ಮೇಘಾಲಯ ಶೇ.85–90 ರಷ್ಟು ಆದಿವಾಸಿಗಳಿರುವ ವಿಶಿಷ್ಟ ರಾಜ್ಯ, ಅಲ್ಲಿ ನಮ್ಮಲ್ಲಿರುವ ಹಾಗೆ ಗಂಡನ ಮನೆಗೆ ಹೆಂಡತಿ ಬರುವ ಸಾಂಪ್ರದಾಯವಿಲ್ಲ. ಹೆಂಡತಿ ಮನೆಗೆ ಗಂಡ ಹೋಗುವ ಸಾಂಪ್ರದಾಯವಿದೆ. ಅಲ್ಲಿ ಮಹಿಳೆಯರು ದುಡಿಮೆಯಲ್ಲೂ ಮುಂದಿದ್ದಾರೆ. ನೈಸರ್ಗಿಕವಾಗಿ ಪರಿಶುದ್ಧ ನೀರು, ಗಾಳಿ ಇದೆ. ಇಡೀ ಜಗತ್ತಿನಲ್ಲಿ ಹೆಸರುವಾಸಿಯಾಗಿರುವ ಆಯುರ್ವೇದ ಗಿಡ ಮೂಲಿಕೆಗಳಿಗೆ ಪ್ರಸಿದ್ಧಿಯಾಗಿರುವ ರಾಜ್ಯವಾಗಿದೆ ಎಂದರು.

ಬಾಂಗ್ಲಾದೇಶಕ್ಕೆ ಹೊಂದಿಕೊಂಡಿರುವ ಮೇಘಾಲಯದ ಕೆಲವು ಗ್ರಾಮಗಳಲ್ಲಿ ವಲಸಿಗರ ಸಮಸ್ಯೆಗಳಿಗೆ ಸ್ಪಂದಿಸಬೇಕಾಗಿದೆ. ಅಲ್ಲಿಗೆ ತೆರಳಿ ಜನರ ಸಮಸ್ಯೆಗಳನ್ನು ಆಲಿಸುವೆ ಪ್ರಧಾನಿ ಮೋದಿ ಹಾಗೂ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರ ಆಶಯದಂತೆ ಮೇಘಾಲಯ ರಾಜ್ಯದ ಪ್ರತಿ ಜನರ ಪ್ರೀತಿ ವಿಶ್ವಾಸ ಗಳಿಸಿ ಕೊಟ್ಟಿರುವ ಜವಾಬ್ದಾರಿಯನ್ನು ನಿರ್ವಹಿಸುತ್ತೇನೆ ಎಂದರು. ಕುರುಬ ಸಮಾಜದ ತಾಲೂಕು ಅಧ್ಯಕ್ಷ ಡಿ.ಕೆ.ಕುನ್ನೇಗೌಡ, ಕಾರ್ಯದರ್ಶಿ ವಾಸೇಗೌಡ, ಎ.ಪಿ.ಸ್ವಾಮಿ, ಅಣ್ಣಯ್ಯನಾಯಕ, ಶಿಕ್ಷಕ ಜೆ.ಮಹದೇವ್ ಮಾತನಾಡಿದರು. ಕಾರ್ಯಕ್ರಮದಲ್ಲಿ ತಹಸೀಲ್ದಾರ್ ಮಂಜುನಾಥ್, ನಗರಸಭಾ ಆಯುಕ್ತೆ ಮಾನಸ, ಕಾಂಗ್ರೆಸ್ ನಗರ ಅಧ್ಯಕ್ಷ ರಮೇಶ್, ಬಿಜೆಪಿ ಅಧ್ಯಕ್ಷ ಕಾಂತರಾಜು, ಜೆಡಿಎಸ್ ಅಧ್ಯಕ್ಷ ದೇವರಾಜ್ ಒಡೆಯರ್, ನಗರಸಭಾ ಸದಸ್ಯರಾದ ಗಣೇಶ್ ಕುಮಾರಸ್ವಾಮಿ, ಸ್ವಾಮಿಗೌಡ, ಹರೀಶ್, ಕನಕ ನೌಕರರ ಸಂಘದ ಅಧ್ಯಕ್ಷ ಕೆಂಚೇಗೌಡ, ಜಿಲ್ಲಾ ಜಾಗೃತಿ ಮತ್ತು ಉಸ್ತುವಾರಿ ಸಮಿತಿ ನಾಮ ನಿರ್ದೇಶನ ಸದಸ್ಯ ಮಹದೇವ್, ಜಿಪಂ ಮಾಜಿ ಸದಸ್ಯ ರಮೇಶ್, ತಾಪಂ ಮಾಜಿ ಸದಸ್ಯ ಸುರೇಶ್, ಪುರಸಭೆ ಮಾಜಿ ಅಧ್ಯಕ್ಷ ಹಜರತ್ ಜಾನ್, ತಾ. ಶಿಕ್ಷಕರ ಸಂಘದ ಮಾಜಿ ಅಧ್ಯಕ್ಷ ಚಂದ್ರೇಗೌಡ, ನರಸಿಂಹ, ವೆಂಕಟರಮಣ, ಮಹದೇವ್, ರಾಮೇಗೌಡ, ಮಲ್ಲೇಶ್, ಸಣ್ಣೇಗೌಡ, ನಾಗಣ್ಣ, ಈಶ್ವರ್ ಸೇರಿದಂತೆ ಕುರುಬರ ಅಭಿವೃದ್ಧಿ ಸಮಿತಿ ನಿರ್ದೇಶಕರು, ಇತರರಿದ್ದರು.

ಆಲಗೂಡು ಪಿಎಸಿಎಸ್‌ಗೆ 1.97 ಲಕ್ಷ ನಿವ್ವಳ ಲಾಭ

ವಿಶೇಷಾಧಿಕಾರಿ ಎನ್.ಎಸ್.ಶೇಖರ್



ಆಲಗೂಡು ಪಿಎಸಿಎಸ್ ಸರ್ವ ಸದಸ್ಯರ ವಾರ್ಷಿಕ ಮಹಾಸಭೆ ನಡೆಯಿತು.

ತಿ.ನರಸೀಪುರ, ಆ.23– ಸರ್ವ ಸದಸ್ಯರ ಸಹಕಾರದಿಂದ ಸಂಘ ಉತ್ತಮವಾಗಿ ಕಾರ್ಯ ನಿರ್ವಹಿಸುತ್ತಿದ್ದು, ಪ್ರಸಕ್ತ ಸಾಲಿನಲ್ಲಿ 1,97,166 ರೂ. ನಿವ್ವಳ ಲಾಭ ಗಳಿಸಿದೆ ಎಂದು ಆಲಗೂಡು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ವಿಶೇಷಾಧಿಕಾರಿ ಎನ್.ಎಸ್.ಶೇಖರ್ ತಿಳಿಸಿದರು.

ಹೆಳವರಹುಂಡಿ ಗ್ರಾಮದಲ್ಲಿರುವ ಸಂಘದ ಕಚೇರಿ ಆವರಣದಲ್ಲಿ ಶುಕ್ರವಾರ ನಡೆದ 2023–24ನೇ ಸಾಲಿನ ಸರ್ವ ಸದಸ್ಯರ ವಾರ್ಷಿಕ ಮಹಾ ಸಭೆ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಸಂಘದಿಂದ ಸಾಲ ಪಡೆದ ರೈತರು ಸುಸ್ಥಿದಾರರಾಗದೇ ನಿಗದಿತ ಸಮಯಕ್ಕೆ ಸಾಲ ಮರುಪಾವತಿ ಮಾಡಿದಲ್ಲಿ ಸಂಘವು ಮತ್ತಷ್ಟು ಅಭಿವೃದ್ಧಿ ಹೊಂದಲು ಸಾಧ್ಯವಾಗುತ್ತದೆ. ಹಾಗಾಗಿ ಯಾರೂ ಸಾಲ ಬಾಕಿ ಉಳಿಸಿಕೊಳ್ಳದೇ ಸಂಘದ ಬೆಳವಣಿಗೆಗೆ ಸಹಕಾರ ನೀಡಿ ಎಂದು ಮನವಿ ಮಾಡಿದರು.

ಸಂಘದ ಮುಖ್ಯ ಕಾರ್ಯ ನಿರ್ವಾಹಣಾಧಿಕಾರಿ ಎಂ.ಗುರುಮಲ್ಲಪ್ಪ ಸಂಘದ ಚಟುವಟಿಕೆಗಳ ಬಗ್ಗೆ ಮಾಹಿತಿ ನೀಡಿ ಮಾತನಾಡಿ, ಸಂಘದಲ್ಲಿ 1327 ಸದಸ್ಯರಿದ್ದು, ಇವರಿಂದ 99,23,104 ರೂ. ಷೇರು ಸಂಗ್ರಹಿಸಲಾಗಿದೆ. 2023–24ನೇ ಸಾಲಿನಲ್ಲಿ ಕೆಸಿಸಿ ಸೇರಿದಂತೆ ಇನ್ನಿತರೆ ರೂಪದಲ್ಲಿ ಸಂಘದ ಸದಸ್ಯರಿಗೆ 9,28, 96000 ರೂ. ಸಾಲ ನೀಡಲಾಗಿದೆ. ಸಂಘದಲ್ಲಿ 48 ರೈತರು ಸುಸ್ಥಿದಾರರಾಗಿದ್ದು, ಇವರಿಂದ 38.58 ಲಕ್ಷ ಬಾಕಿ ಬರಬೇಕಿದ್ದು, ನಿಯಮಾನುಸಾರ ವಸೂಲಿ ಮಾಡಲು ಕ್ರಮ ವಹಿಸಲಾಗುತ್ತದೆ ಎಂದರು. ಸಂಘದ ನೂತನ ಕಟ್ಟಡಕ್ಕೆ ಜಿಲ್ಲಾ ಬ್ಯಾಂಕ್ ಮೂಲಕ ನಬಾರ್ಡ್‌ನಿಂದ ಎಂಎಸ್‌ಸಿ ಯೋಜನೆಯಡಿ 49 ಲಕ್ಷ ಸಾಲ ಪಡೆಯಲಾಗಿದ್ದು, ಸಾಲದ ಬಾಬ್ತಿನಲ್ಲಿ ಈಗಾಗಲೇ 9 ಲಕ್ಷ ರೂ. ತೋರಿಸಲಾಗಿದೆ ಎಂದರು. ಸಂಘದ ಹೆಸರಿನಲ್ಲಿ ಜಿಲ್ಲಾ ಬ್ಯಾಂಕ್‌ನಲ್ಲಿ 1,31,17,287 ರೂ. ಹೂಡಿಕೆ ಮಾಡಲಾಗಿದೆ. ಪ್ರಸಕ್ತ ಸಾಲಿನಲ್ಲಿ 1.5 ಕೋಟಿ ರೂ.ಗಳನ್ನು ನೂತನ ಷೇರುದಾರರಿಗೆ ಸಾಲ ಕೊಡುವ ಗುರಿ ಹೊಂದಲಾಗಿದೆ ಎಂದರು.

ಈ ವೇಳೆ ಸಂಘದ ಮಾಜಿ ಅಧ್ಯಕ್ಷ ಹೆಳವರಹುಂಡಿ ನಟರಾಜು, ಬಿ.ವೀರಭದ್ರಪ್ಪ, ತೊಂಟೇಶ್, ಮೂರ್ತಿ, ಗುರುಸ್ವಾಮಿ, ಮಹದೇವಸ್ವಾಮಿ, ರೈತ ಸಂಘದ ತಾಲೂಕು ಅಧ್ಯಕ್ಷ ಕುಮಾರಸ್ವಾಮಿ, ಆಲಗೂಡು ನಾಗರಾಜು, ಧರ್ಮಯ್ಯನಹುಂಡಿ ಮಲ್ಲಣ್ಣ, ಮುದ್ದಬೀರನಹುಂಡಿ ಗುರುಸ್ವಾಮಿ, ಡೈರಿ ಅಧ್ಯಕ್ಷ ಮರಿಸ್ವಾಮಿ, ಕೇತಹಳ್ಳಿ ಸಿದ್ದಶೆಟ್ಟಿ, ಪುರಸಭೆ ಮಾಜಿ ಸದಸ್ಯ ಮಹದೇವ್, ಪುಟ್ಟೇಗೌಡ, ಗುಮಾಸ್ತರಾದ ಕುಮುದ ನಾಯಕ, ಎಸ್.ರೇಖಾ ಸೇರಿದಂತೆ ಗ್ರಾಮಸ್ಥರು, ಮುಖಂಡರು ಉಪಸ್ಥಿತರಿದ್ದರು.

ಪಿ.ಪಟ್ಟಣದಲ್ಲಿ ಬ್ರಹ್ಮಶ್ರೀ ನಾರಾಯಣ ಗುರು ಜಯಂತಿ



ಕಾರ್ಯಕ್ರಮದಲ್ಲಿ ಆರ್ಯ ಈಡಿಗ ಸಮಾಜದ ಅಧ್ಯಕ್ಷ ಪಿ.ವೈ.ಮಲ್ಲೇಶ್ ಮಾತನಾಡಿದರು.

ಪಿರಿಯಾಪಟ್ಟಣ, ಆ.23– ಬ್ರಹ್ಮಶ್ರೀ ನಾರಾಯಣ ಗುರುಗಳು ಹಿಂದುಳಿದವರ, ಶೋಷಿತರ ಧ್ವನಿಯಾಗಿದ್ದು, ಅವರು ಅಸ್ಪೃಶ್ಯತೆಯ ನಿರ್ಮೂಲನೆಗಾಗಿ ಪಣತೊಟ್ಟಿದ್ದರು. ಅಂದಿನ ದಿನಗಳಲ್ಲಿ ಅವರ ಹೋರಾಟ, ತತ್ವಗಳು ನಮ್ಮೆಲ್ಲರಿಗೂ ದಾರಿದೀಪ ಎಂದು ಆರ್ಯ ಈಡಿಗ ಸಮಾಜದ ಅಧ್ಯಕ್ಷ ಪಿ.ವೈ.ಮಲ್ಲೇಶ್ ತಿಳಿಸಿದರು.

ತಾಲೂಕು ಆಡಳಿತದಿಂದ ಆಯೋಜಿಸಿದ್ದ ಬ್ರಹ್ಮಶ್ರೀ ನಾರಾಯಣ ಗುರುಗಳ 170ನೇ ಜಯಂತಿಯಲ್ಲಿ ಮಾತನಾಡಿದ ಅವರು, ನಾರಾಯಣ ಗುರುಗಳು ಒಂದೇ ಜಾತಿ, ಒಂದೇ ಮತ, ಒಂದೇ ದೇವರು ಎಂಬ ಮಹತ್ವಪೂರ್ಣ ಮಾನವೀಯ ಸಂದೇಶಗಳನ್ನು ಜಗತ್ತಿಗೆ ನೀಡಿದ ಮಹಾನ್ ಮಾನವತಾವಾದಿ ಅವರ ಆದರ್ಶ ತತ್ವ ಸಿದ್ಧಾಂತ ನಮ್ಮೆಲ್ಲರ ಗುರಿಯಾಗಬೇಕು ಎಂದರು.

ಉಪನ್ಯಾಸಕ ಕಾಂತರಾಜ್ ಮಾತನಾಡಿ, ಬ್ರಹ್ಮಶ್ರೀ ನಾರಾಯಣ ಗುರುಗಳು ಮನುಜ ಕುಲಕ್ಕೆ ನೀಡಿದ ವಿಶ್ವಮಾನವ ತತ್ವಗಳನ್ನು ನಾವು ಜೀವನದಲ್ಲಿ ಅಳವಡಿಸಿಕೊಂಡು ಜಗತ್ತಿಗೆ ಅವರ ಸಂದೇಶಗಳನ್ನು ಸಾರಬೇಕಾಗಿದೆ. ಹಿಂದುಳಿದ ಮತ್ತು ಶೋಷಿತ ವರ್ಗದವರಿಗೆ ಧಾರ್ಮಿಕ ಹಕ್ಕಿನ ಅರಿವನ್ನು ಹಾಗೂ ಸಾಮಾಜಿಕ ಬದಲಾವಣೆ ತಂದು ಕೊಟ್ಟ ಅವರು ಇಡೀ ವಿಶ್ವದ ಮಾನವ ಕುಲಕ್ಕೆ ಬೆಳಕನ್ನು ಚೆಲ್ಲಿದವರಾಗಿದ್ದಾರೆ ಎಂದರು.

ಸಮಾರಂಭದ ಅಧ್ಯಕ್ಷತೆಯನ್ನು ತಹಸೀಲ್ದಾರ್ ನಿಸರ್ಗಪ್ರಿಯ ವಹಿಸಿದ್ದರು. ಈ ವೇಳೆ ಆರ್ಯ ಈಡಿಗ ಸಮಾಜದ ಉಪಾಧ್ಯಕ್ಷ ಸಿ.ಎನ್.ನಾರಾಯಣ್, ಮಹದೇವ್, ಖಜಾಂಚಿ ಕಾಂತರಾಜ್, ಮುಖಂಡರಾದ ಗಿರೀಶ್, ಮುತ್ತೂರು ಶಶಿ, ಮಹದೇವ್, ಉಮೇಶ್, ಪಶು ವೈದ್ಯಾಧಿಕಾರಿ ಡಾ.ಸೋಮಯ್ಯ ಸೇರಿದಂತೆ ನೂರಾರು ಆರ್ಯ ಈಡಿಗ ಸಮಾಜದ ಬಂಧುಗಳು ಹಾಗೂ ಅಧಿಕಾರಿ ವರ್ಗದವರು ಹಾಜರಿದ್ದರು.

ಪ್ರತಿಭೆ ಅನಾವರಣಕ್ಕೆ ಪ್ರತಿಭಾ ಕಾರಂಜಿ ಸಹಕಾರಿ

ಶಾಸಕ ಜಿ.ಡಿ.ಹರೀಶ್‌ಗೌಡ ಅಭಿಪ್ರಾಯ



ಪ್ರತಿಭಾ ಕಾರಂಜಿ ಸಮಾರೋಪ ಸಮಾರಂಭವನ್ನು ಶಾಸಕ ಜಿ.ಡಿ.ಹರೀಶ್‌ಗೌಡ ಉದ್ಘಾಟಿಸಿದರು.

ಹನಗೋಡು, ಆ.23– ವಿದ್ಯಾರ್ಥಿಗಳ ಪ್ರತಿಭೆ ಅನಾವರಣಕ್ಕೆ ಪ್ರತಿಭಾ ಕಾರಂಜಿ ಸಹಕಾರಿ ಎಂದು ಶಾಸಕ ಜಿ.ಡಿ.ಹರೀಶ್‌ಗೌಡ ತಿಳಿಸಿದರು.

ಸಮೀಪದ ಹೈರಿಗೆ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ನಡೆದ ಪ್ರತಿಭಾ ಕಾರಂಜಿ ಸಮಾರೋಪ ಸಮಾರಂಭದಲ್ಲಿ ಮಾತನಾಡಿದ ಅವರು, ಶಿಕ್ಷಕರು ಮಕ್ಕಳ ಪ್ರತಿಭೆ ಅನಾವರಣಕ್ಕೆ ಅವಕಾಶ ಮಾಡಿಕೊಡಬೇಕು. ಅಲ್ಲದೇ ವಿದ್ಯಾರ್ಥಿಗಳ ವ್ಯಕ್ತಿತ್ವ ವಿಕಸನ ಹಾಗೂ ಸ್ಪರ್ಧಾತ್ಮಕ ಮನೋಭಾವ ಬೆಳವಣಿಗೆಗೆ ಇಂತಹ ಕಾರ್ಯಕ್ರಮಗಳು ಸಹಕಾರಿಯಾಗಿದೆ. ಇಂದು ಗ್ರಾಮೀಣ ವಿದ್ಯಾರ್ಥಿಗಳು ಉನ್ನತ ವಿದ್ಯಾಭ್ಯಾಸ ಮಾಡಿ ಅತ್ಯುನ್ನತ ಹುದ್ದೆ ಅಲಂಕರಿಸಿದ್ದಾರೆ. ಇದಕ್ಕೆ ಗುರುಗಳೇ ಕಾರಣ. ಗುರು ಮನಸ್ಸು ಮಾಡಿದರೆ ವಿದ್ಯಾರ್ಥಿಗಳ ಜೀವನ ಉತ್ತಮಗೊಳಿಸಲು ಸಾಧ್ಯ. ವಿದ್ಯಾರ್ಥಿಗಳು ಅಷ್ಟೇ ವಿನಯದಿಂದ ಮಾಡಿದ ಪಾಠವನ್ನು ಗಮನವಿಟ್ಟು ಕೇಳಿ ಶೈಕ್ಷಣಿಕವಾಗಿ ಮುಂದೆ ಬರಬೇಕು ಎಂದರು.

ಡಿವೈಎಸ್ಪಿ ರಘು ಮಾತನಾಡಿ, ವಿದ್ಯಾರ್ಥಿಗಳು ಶಿಸ್ತು ಕಲಿತರೆ ವಿದ್ಯೆ, ವಿನಯ, ಸಂಸ್ಕಾರ ತಾನಾಗಿ ಒಲಿದು ಬರುತ್ತದೆ. ಗ್ರಾಮೀಣ ವಿದ್ಯಾರ್ಥಿಗಳು ಪ್ರತಿಭಾವಂತರಾಗಿದ್ದು, ಅದನ್ನು ಗುರ್ತಿಸುವ ಪ್ರತಿಭಾ ಕಾರಂಜಿ ಕಾರ್ಯಕ್ರಮದಲ್ಲಿ ಹೆಚ್ಚಾಗಿ ಭಾಗವಹಿಸಬೇಕು ಎಂದರು.

ಬಿಇಓ ಮಹದೇವ್ ಮಾತನಾಡಿದರು. ಸಮಾರಂಭದಲ್ಲಿ ಗ್ರಾಪಂ ಅಧ್ಯಕ್ಷೆ ಸಣ್ಣಮ್ಮ, ಎಸ್‌ಡಿಎಂಸಿ ಅಧ್ಯಕ್ಷ ಮಹದೇವ್, ಇಸಿಓಗಳಾದ ಕೇಶವಮೂರ್ತಿ, ರುದ್ರಪ್ಪ ಕುಮಾರ್, ಶಿಕ್ಷಕರ ಸಹಕಾರ ಸಂಘದ ಅಧ್ಯಕ್ಷ ಮಹದೇವ್, ಶಿಕ್ಷಕರ ಸಂಘದ ಕಾರ್ಯದರ್ಶಿ ಪ್ರಸನ್ನ, ಗೋವಿಂದರಾಜು, ಮಾದೇಗೌಡ, ಶಿಕ್ಷಣ ಸಂಪನ್ಮೂಲ ವ್ಯಕ್ತಿ ಲಾವಣ್ಯ, ಮುಖ್ಯ ಶಿಕ್ಷಕ ದೇವರಾಜ್, ಶಿಕ್ಷಕರು, ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

ರೈಲ್ವೆ ಲೆವಲ್ ಕ್ರಾಸ್ ಮುಚ್ಚಲು ವಿರೋಧ

ನಂಜನಗೂಡು, ಆ.23– ನಗರದ ಚಾಮಲಾಪುರಹುಂಡಿ ಸಮೀಪದ ರೈಲ್ವೆ ಲೆವಲ್ ಕ್ರಾಸಿಂಗ್ ಅನ್ನು ಶಾಶ್ವತವಾಗಿ ಮುಚ್ಚುವ ಪ್ರಕ್ರಿಯೆ ಆರಂಭಗೊಂಡಿದ್ದು, ಲೆವಲ್ ಕ್ರಾಸಿಂಗ್ ಮುಚ್ಚಿದರೆ ಚಾಮಲಾಪುರದ ಹುಂಡಿ ಬಡಾವಣೆ ಜನರಿಗೆ ಮುಖ್ಯರಸ್ತೆ ಸಂಪರ್ಕ ತಪ್ಪಿ ಹೋಗುವುದರಿಂದ ಲೆವಲ್ ಕ್ರಾಸಿಂಗ್ ಮುಚ್ಚಬಾರದು ಎಂದು ನಗರ ಸಭೆ ಸದಸ್ಯ ಸಿದ್ದರಾಜು ಆಗ್ರಹಿಸಿದರು.

ನಗರದಲ್ಲಿ ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸುಜಾತಪುರಂ ಬಳಿ ಫ್ಲೈಓವರ್ ನಿರ್ಮಾಣವಾದ ಮೇಲೆ ರೈಲ್ವೆ ಅಧಿಕಾರಿಗಳು ಪೊಲೀಸರ ಬಂದೋಬಸ್ತ್‌ನಲ್ಲಿ ಲೆವಲ್ ಕ್ರಾಸಿಂಗ್ ಮುಚ್ಚುವ ಪ್ರಕ್ರಿಯೆ ಆರಂಭಿಸಿದ್ದಾರೆ. ಲೆವಲ್ ಕ್ರಾಸಿಂಗ್ ಅನ್ನು ಶಾಶ್ವತವಾಗಿ ಮುಚ್ಚಿದರೆ ಚಾಮಲಾಪುರಹುಂಡಿ ಬಡಾವಣೆ ಜನರು ಅಂತ್ಯಸಂಸ್ಕಾರ ನಡೆಸಲು ರಸ್ತೆಯ ಇನ್ನೊಂದು ಪಕ್ಕದಲ್ಲಿರುವ ಸ್ಮಶಾನಕ್ಕೆ ಪಾರ್ಥಿವ ಶರೀರದೊಂದಿಗೆ ಸುತ್ತಿ–ಬಳಸಿ ಫ್ಲೈಓವರ್ ಮೇಲೆ ಸಾಗಬೇಕಾಗುತ್ತದೆ. ನಮ್ಮ ಬಡಾವಣೆ ಜನರ ಗ್ರಾಮ ದೇವತೆ ಬಿಸಿಲು ಮಾರಮ್ಮನ ದೇವಾಲಯ ರಸ್ತೆಯ ಇನ್ನೊಂದು ಪಕ್ಕದಲ್ಲಿರುವುದರಿಂದ ದೇವತಾ ಕಾರ್ಯಗಳಿಗೆ ತೊಂದರೆಯಾಗುತ್ತದೆ. ಹೀಗಾಗಿ ರೈಲ್ವೆ ಅಧಿಕಾರಿಗಳು ಬಡಾವಣೆ ಜನರಿಗಾಗಿ ಲೆವಲ್ ಕ್ರಾಸಿಂಗ್‌ನಲ್ಲಿ ಕಾಲು ಹಾದಿಗಾಗಿ ಸ್ವಲ್ಪ ಸ್ಥಳ ಬಿಟ್ಟುಕೊಡಬೇಕು ಎಂದು ಮನವಿ ಮಾಡಿದರು.

ಗ್ರಾಮದ ಮುಖಂಡ ಶಂಕರಪ್ಪ ಮಾತನಾಡಿ, ಶಾಸಕರು ಹಾಗೂ ಸಂಸದರಿಗೆ ಈ ಬಗ್ಗೆ ಮನವಿ ಸಲ್ಲಿಸಿದಾಗ, ಲೆವಲ್ ಕ್ರಾಸಿಂಗ್‌ನಲ್ಲಿ ಬಡಾವಣೆಯ ಜನರಿಗೆ ಓಡಾಡಲು ದಾರಿ ಮಾಡಿಕೊಡುವುದಾಗಿ ಹೇಳಿದ್ದರು. ಆದರೆ ಈಗ ಏಕಾಏಕಿ ಲೆವಲ್ ಕ್ರಾಸಿಂಗ್ ಮುಚ್ಚುವ ಕಾಮಗಾರಿ ಆರಂಭಿಸಿದ್ದಾರೆ. ಬಡಾವಣೆಯ ಜನರಿಗೆ ಅನಾನುಕೂಲವಾಗುವುದರಿಂದ ರೈಲ್ವೆ ಅಧಿಕಾರಿಗಳ ಕ್ರಮದ ವಿರುದ್ಧ ಉಗ್ರ ಪ್ರತಿಭಟನೆ ನಡೆಸಲಾಗುವುದು ಎಂದರು. ಸುದ್ದಿಗೋಷ್ಠಿಯಲ್ಲಿ ಬಸವರಾಜು, ಮಾದೇಶ್, ಶಿವಕುಮಾರ್, ಶೇಖರ್, ದೇವರಾಜು, ಇಂದ್ರೇಶ್, ವಿನಯ್, ಚಂದ್ರು, ಕುಮಾರ್, ರಾಜೇಂದ್ರ, ಮುಕುಂದ, ಸಂಜಯ್ ಉಪಸ್ಥಿತರಿದ್ದರು.



ಸುದ್ದಿಗೋಷ್ಠಿಯಲ್ಲಿ ನಗರಸಭೆ ಸದಸ್ಯ ಸಿದ್ದರಾಜು ಮಾತನಾಡಿದರು.

ಪಠ್ಯೇತರ ಚಟುವಟಿಕೆಗೂ ಒತ್ತು ನೀಡಲು ಸಲಹೆ



ಹೋಬಳಿ ಮಟ್ಟದ ಕ್ರೀಡಾಕೂಟವನ್ನು ಷಡಕ್ಷರ ಸ್ವಾಮೀಜಿ ಉದ್ಘಾಟಿಸಿದರು.

ಸರಗೂರು, ಆ.23– ವಿದ್ಯಾರ್ಥಿಗಳು ಪಠ್ಯದ ಜೊತೆ ಪಠ್ಯೇತರ ಚಟುವಟಿಕೆಗೂ ಒತ್ತು ನೀಡಬೇಕು ಎಂದು ದಡದಹಳ್ಳಿ ಮಠದ ಷಡಕ್ಷರ ಸ್ವಾಮೀಜಿ ಸಲಹೆ ನೀಡಿದರು.

ಸರಗೂರು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ, ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಚೇರಿ ಸಹಯೋಗದಲ್ಲಿ ದಡದಹಳ್ಳಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ನಡೆದ ಹೋಬಳಿ ಮಟ್ಟದ ಕ್ರೀಡಾಕೂಟ ಉದ್ಘಾಟಿಸಿ ಮಾತನಾಡಿದ ಅವರು, ಪಠ್ಯದಷ್ಟೇ ಪಠ್ಯೇತರ ಚಟುವಟಿಕೆಯೂ ಮುಖ್ಯವಾಗಿದೆ. ಈ ನಿಟ್ಟಿನಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ವಿದ್ಯಾರ್ಥಿಗಳು ಕ್ರೀಡೆಗಳಲ್ಲಿ ಪಾಲ್ಗೊಂಡಿರುವುದು ಸಂತಸದ ವಿಚಾರ. ಕ್ರೀಡೆಯಲ್ಲಿ ಸೋಲು ಗೆಲುವು ಮುಖ್ಯವಲ್ಲ. ಸ್ಪರ್ಧಾ ಮನೋಭಾವದಿಂದ ಪಾಲ್ಗೊಳ್ಳುವುದು ಮುಖ್ಯ. ವಿದ್ಯಾರ್ಥಿಗಳ ಮಾನಸಿಕ, ದೈಹಿಕ ಬೆಳವಣಿಗೆಗೆ ಕ್ರೀಡೆ ಅವಶ್ಯಕ. ಕ್ರೀಡಾಕೂಟಗಳು ಮಕ್ಕಳ ಕ್ರೀಡಾ ಪ್ರತಿಭೆ ಅನಾವರಣಕ್ಕೆ ವೇದಿಕೆಯಾಗಿವೆ ಎಂದರು.

ಜೆಎಸ್‌ಎಸ್ ಮುಖ್ಯಶಿಕ್ಷಕ ಮಹಮದ್ ಅಂಜುಪಾಷ, ಶಿಕ್ಷಣ ಇಲಾಖೆ ಶಿಕ್ಷಣ ಸಂಯೋಜಕ ಪುರುಷೋತ್ತಮ್ ಮಾತನಾಡಿದರು. ಈ ವೇಳೆ ದಡದಹಳ್ಳಿ ಮಠದ ಷಡಕ್ಷರಿ ಸ್ವಾಮೀಜಿ ಕ್ರೀಡಾ ಧ್ವಜಾರೋಹಣ ನೆರವೇರಿಸಿದರು. ಮಕ್ಕಳು ಪಥಸಂಚಲನ ನಡೆಸಿದರು. ಚನ್ನಬಸಪ್ಪ, ಶಿವದೇವಪ್ಪ, ಡಿ.ಸುರೇಂದ್ರ, ಹಂಚೀಪುರ ಗ್ರಾಪಂ ಅಧ್ಯಕ್ಷೆ ರುಕ್ಮಿಣಿ, ಸದಸ್ಯೆ ಗೀತಾ, ಡಿ.ಎಸ್. ಜಯರಾಜ್, ಶಿವರಾಜು, ಎಸ್‌ಡಿಎಂಸಿ ಅಧ್ಯಕ್ಷೆ ಸೌಮ್ಯ ಹಾಗೂ ಸದಸ್ಯರು, ದೈಹಿಕ ಶಿಕ್ಷಕ ಎಲ್.ನಾಗೇಂದ್ರ ಮುಖ್ಯ ಶಿಕ್ಷರಾದ ಟಿ.ಎಂ. ಸುರೇಶ್, ಸಿದ್ದರಾಜು, ವಾಸುದೇವ್, ರಾಮೇಗೌಡ, ಕೆಂಪರಾಮೇಗೌಡ, ಬಂಗಾರಯ್ಯ, ಶಿವಪ್ಪ ಜ್ಯೋತಿ, ಶಾಂತಪ್ಪಹಂಪಣ್ಣವರ್, ಜಯರಾಮ್, ನಾಗರಾಜು, ಭೋಗನಂಜಯ್ಯ, ನಾಗೇಂದ್ರಪ್ಪ ಸೇರಿದಂತೆ ಇನ್ನಿತರರಿದ್ದರು.

ಹಾಲು ಉತ್ಪಾದಕರ ಸಹಕಾರ ಸಂಘ ಉದ್ಘಾಟನೆ



ಹೆಚ್.ಡಿ.ಕೋಟೆ ತಾಲೂಕಿನ ಚಾಮಹಳ್ಳಿ ಹಾಲು ಉತ್ಪಾದಕರ ಸಹಕಾರ ಸಂಘವನ್ನು ಶಾಸಕ ಅನಿಲ್ ಉದ್ಘಾಟಿಸಿದರು. ಈ ವೇಳೆ ನಿರ್ದೇಶಕ ಈರೇಗೌಡ, ಸಂಘ ಅಧ್ಯಕ್ಷ ಚಲುವೇಗೌಡ, ಮೈಮುಲ್ ವ್ಯವಸ್ಥಾಪಕ ಕರಿಬಸವರಾಜು, ಸಹಾಯಕ ವ್ಯವಸ್ಥಾಪಕ ಪ್ರಭುಶಂಕರ್, ವಿಸ್ತರಣಾಧಿಕಾರಿ ಯೋಗೀಶ್, ಗ್ರಾಪಂ ಅಧ್ಯಕ್ಷ ಕುಮಾರ್, ಉಪಾಧ್ಯಕ್ಷ ಚಿಕ್ಕನಾಯಕ, ಮುಖಂಡರಾದ ವಿಜಿಗೌಡ್ರು, ಶ್ರೀನಿವಾಸ್, ಕರಿಯಪ್ಪ, ಸಂಘದ ಎಲ್ಲಾ ಸದಸ್ಯರು, ಯಜಮಾನರು, ಗ್ರಾಮಸ್ಥರು ಹಾಜರಿದ್ದರು.

ಮೇಲೂರಲ್ಲಿ ಕ್ಲಸ್ಟರ್ ಮಟ್ಟದ ಪ್ರತಿಭಾ ಕಾರಂಜಿ



ಕ್ಲಸ್ಟರ್ ಮಟ್ಟದ ಪ್ರತಿಭಾ ಕಾರಂಜಿಯನ್ನು ಮುಖಂಡ ನಿತಿನ್ ವೆಂಕಟೇಶ್ ಉದ್ಘಾಟಿಸಿದರು.

ಬೆಟ್ಟದಪುರ, ಆ.23– ಸಮೀಪದ ಮೇಲೂರು ಗ್ರಾಮದಲ್ಲಿ ನಡೆದ ಅತ್ತಿಗೋಡು ಕ್ಲಸ್ಟರ್ ಮಟ್ಟದ ಪ್ರತಿಭಾ ಕಾರಂಜಿಯನ್ನು ಮುಖಂಡ ನಿತಿನ್ ವೆಂಕಟೇಶ್ ಉದ್ಘಾಟಿಸಿದರು.

ನಂತರ ಮಾತನಾಡಿದ ಅವರು, ಪಿರಿಯಾಪಟ್ಟಣ ತಾಲೂಕು ಕಲೆಗೆ ಹೆಸರುವಾಸಿ. ಈ ತಾಲೂಕಿನಲ್ಲಿ ಹುಟ್ಟಿದ ಪುಟ್ಟಣ ಕಣಗಾಲ್, ಮಸೂರಿ ಕೃಷ್ಣಮೂರ್ತಿ, ಕಣಗಾಲ್ ಪ್ರಭಾಕರ್ ಮೂರ್ತಿ ಕಲೆಗೆ ತಮ್ಮದೇ ಆದ ಕೊಡುಗೆ ನೀಡಿದ್ದಾರೆ. ಹಲವು ದೂರದರ್ಶನಗಳು ಮಕ್ಕಳ ಕಲೆ ಪ್ರೋತ್ಸಾಹಿಸಲು ಹಲವು ಸ್ಪರ್ಧೆಗಳನ್ನು ಏರ್ಪಡಿಸಿ ರಾಜ್ಯ, ರಾಷ್ಟ್ರ ಮಟ್ಟದಲ್ಲಿ ಹೆಸರು ಮಾಡುವಂತೆ ಮಾಡಿವೆ. ಅತ್ತಿಗೋಡು ಶಾಲೆ ವಿದ್ಯಾರ್ಥಿಜೀ ಕನ್ನಡದಲ್ಲಿ ಹಾಡುಗಾರಿಕೆ ಸ್ಪರ್ಧೆಯಲ್ಲಿ ಅತ್ಯುತ್ತಮ ಸ್ಥಾನ ಪಡೆದು ತಾಲೂಕಿಗೆ ಕೀರ್ತಿ ತಂದಿದ್ದಾರೆ. ಆದ್ದರಿಂದ ಪೋಷಕರು ಕಲೆಗೆ ಹೆಚ್ಚಿನ ಪ್ರೋತ್ಸಾಹ ನೀಡಬೇಕು ಎಂದರು.

ಅಕ್ಷರ ದಾಸೋಹ ಉಪ ನಿರ್ದೇಶಕ ಪ್ರಶಾಂತ್ ಮಾತನಾಡಿ, ಕೇವಲ ಪುಸ್ತಕ, ಪಠ್ಯದಿಂದ ಮಕ್ಕಳ ಅಭಿವೃದ್ಧಿ ಸಾಧ್ಯವಿಲ್ಲ. ಜೊತೆಗೆ ಕಲೆ, ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲೂ ಪಾಲ್ಗೊಂಡು ಯಶಸ್ಸು ಸಾಧಿಸಬೇಕು ಎಂದರು.

ಕಾರ್ಯಕ್ರಮದಲ್ಲಿ ಗ್ರಾಪಂ ಅಧ್ಯಕ್ಷೆ ಶೋಭಾ, ಪುರುಷೋತ್ತಮ್, ನಿಜಲಿಂಗಪ್ಪ, ಎಸ್‌ಡಿಎಂಸಿ ಅಧ್ಯಕ್ಷ ಚಂದ್ರೇಗೌಡ, ಮುಖಂಡರಾದ ಜಯಚಂದ್ರ, ಮಹೇಶ್, ಬಿಸಿಓ ಸತೀಶ್ ಕುಮಾರ್, ಗಣೇಶ್, ಬಿಆರ್‌ಸಿ ಶ್ರೀನಿಧಿ, ಗುರು, ರಾಘವೇಂದ್ರ, ಚೇತನ್, ಪಾರ್ಥಸಾರಥಿ, ರೇವಣ್ಣ, ಮುಖ್ಯಶಿಕ್ಷಕ ರಮೇಶ್, ಚನ್ನಕೇಶವ, ಜೈಶಂಕರ್, ಪೂರ್ಣಿಮಾ, ವಿದ್ಯಾರ್ಥಿಗಳು, ಶಿಕ್ಷಕರು ಹಾಗೂ ಪೋಷಕರು ಹಾಜರಿದ್ದರು.

ಶ್ರೀತ್ರಿಪುರ ಸುಂದರಿ ಅಮ್ಮನವರ ದರ್ಶನ ಪಡೆದ ಮೇಘಾಲಯ ರಾಜ್ಯಪಾಲ ಸಿ.ಹೆಚ್.ವಿಜಯಶಂಕರ್



ಮೂಗೂರಿಗೆ ಆಗಮಿಸಿದ ಮೇಘಾಲಯ ರಾಜ್ಯಪಾಲ ಸಿ.ಹೆಚ್.ವಿಜಯಶಂಕರ್ ಅವರನ್ನು ಬಿಜೆಪಿ ಮುಖಂಡರು ಅಭಿನಂದಿಸಿದರು.

ತಿ.ನರಸೀಪುರ, ಆ.23– ತಾಲೂಕಿನ ಮೂಗೂರು ಗ್ರಾಮದ ಪುರಾಣ ಪ್ರಸಿದ್ಧ ಶ್ರೀತ್ರಿಪುರ ಸುಂದರಿ ಅಮ್ಮನವರ ದೇವಾಲಯಕ್ಕೆ ಶುಕ್ರವಾರ ಮೇಘಾಲಯ ರಾಜ್ಯಪಾಲ ಸಿ.ಹೆಚ್.ವಿಜಯಶಂಕರ್ ಅವರು ಕುಟುಂಬ ಸಮೇತರಾಗಿ ಆಗಮಿಸಿ, ದೇವರ ದರ್ಶನ ಪಡೆದು ವಿಶೇಷ ಪೂಜೆ ಸಲ್ಲಿಸಿದರು.

ಸುಮಾರು ಅರ್ಧ ಗಂಟೆಗೂ ಹೆಚ್ಚು ಕಾಲ ಶ್ರೀತ್ರಿಪುರ ಸುಂದರಿ ಅಮ್ಮನವರ ಸನ್ನಿಧಿಯಲ್ಲಿ ವಿಶೇಷ ಪೂಜೆ ಸಲ್ಲಿಸಿದ ವಿಜಯ ಶಂಕರ್ ಅವರು ನಾಡಿಗೆ ಒಳಿತಾಗಲಿ ಎಂದು ದೇವರಲ್ಲಿ ಪ್ರಾರ್ಥಿಸಿದರು. ಪೂಜೆ ಬಳಿಕ ದೇವಾಲಯದಿಂದ ನಿರ್ಗಮಿಸುತ್ತಿದ್ದ ವೇಳೆ ವಿಜಯಶಂಕರ್ ಅವರನ್ನು ಬಿಜೆಪಿ ಮುಖಂಡರು, ಕಾರ್ಯಕರ್ತರು ಸನ್ಮಾನಿಸಿದರು. ನಂತರ ಪಕ್ಷದ ಹಿರಿಯ ಕಾರ್ಯಕರ್ತರ ನಿವಾಸಕ್ಕೆ ತೆರಳಿ ಕುಶಲೋಪರಿ ವಿಚಾರಿಸಿದರು.

ಇದಕ್ಕೂ ಮುನ್ನಾ ಕೇಂದ್ರ ಸರ್ಕಾರ ಮೇಘಾಲಯ ನೂತನ ರಾಜ್ಯಪಾಲರಾಗಿ ನಿಯೋಜಿಸಿದ ಹಿನ್ನೆಲೆಯಲ್ಲಿ ತಮ್ಮ ಮನೆ ದೇವರಾದ ಶ್ರೀತ್ರಿಪುರ ಸುಂದರಿ ಅಮ್ಮನವರ ದರ್ಶನಕ್ಕೆ ಮೂಗೂರಿಗೆ ಆಗಮಿಸಿದ ವೇಳೆ ವಿಜಯ ಶಂಕರ್ ಅವರಿಗೆ ತಾಲೂಕು ಆಡಳಿತ ಹಾಗೂ ದೇವಾಲಯದ ಧರ್ಮದರ್ಶಿ ಮಂಡಳಿ ವತಿಯಿಂದ ಪೂರ್ಣಕುಂಭ ಸ್ವಾಗತ ನೀಡಿ ಬರಮಾಡಿಕೊಳ್ಳಲಾಯಿತು.

ಈ ವೇಳೆ ದೇವಾಲಯದ ಪಾರುಪತ್ತೆಗಾರ್ ಎಂ.ಬಿ.ಸಾಗರ್, ಬಿಜೆಪಿ ಕ್ಷೇತ್ರಾಧ್ಯಕ್ಷ ಶಿವಕುಮಾರ್, ಜಿಪಂ ಮಾಜಿ ಸದಸ್ಯ ಎಂ.ಆರ್.ಸೋಮಣ್ಣ, ಬಿಜೆಪಿ ಮುಖಂಡ ಡಾ.ರೇವಣ್ಣ, ಶರಣ ಸಾಹಿತ್ಯ ಪರಿಷತ್ ಜಿಲ್ಲಾಧ್ಯಕ್ಷ ಸಿದ್ದಪ್ಪ, ಅಖಿಲ ಭಾರತ ವೀರಶೈವ ಮಹಾಸಭಾ ತಾಲೂಕು ಅಧ್ಯಕ್ಷ ಎಸ್‌ಎಂಆರ್ ಪ್ರಕಾಶ್, ಮಹದೇವಯ್ಯ, ತೋಟದಪ್ಪ ಬಸವರಾಜು, ಪುರಸಭಾ ಸದಸ್ಯ ಎಸ್.ಕೆ. ಕಿರಣ್, ಮಾಜಿ ಸದಸ್ಯ ಎನ್.ಲೋಕೇಶ್, ವಕೀಲ ಎಂ.ದಾಸಯ್ಯ, ಎಸ್ಸಿ ಮೋರ್ಚಾ ಜಿಲ್ಲಾಧ್ಯಕ್ಷ ಅನಿಲ್ ಕುಮಾರ್, ಮೂಗೂರು ಶಕ್ತಿ ಕೇಂದ್ರದ ಅಧ್ಯಕ್ಷ ಸುರೇಶ್, ಗ್ರಾಮಾಂತರ ಯುವ ಮೋರ್ಚಾ ಜಿಲ್ಲಾಧ್ಯಕ್ಷ ಸಾಮ್ರಾಟ್ ಸುಂದರೇಶನ್, ಗೌಡ್ರು ಪ್ರಕಾಶ್, ಸೋಮಶೇಖರ್, ಕಾಂಪೋಸ್ ನಿಗಮದ ಮಾಜಿ ಅಧ್ಯಕ್ಷ ಎಸ್.ಮಹದೇವಯ್ಯ, ಕ್ಷೇತ್ರ ಮಾಜಿ ಅಧ್ಯಕ್ಷ ಪರಶಿವಮೂರ್ತಿ, ಎಂ.ಕೆ.ಸಿದ್ದರಾಜು, ಬಾಬೂಜಿ ಸಂಘದ ಮಾಜಿ ಅಧ್ಯಕ್ಷ ಎಂ.ಸಿದ್ದರಾಜು, ತಾಪಂ ಮಾಜಿ ಸದಸ್ಯರಾದ ಕೆ.ಜಿ.ವೀರಣ್ಣ, ಚಂದ್ರಶೇಖರ್, ಗ್ರಾಪಂ ಸದಸ್ಯ ಶಿವು, ಎಂ.ಎಂ.ಜಯಣ್ಣ, ಛಾಯಾ ಕುಮಾರ್, ಅರವಿಂದ್, ಸಿದ್ದರಾಜು, ಮಾದಪ್ಪ, ನರೇಂದ್ರ, ಬಾಲು,ಪಿ.ಕುಮಾರ್, ಮಂಜು, ಶಿವು, ಹರೀಶ್‌ಗೌಡ, ಟೌನ್ ಅಧ್ಯಕ್ಷ ಕೆ.ನಂಜುಂಡಸ್ವಾಮಿ, ಅರ್ಚಕ ಹರೀಶ್, ಕುಮಾರ್, ನಾಗರಾಜ ಮೂರ್ತಿ, ಜೀವನ್, ರಮೇಶ್, ಬಸವರಾಜು, ತಹಸೀಲ್ದಾರ್ ಟಿ.ಜಿ.ಸುರೇಶಾಚಾರ್, ಚೆಸ್ಕಾಂ ಸಹಾಯಕ ಕಾರ್ಯಪಾಲಕ ಅಭಿಯಂತರ ಕೆ.ವಿ.ವೀರೇಶ್, ಲೋಕೋಪಯೋಗಿ ಇಲಾಖೆಯ ಎಇಇ ಸತೀಶ್ ಚಂದ್ರ, ಜೆ.ಇ.ಕಾವ್ಯ, ಇನ್ಸ್‌ಪೆಕ್ಟರ್‌ಗಳಾದ ಧನಂಜಯ, ಮನೋಜ್ ಕುಮಾರ್, ಆನಂದ್ ಕುಮಾರ್ ಮತ್ತಿತರರಿದ್ದರು.

ದಲಿತರ ಅನುದಾನ ದುರ್ಬಳಕೆ, ವಾಲ್ಮೀಕಿ ನಿಗಮದ ಅವ್ಯವಹಾರ ವಿರೋಧಿಸಿ

ರಾಜ್ಯ ಸರ್ಕಾರದ ವಿರುದ್ಧ ದಸಂಸ ಪ್ರತಿಭಟನೆ



ರಾಜ್ಯ ಸರ್ಕಾರದ ವಿರುದ್ಧ ದಸಂಸ ವತಿಯಿಂದ ಪ್ರತಿಭಟನೆ ನಡೆಸಲಾಯಿತು.

ಹುಣಸೂರು, ಆ.23– ದಲಿತರ ಅಭಿವೃದ್ಧಿಗೆ ಮೀಸಲಿಟ್ಟ ಸಾವಿರಾರು ಕೋಟಿ ಅನುದಾನ ದುರ್ಬಳಕೆ ಮತ್ತು ಮಹರ್ಷಿ ವಾಲ್ಮೀಕಿ ಅಭಿವೃದ್ಧಿ ನಿಗಮದಲ್ಲಿ ನಡೆದಿರುವ 187 ಕೋಟಿ ರೂ. ಅವ್ಯವಹಾರ ವಿರೋಧಿಸಿ ನಗರದಲ್ಲಿ ಶುಕ್ರವಾರ ದಸಂಸ ವತಿಯಿಂದ ಪ್ರತಿಭಟನೆ ನಡೆಸಲಾಯಿತು.

ನಗರದ ಉಪವಿಭಾಗಾಧಿಕಾರಿ ಕಚೇರಿ ಎದುರು ಜಮಾಯಿಸಿದ ಪ್ರತಿಭಟನಾಕಾರರು, ರಾಜ್ಯ ಸರ್ಕಾರದ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ದಸಂಸ ಮುಖಂಡ ನಿಂಗರಾಜ ಮಲ್ಲಾಡಿ ಮಾತನಾಡಿ, ರಾಜ್ಯದಲ್ಲಿ ಅಧಿಕಾರಕ್ಕೆ ಬಂದ ಸಿದ್ದರಾಮಯ್ಯ ಸರ್ಕಾರ ದಲಿತರ ಅಭಿವೃದ್ಧಿಗೆ ಮೀಸಲಿಟ್ಟಿದ್ದ 25 ಸಾವಿರ ಕೋಟಿ ಹಣವನ್ನು ಗ್ಯಾರಂಟಿಗಳಿಗೆ ಮತ್ತು ಅನ್ಯ ಉದ್ದೇಶಗಳಿಗೆ ಬಳಕೆ ಮಾಡಿರುವುದು ಸರಿಯಲ್ಲ. ಪ್ರಸ್ತುತ ಅನೇಕ ಸಮಸ್ಯೆಗಳಿಂದ ದಲಿತರು ಬಳಲುತ್ತಿದ್ದಾರೆ. ಆದರೂ ಅನುದಾನವನ್ನು ಅನ್ಯ ಉದ್ದೇಶಕ್ಕೆ ಬಳಸಿಕೊಂಡು ಸರ್ಕಾರ ಅನ್ಯಾಯ ಮಾಡಿದೆ ಎಂದು ಆರೋಪಿಸಿದರು.

ಮಹರ್ಷಿ ವಾಲ್ಮೀಕಿ ಅಭಿವೃದ್ಧಿ ನಿಗಮದಲ್ಲಿ 187 ಕೋಟಿ ರೂ. ಲೂಟಿ ಮಾಡಿರುವುದರ ಹಿಂದೆ ಬಲವಾದ ರಾಜಕೀಯ ವ್ಯಕ್ತಿಗಳ ಕೈವಾಡವಿದೆ. ಈ ಹಗರಣದಲ್ಲಿ ಸಿಎಂ ಸಿದ್ದರಾಮಯ್ಯ ಭಾಗಿಯಾಗಿಲ್ಲ ಎಂದು ಹೇಳುವುದು ಅರ್ಥಹೀನ. ಸಿದ್ದರಾಮಯ ನಿರ್ದೇಶನದ ಮೇರೆಗೆ ಈ ಹಗರಣ ನಡೆದಿರುವುದು ಎಂಬುದು ಸ್ಪಷ್ಟವಾಗಿದೆ.

ಪ.ಪಂಗಡದಲ್ಲಿ ಜೇನುಕುರುಬ, ಎರವ, ಬೆಟ್ಟಕುರುಬ, ಸೋಲಿಗ, ಡೋಂಗ್ರಿ ಗೆರಾಸಿಯಾ ಮುಂತಾದ ಧ್ವನಿ ಇಲ್ಲದ, ದಿಕ್ಕಿಲ್ಲದ ಸಮುದಾಯಗಳ ಸ್ಥಿತಿ ಹೇಳತೀರದಾಗಿದೆ. ಇಂತಹ ಪಾಪದ ಜನರ ಅಭಿವೃದ್ಧಿಗೆ ಮೀಸಲಿಟ್ಟ 187 ಕೋಟಿ ಹಣವನ್ನು ಲೂಟಿ ಮಾಡಿರುವುದು ಆತಂಕ ಮೂಡಿಸಿದೆ. ಹೀಗಾಗಿ ಪ್ರಕರಣದಲ್ಲಿ ಭಾಗಿಯಾಗಿರುವ ರಾಜಕಾರಣಿಗಳು, ಅಧಿಕಾರಿಗಳಿಗೆ ತಕ್ಕ ಶಿಕ್ಷೆಯಾಗಬೇಕು ಎಂದು ಒತ್ತಾಯಿಸಿದರು.

ಮುಖಂಡರಾದ ದೇವೇಂದ್ರ, ಕೆಂಪರಾಜು, ಗಜೇಂದ್ರ ಮಾತನಾಡಿದರು. ಇದೇ ವೇಳೆ ಎಸಿ ವಿಜಯ್ ಕುಮಾರ್ ಮೂಲಕ ರಾಜ್ಯಪಾಲರು, ಸಿಎಂಗೆ ಮನವಿ ಸಲ್ಲಿಸಲಾಯಿತು. ಪ್ರತಿಭಟನೆಯಲ್ಲಿ ಮುಖಂಡರಾದ ಬಸವಲಿಂಗಯ್ಯ, ಚಾಮರಾಯ, ಜಗದೀಶ್, ವೇಣು ಗೋಪಾಲ್, ನಾಗರಾಜು, ದಲಿತ ಮಹಿಳಾ ಒಕ್ಕೂಟದ ಲಕ್ಷ್ಮಿಬಾಯಿ, ಕಮಲಾ ಬಾಯಿ, ರಾಣಾಬಾಯಿ, ಗೋವಿಂದ, ಸುಶೀಲಾಬಾಯಿ, ವಸಂತ, ಕಣ್ಣಮ್ಮ, ಗೋಪಾಲ, ಗೋವಿಂದ, ಲಕ್ಷ್ಮಮ್ಮ, ಕಾಳಮ್ಮ, ನೇತ್ರಾ ಇತರರಿದ್ದರು.

ತಿಮ್ಮಾಜಮ್ಮ ನಿಧನ



ಹುಣಸೂರು, ಆ.23– ನಗರದ ಶನೇಶ್ವರಸ್ವಾಮಿ ದೇವಾಲಯದ ನಿರ್ಮಾತೃ ಪೊಲೀಸ್ ಬಸಪ್ಪ ಅವರ ತಾಯಿ ತಿಮ್ಮಾಜಮ್ಮ(94) ಗುರುವಾರ ರಾತ್ರಿ ನಿಧನರಾದರು. ಮೃತರು ಐವರು ಪುತ್ರಿಯರು, ಓರ್ವ ಪುತ್ರ ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಮೃತರ ಸ್ವಗ್ರಾಮ ಅರಕಲಗೂಡು ತಾಲೂಕಿನ ಬೈಚನಹಳ್ಳಿಯಲ್ಲಿ ಶುಕ್ರವಾರ ಮಧ್ಯಾಹ್ನ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಕೆ.ಹನುಮಂತಪ್ಪ



ಹುಣಸೂರು, ಆ.23– ನಗರದ ಚಿಕ್ಕಹುಣಸೂರಿನ ನಿವಾಸಿ ಕೆ.ಹನುಮಂತಪ್ಪ(71) ಗುರುವಾರ ಮಧ್ಯಾಹ್ನ ನಿಧನರಾದರು.

ಮೃತರು ಪತ್ನಿ, ಓರ್ವ ಪುತ್ರ, ಇಬ್ಬರು ಪುತ್ರಿಯರು ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಶುಕ್ರವಾರ ಮಧ್ಯಾಹ್ನ ತಾಲೂಕಿನ ಹಂಚ್ಯಾ ಗ್ರಾಮದ ಮೃತರ ಜಮೀನಿನಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೈಸೂರು ಮಿತ್ರ

ಅರಣ್ಯ ಭವನದಿಂದ ಅರಮನೆವರೆಗೂ ಮೆರವಣಿಗೆಯಲ್ಲಿ ಸಾಗಿದ ಗಜಪಡೆ

- ಅರಣ್ಯ ಇಲಾಖೆ ವತಿಯಿಂದ ಸಾಂಪ್ರದಾಯಿಕ ಪೂಜೆ ಸಲ್ಲಿಕೆ
- ದಾರಿಯುದ್ದಕ್ಕೂ ದಸರಾ ಗಜಪಡೆ ಕಂಡು ಸಂಭ್ರಮಿಸಿದ ಜನ



ಮೈಸೂರಿನ ಅರಣ್ಯ ಭವನದಲ್ಲಿ ದಸರಾ ಗಜಪಡೆಗೆ ಅರಣ್ಯ ಇಲಾಖೆ ವತಿಯಿಂದ ಹಿರಿಯ ಅಧಿಕಾರಿಗಳು ಸಾಂಪ್ರದಾಯಿಕ ಪೂಜೆ ನೆರವೇರಿಸಿದರು.

ಮೈಸೂರು,ಆ.23(ಎಂಟಿವೈ)– ದಸರಾ ಮಹೋತ್ಸವದಲ್ಲಿ ಪಾಲ್ಗೊಳ್ಳಲು ವಿವಿಧ ಕ್ಯಾಂಪ್‌ಗಳಿಂದ ಆಗಮಿಸಿ ಮೈಸೂರಿನ ಅಶೋಕಪುರಂನಲ್ಲಿರುವ ಅರಣ್ಯ ಭವನದಲ್ಲಿ ವಿಶ್ರಾಂತಿ ಪಡೆಯುತ್ತಿದ್ದ ಕ್ಯಾಪ್ಟನ್ ಅಭಿಮನ್ಯು ನೇತೃತ್ವದ ಗಜಪಡೆ ಮೊದಲ ತಂಡದ 9 ಆನೆಗಳಿಗೆ ಅರಣ್ಯ ಇಲಾಖೆ ವತಿಯಿಂದ ಸಾಂಪ್ರದಾಯಿಕ ಪೂಜೆ ನೆರವೇರಿಸಿದ ಬಳಿಕ ಅರಮನೆಗೆ ಆನೆಗಳನ್ನು ಮೆರವಣಿಗೆಯಲ್ಲಿ ಕರೆದೊಯ್ಯಲಾಯಿತು.

ಅರಣ್ಯ ಭವನದ ಆವರಣದಲ್ಲಿ ಶುಕ್ರವಾರ ಬೆಳಗ್ಗೆ ಮೈಸೂರು ವೃತ್ತದ ಸಿಎಫ್ ಡಾ.ಮಾಲತಿ ಪ್ರಿಯಾ, ಹುಲಿ ಯೋಜನೆಯ ನಿರ್ದೇಶಕ ಡಾ.ಪಿ.ರಮೇಶ್‌ಕುಮಾರ್, ವನ್ಯಜೀವಿ ವಿಭಾಗದ ಡಿಸಿಎಫ್ ಡಾ.ಐ.ಬಿ. ಪ್ರಭುಗೌಡ, ಡಿಸಿಎಫ್ ಡಾ.ಕೆ.ಎನ್. ಬಸವರಾಜ್, ಎಸಿಎಫ್‌ಗಳಾದ ಅಭಿಷೇಕ್, ಲಕ್ಷ್ಮೀಕಾಂತ್, ಆರ್‌ಎಫ್‌ಓ ಸಂತೋಷ್ ಹೂಗಾರ್ ಸೇರಿದಂತೆ ಇಲಾಖೆಯ ವಿವಿಧ ವಿಭಾಗಗಳ ಹಿರಿಯ ಅಧಿಕಾರಿಗಳು ಅರಣ್ಯ ಇಲಾಖೆ ವತಿಯಿಂದ ಸಂಪ್ರದಾಯದಂತೆ ಪೂಜೆ ಸಲ್ಲಿಸಿದರು. ಅಲ್ಲದೆ, ಅರಣ್ಯ ಭವನದ ಸಿಬ್ಬಂದಿ, ಮೈಸೂರು ವಿಭಾಗದಲ್ಲಿ ಸೇವೆ ಸಲ್ಲಿಸುವ ಸಿಬ್ಬಂದಿ, ಇಲಾಖೆ ವಸತಿ ಗೃಹದಲ್ಲಿ ವಾಸವಿರುವ ಇಲಾಖಾ ಸಿಬ್ಬಂದಿಗಳ ಕುಟುಂಬದ ಸದಸ್ಯರೊಂದಿಗೆ ಗಜಪೂಜೆ ನೆರವೇರಿಸಿ ಪುಷ್ಪನಮನ ಸಲ್ಲಿಸಿದರು. ಇದೇ ವೇಳೆ ಎಲ್ಲಾ ಆನೆಗಳಿಗೂ ಪಂಚಫಲ, ಕಬ್ಬು, ಬೆಲ್ಲ ಸೇರಿದಂತೆ ಇನ್ನಿತರ ತಿನಿಸನ್ನು ನೀಡಲಾಯಿತು.

ಅಲಂಕಾರಗೊಂಡ ಆನೆಗಳು: ಅರಮನೆಗೆ ತೆರಳುವ ಮುನ್ನ ಎಲ್ಲಾ ಆನೆ ಗಳನ್ನು ಶೃಂಗರಿಸಲಾಗಿತ್ತು. ಜಂಬೂ ಸವಾರಿ ಮೆರವಣಿಗೆಯಲ್ಲಿ ಕರೆದೊಯ್ಯವಾಗ ಆನೆಗಳ ಮೈ ಮೇಲೆ ಬರೆಯುವ ಚಿತ್ರಗಳಂತೆ ಇಂದು ಆನೆಗಳ ಮೈಮೇಲೆ ಚಿತ್ರ ಬರೆದು ಅಲಂಕಾರ ಮಾಡಲಾಗಿತ್ತು. ಅಲ್ಲದೆ, ಆನೆಗಳಿಗೆ ಗಾದಿ, ನಮ್ದಾ ಕಟ್ಟಿ ದಂತ, ಕೊರಳಿಗೆ ಅಲಂಕಾರಿಕ ಆಭರಣ ತೊಡಿಸಿ ಸಿಂಗರಿಸಲಾಗಿತ್ತು.

ರಾಜಗಾಂಭಿರ್ಯದ ಹೆಜ್ಜೆ: ಅರಣ್ಯ ಭವನದಲ್ಲಿ ಪೂಜೆ ನೇರಿಸಿದ ಬಳಿಕ ಮಂಗಳವಾದ್ಯದ ಹಿಮ್ಮೇಳದೊಂದಿಗೆ ಸಾಲಾಗಿ ಮೆರವಣಿಗೆ ಮೂಲಕ ರಸ್ತೆಗಿಳಿದ ಅಭಿಮನ್ಯು ನೇತೃತ್ವದ ಗಜಪಡೆ ರಾಜ ಗಾಂಭಿರ್ಯದಿಂದ ಹೆಜ್ಜೆ ಹಾಕಿದವು. ಅಶೋಕಪುರಂ, ಬಲ್ಲಾಳ್ ವೃತ್ತ, ಆರ್‌ಟಿಓ ಕಚೇರಿ ವೃತ್ತ, ಜೆಎಲ್‌ಬಿ ರಸ್ತೆ, ರಾಮಸ್ವಾಮಿ ವೃತ್ತ, ಚಾಮರಾಜ ಜೋಡಿ ರಸ್ತೆ, ಗನ್‌ಹೌಸ್ ವೃತ್ತ, ಬಿ.ಎನ್.ರಸ್ತೆಯ ಮೂಲಕ ಜಯಮಾರ್ತಾಂಡ ದ್ವಾರದವರೆಗೂ ಗಜಪಡೆಯನ್ನು ಮೆರವಣಿಗೆಯಲ್ಲಿ ಕರೆ ತರಲಾಯಿತು. ಮುಂಜಾಗ್ರತಾ ಕ್ರಮವಾಗಿ ಗಜಪಡೆ ಸಾಗುವ ಮಾರ್ಗದಲ್ಲಿ ಪೊಲೀಸ್ ಬಂದೋಬಸ್ತ್ ಏರ್ಪಡಿಸಲಾಗಿತ್ತು ಆನೆಗಳ ಬಳಿ ಜನರು ನುಸುಳುವುದನ್ನು ತಡೆಗಟ್ಟುವ ನಿಟ್ಟಿನಲ್ಲಿ ಕಮಾಂಡೋ ಪಡೆಯಿಂದ ಭದ್ರತೆ ಒದಗಿಸಲಾಗಿತ್ತು.

ಕಣ್ತುಂಬಿಕೊಂಡ ಜನ: ಆನೆ ಸಾಗುವ ಮಾರ್ಗದುದ್ದಕ್ಕೂ ಹಬ್ಬದ ವಾತಾವರಣ ನಿರ್ಮಾಣವಾಗಿತ್ತು. ಮಂಗಳ ವಾದ್ಯ ಮೊಳಗುತ್ತಿದ್ದುದ್ದರಿಂದ ಆನೆಗಳ ಮೆರವಣಿಗೆಗೆ ಮೆರಗು ಉಂಟಾಗಿತ್ತು. ದಾರಿಯುದ್ದಕ್ಕೂ ಎರಡೂ ಬದಿಯಲ್ಲಿ ನೂರಾರು ಮಂದಿ ನಿಂತುಕೊಂಡು ಆನೆಗಳನ್ನು ಕಣ್ತುಂಬಿಕೊಂಡರು. ಅಲ್ಲದೆ, ತಮ್ಮ ಮೊಬೈಲ್‌ನಲ್ಲಿ ಆನೆಗಳ ಚಿತ್ರೀಕರಣ ಮಾಡಿಕೊಂಡು ಸಂಭ್ರಮಿಸಿದರು.



ಚಾಮರಾಜ ಜೋಡಿ ರಸ್ತೆಯಲ್ಲಿ ಮೆರವಣಿಗೆಯಲ್ಲಿ ಸಾಗಿದ ಗಜಪಡೆ

ಸೆ.5ರಂದು ಸಾಮೂಹಿಕ ವಿವಾಹ

ಮೈಸೂರು,ಆ.23–ಜೆಎಸ್‌ಎಸ್ ಮಠದ ವತಿಯಿಂದ ಸೆ.5ರಂದು ಮಾಸಿಕ ಸಾಮೂಹಿಕ ವಿವಾಹ ಕಾರ್ಯಕ್ರಮ ಏರ್ಪಡಿಸಲಾಗಿದ್ದು, ಎಂಟು ದಿನಗಳ ಮುಂಚಿತವಾಗಿ ಆಡಳಿತಾಧಿಕಾರಿಗಳು, ಜೆಎಸ್‌ಎಸ್ ಶಿಕ್ಷಣ ಸಂಸ್ಥೆಗಳು, ಸುತ್ತೂರು ಇವರನ್ನು ನೇರವಾಗಿ ಸಂಪರ್ಕಿಸಿ ಅಥವಾ ದೂರವಾಣಿ: 08221–232217, 232033, 9741342222, ಸಂಪರ್ಕಿಸಿ ಮಾಹಿತಿ ಪಡೆದು ನೋಂದಣಿ ಮಾಡಿಸಿಕೊಳ್ಳಬಹುದು. ವಿವಾಹದಲ್ಲಿ ಭಾಗವಹಿಸುವ ವರನಿಗೆ 21 ವರ್ಷ, ವಧುವಿಗೆ 18 ವರ್ಷ ಪೂರ್ಣಗೊಂಡಿರಬೇಕು. ಅರ್ಜಿ ನಮೂನೆಯಲ್ಲಿ ವರ ಮತ್ತು ವಧುವಿನ ಭಾವಚಿತ್ರಗಳನ್ನು ಲಗತ್ತಿಸಿರಬೇಕು. ಜಾತಿ ದೃಢೀಕರಣ ಪತ್ರ ವಧುವರರ ವಯಸ್ಸಿನ ಬಗ್ಗೆ ಶಾಲೆಯಿಂದ ಪಡೆದ ದಾಖಲಾತಿ ಪತ್ರ ಪಡೆದ ದೃಢೀಕರಣ ಪತ್ರ ಲಗತ್ತಿಸಿರಬೇಕು. ಬಾಲ್ಯ ವಿವಾಹಕ್ಕೆ ಅವಕಾಶವಿರುವುದಿಲ್ಲ.

ಸಿಎಂ ಸ್ಥಾನಕ್ಕೆ ಸಿದ್ದರಾಮಯ್ಯ ರಾಜೀನಾಮೆ ನೀಡದಂತೆ ಹೋಟೆಲ್ ಮಾಲೀಕರ ಸಂಘ ಆಗ್ರಹ

ಮೈಸೂರು, ಆ.23(ಜಿಎ)–ಮೈಸೂರಿನ ಅಭಿವೃದ್ಧಿ ಹಾಗೂ ಮೈಸೂರು ಪ್ರವಾಸೋದ್ಯಮ ಹಿತದೃಷ್ಟಿಯಿಂದ ಮೈಸೂರಿನವರೇ ಆದ ಸಿದ್ದರಾಮಯ್ಯ ಅವರು ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡದೆ ಮುಂದುವರಿಯಬೇಕೆಂದು ಹೋಟೆಲ್ ಮಾಲೀಕರ ಸಂಘ ಆಗ್ರಹಿಸಿದೆ.

ಮೈಸೂರು ಈ ಕುರಿತು ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಸಂಘದ ಅಧ್ಯಕ್ಷ ಸಿ. ನಾರಾಯಣಗೌಡ ಮಾತನಾಡಿ, ಮೈಸೂರು ಭಾಗದಲ್ಲಿ ಡಿ. ದೇವರಾಜ ಅರಸು ನಂತರ ಮುಖ್ಯಮಂತ್ರಿ ಸ್ಥಾನ ಪಡೆಯಲು ಮೈಸೂರಿನ ಜನತೆ 33 ವರ್ಷ ಕಾಯಬೇಕಾಯಿತು. ಮೊದಲ ಅವಧಿ ನಂತರ ಎರಡನೆಯ ಅವಧಿಗೆ ಪುನಃ ಮುಖ್ಯಮಂತ್ರಿಗಳಾಗಿ ರಾಜ್ಯದ ಚುಕ್ಕಾಣಿ ಹಿಡಿದಿರುವ ಸಿದ್ದರಾಮಯ್ಯ ನವರು ಮೈಸೂರು ಭಾಗಕ್ಕೆ ಅನೇಕ ಅಭಿವೃದ್ಧಿ ಕಾರ್ಯಕ್ರಮಗಳು ಹಾಗೂ ಪ್ರವಾಸೋದ್ಯಮಕ್ಕೆ ಅತೀ ಹೆಚ್ಚಿನ ಆದ್ಯತೆ ನೀಡಿರುವುದು ಮೈಸೂರು ಭಾಗದಿಂದ ಮುಖ್ಯಮಂತ್ರಿಗಳಾಗಿದ್ದರಿಂದಲೇ ಆಗಿದೆ ಎಂದರು.



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ಸಿ. ನಾರಾಯಣಗೌಡ ಮಾತನಾಡಿದರು

ಸಿದ್ದರಾಮಯ್ಯ ಅವರು ತವರು ಜಿಲ್ಲೆಗೆ ಏನಾದರೂ ಅಭಿವೃದ್ಧಿ ಕಾರ್ಯ ಮಾಡಬೇಕೆಂದು ಸದಾ ನೆನಪಿಡುವ ಕಾರ್ಯಕ್ರಮ ಮಾಡುತ್ತಿದ್ದಾರೆ. 2013–2018ರ ಅವಧಿಯಲ್ಲಿ ಅವರು ಜಯದೇವ ಆಸ್ಪತ್ರೆ, ಟ್ರಾಮಾ ಸೆಂಟರ್, ಜಿಲ್ಲಾ ಆಸ್ಪತ್ರೆ, ಪಂಚಕರ್ಮ ಆಯುರ್ವೇದ ಆಸ್ಪತ್ರೆ, ಮಹಾರಾಣಿ ಕಾಲೇಜು, ಹೊಸ ಜಿಲ್ಲಾಧಿಕಾರಿಗಳ ಕಛೇರಿ, ಚಾಮುಂಡಿ ಬೆಟ್ಟದಲ್ಲಿ ಬಹುಮಹಡಿ ವಾಹನ ನಿಲ್ದಾಣ, ಕಾಂಕ್ರೀಟ್ ರಸ್ತೆಗಳಾದ ಚಾಮರಾಜ ಜೋಡಿ ರಸ್ತೆ ಸಯ್ಯಾಜಿರಾವ್ ರಸ್ತೆ, ಆಲ್ಬರ್ಟ್ ವಿಕ್ಟರ್ ರಸ್ತೆ ಮತ್ತಿತರ ಕಡೆ ಸೇರಿ ಇನ್ನೂ ಹಲವಾರು ಅಭಿವೃದ್ಧಿ ಕಾರ್ಯಗಳಿಗೆ 3000 ಕೋಟಿ ರೂ.ಗಳಿಗೂ ಅಧಿಕ ಹಣ ಬಿಡುಗಡೆ ಮಾಡಿ ಅಭಿವೃದ್ಧಿ ಪಡಿಸಿದ್ದಾರೆ ಎಂದು ತಿಳಿಸಿದರು.

ಈಗ ಎರಡನೇ ಅವಧಿಯ ಪೂರ್ಣಾವಧಿಗೆ ಮುಖ್ಯಮಂತ್ರಿಗಳಾಗಿ ಅವರು ಮುಂದುವರಿದರೆ ಮೈಸೂರಿನ ಪ್ರವಾಸೋದ್ಯಮ, ಚಿತ್ರನಗರಿ, ಡಿಸ್ನಿಲ್ಯಾಂಡ್ ಮತ್ತಿತರ ಅಭಿವೃದ್ಧಿ ಕಾರ್ಯಗಳು ಮೈಸೂರಿನಲ್ಲಿ ಇನ್ನೂ ಹೆಚ್ಚಿಗೆ ಆಗುವುದು. ಮೈಸೂರಿನವರು ಮುಖ್ಯಮಂತ್ರಿಗಳಾಗಿದ್ದರಿಂದ ಮೈಸೂರಿನ ಮೇಲೆ ವಿಶೇಷ ಕಾಳಜಿ ಇರುವುದರಿಂದ ಅದ್ದೂರಿ ದಸರಾ ಆಚರಿಸಲು 40 ಕೋಟಿ ರೂ. ಗಳನ್ನು ಬಿಡುಗಡೆ ಮಾಡಲು ಆದೇಶಿಸಲಾಗಿದೆ.

ಸಿದ್ದರಾಮಯ್ಯನವರಿಗೆ ಮೈಸೂರಿನ ಮೇಲೆ ವಿಶೇಷವಾದ ಪ್ರೀತಿಯಿದೆ. ಆದ್ದರಿಂದ ಅವರು ರಾಜೀನಾಮೆ ನೀಡದೇ ಇನ್ನೂ ಮೂರೂವರೆ ವರ್ಷ ಪೂರ್ಣಾವಧಿ ಮುಖ್ಯಮಂತ್ರಿಗಳಾಗಿ ಮುಂದುವರಿಯಲಿ ಎಂಬುದು ಆಶಯವಾಗಿದೆ ಎಂದರು.

ಸುದ್ದಿಗೋಷ್ಠಿಯಲ್ಲಿ ಪದಾಧಿಕಾರಿಗಳಾದ ರವಿಶಾಸ್ತ್ರಿ ಸುಬ್ರಹ್ಮಣ್ಯ ತಂತ್ರಿ ಎ.ಆರ್. ರವೀಂದ್ರ ಭಟ್, ಕೆ. ಭಾಸ್ಕರ್ ಶೆಟ್ಟಿ ಉಪಸ್ಥಿತರಿದ್ದರು.

ಮೈಸೂರು ರಾಮ್‌ಸನ್ಸ್ ಬೊಂಬೆ ಮನೆಯಲ್ಲಿ ಆಕರ್ಷಕ ದಸರಾ ಬೊಂಬೆ ಪ್ರದರ್ಶನ ಪ್ರಾರಂಭ

- ಶಾಸಕ ಶ್ರೀವತ್ಸರಿಂದ ಚಾಲನೆ
- ಪ್ರತಿ ವರ್ಷವೂ ಈ ಬೊಂಬೆ ಪ್ರದರ್ಶನಕ್ಕೆ ಭಾರೀ ಬೇಡಿಕೆ

ಮೈಸೂರು, ಆ.23(ಎಸ್‌ಬಿಡಿ)– ಮೈಸೂರಿನ ರಾಮಸನ್ಸ್ ಬೊಂಬೆ ಮನೆಯಲ್ಲಿ ದಸರೆಯ ಬೊಂಬೆ ಪ್ರದರ್ಶನದ ಇಪ್ಪತ್ತನೇ ಅವತರಣಿಕೆ ಮೈದಳೆದಿದೆ.

ನಜರ್‌ಬಾದ್‌ನ ಆಮ್ರಪಾಲಿ ಮಳಿಗೆ ಮೇಲಿನ ಬೊಂಬೆ ಮನೆಯಲ್ಲಿ ಶುಕ್ರವಾರ ಶಾಸಕ ಟಿ.ಎಸ್.ಶ್ರೀವತ್ಸ ದೀಪ ಬೆಳಗುವ ಮೂಲಕ ದಸರಾ ವಿಶೇಷ ಬೊಂಬೆ ಪ್ರದರ್ಶನಕ್ಕೆ ವಿದ್ಯುಕ್ತ ಚಾಲನೆ ನೀಡಿದರು. ಇದೇ ವೇಳೆ ಹಿರಿಯ ಸುಗಮ ಸಂಗೀತ ಕಲಾವಿದೆ ಹೆಚ್.ಆರ್.ಲೀಲಾವತಿ ಹಾಗೂ ವಸುಂಧರಾ ಪ್ರದರ್ಶಕ ಕಲೆಗಳ ಕೇಂದ್ರದ ಸಂಸ್ಥಾಪಕಿ ಡಾ.ವಸುಂಧರಾ ದೊರೆಸ್ವಾಮಿ ಇಲ್ಲಿನ ವಿಶೇಷ ಅಂಕಣಗಳನ್ನು ಉದ್ಘಾಟಿಸಿದರು. ರಾಮ್‌ಸನ್ಸ್ ಕಲಾಪ್ರತಿಷ್ಠಾನದ ಕಾರ್ಯದರ್ಶಿ ಆರ್.ಜಿ.ಸಿಂಗ್, ಡಾಲ್ ಡಿಸೈನರ್ ಅಂಡ್ ಕ್ಯುರೇಟರ್ ರಘು ಧರ್ಮೇಂದ್ರ ಮತ್ತಿತರರು ಉಪಸ್ಥಿತರಿದ್ದರು.

ದೇಶದೆಲ್ಲೆಡೆಯ ಬೊಂಬೆ: ಕರ್ನಾಟಕದ ಕಿನ್ನಾಳ, ಚನ್ನಪಟ್ಟಣ, ಗೋಕಾಕ, ತಮಿಳುನಾಡಿನ ಮದುರೈ, ಕುಂಭಕೋಣಂ, ತಂಜಾವೂರು, ಕಾಂಚಿಪುರಂ, ಕೃಷ್ಣಗಿರಿ, ತೆಲಂಗಾಣದ ಚೆರಿಯಾಲ್, ನಿರ್ಮಲ್, ಆಂಧ್ರದ ತಿರುಪತಿ, ಶ್ರೀಕಾಳಹಸ್ತಿ, ಎಟ್ಟಿಕೊಪ್ಪ, ಕೊಂಡಪಲ್ಲಿ, ಬೊಬ್ಬಿಲಿ, ಮಹಾರಾಷ್ಟ್ರದ ಕೊಲ್ಹಾಪುರ, ಪೇಣ್, ರಾಜಸ್ತಾನದ ಜೈಪುರ, ಜೋದ್‌ಪುರ್, ಬೀಕಾನೇರ್, ಉತ್ತರ ಪ್ರದೇಶದ ಕಾಶಿ, ಲಖ್ನೋ ಸಾರನಾಥ, ಪಶ್ಚಿಮ ಬಂಗಾಳದ ಕೊಲ್ಕತ್ತಾ, ಕೃಷ್ಣಾನಗರ, ಬಾಂಕೂಡಾ, ಒಡಿಶಾದ ಭುವನೇಶ್ವರ್, ಪುರಿ, ರಘುರಾಜಪುರ ಸೇರಿದಂತೆ ವಿವಿಧೆಡೆಯ ಸಾಂಪ್ರದಾಯಿಕ ಬೊಂಬೆ ಕಲಾವಿದರು ತಯಾರಿಸಿಕೊಟ್ಟಿರುವ ಬೊಂಬೆಗಳನ್ನು ರಾಮ್‌ಸನ್ಸ್ ಬೊಂಬೆ ಮನೆಯ ನಾಲ್ಕು ಅಂಕಣಗಳಲ್ಲಿ ಜೋಡಿಸಲಾಗಿದೆ.



ಮೈಸೂರಿನ ರಾಮ್‌ಸನ್ಸ್ ಬೊಂಬೆ ಮನೆಯಲ್ಲಿ ಶುಕ್ರವಾರ ದಸರಾ ವಿಶೇಷ ಬೊಂಬೆ ಪ್ರದರ್ಶನಕ್ಕೆ ಚಾಲನೆ ದೊರೆತ ನಂತರ ಗಣ್ಯರಾದ ಶಾಸಕ ಟಿ.ಎಸ್.ಶ್ರೀವತ್ಸ, ಹಿರಿಯ ಸುಗಮ ಸಂಗೀತ ಕಲಾವಿದೆ ಹೆಚ್.ಆರ್.ಲೀಲಾವತಿ ಹಾಗೂ ವಸುಂಧರಾ ಪ್ರದರ್ಶಕ ಕಲೆಗಳ ಕೇಂದ್ರದ ಸಂಸ್ಥಾಪಕಿ ಡಾ.ವಸುಂಧರಾ ದೊರೆಸ್ವಾಮಿ ಬೊಂಬೆ ಮನೆ ವೀಕ್ಷಿಸಿದರು. ರಾಮ್‌ಸನ್ಸ್ ಕಲಾಪ್ರತಿಷ್ಠಾನದ ಕಾರ್ಯದರ್ಶಿ ಆರ್.ಜಿ.ಸಿಂಗ್, ಡಾಲ್ ಡಿಸೈನರ್ ಅಂಡ್ ಕ್ಯುರೇಟರ್ ರಘು ಧರ್ಮೇಂದ್ರ ಮತ್ತಿತರರು ಉಪಸ್ಥಿತರಿದ್ದರು.

ವಿಶೇಷ ಅಂಕಣಗಳ ಮೆರಗು: ಈ ವರ್ಷ ಶ್ರೀ ತುಳಸೀ ದೇವಿ ಆರಾಧನೆಯ ವೈವಿಧ್ಯತೆಯಾದ 'ವೃಂದ ವಿಹಾರ' ವಿಶೇಷ ಅಂಕಣ ಆಕರ್ಷಕವಾಗಿದೆ ಭಾರತದ ಉದ್ದಗಲಕ್ಕೂ ತುಳಸಿಯನ್ನು ಮನೆ ಮುಂದಿನ ವೃಂದಾವನದಲ್ಲಿ ಬೆಳೆಸುವ ಸಂಪ್ರದಾಯ ಹಾಸುಹೊಕ್ಕಾಗಿದೆ. ಆದರೆ ಆ ವೃಂದಾವನ ರಚಿತಗೊಂಡಿರುವ ಮಾಧ್ಯಮ ಮತ್ತು ಶೈಲಿಗಳು ವಿಭಿನ್ನ ಹಾಗೂ ವಿಶಿಷ್ಟ ಈ ಹಿನ್ನೆಲೆಯಲ್ಲಿ ಪ್ರಾಂತೀಯ ಶೈಲಿಗಳ ತುಳಸಿ ಕಟ್ಟೆಗಳ ಜೊತೆಗೆ ತುಳಸಿಯ ಮಹತ್ವ ಸಾರುವ ಮೈಸೂರು ಶೈಲಿಯ ಚಿತ್ರಪಟಗಳು ಹಾಗೂ ಬೊಂಬೆಗಳು ಈ ಅಂಕಣದಲ್ಲಿ ಸಾಲಂಕೃತವಾಗಿರುವುದು ಕಣ್ಮನ ಸೆಳೆಯುತ್ತದೆ.

'ಸಂತ ಸಾಮ್ರಾಜ್ಯ' ಅಂಕಣದಲ್ಲಿ ನಮ್ಮ ಸನಾತನ ಧರ್ಮವನ್ನು ಉಳಿಸಿ ಬೆಳೆಸಿದಂತಹ ಸಾಧು–ಸಂತರು ಬೊಂಬೆ ಬಿಂಬಗಳಾಗಿ ಇಲ್ಲಿ ಅವತರಿಸಿದ್ದಾರೆ. ಸನಾತನ ಸಂಸ್ಕೃತಿಯ ಸಾರವನ್ನು ವಿವಿಧ ಸಿದ್ಧಾಂತಗಳ ಮುಖೇನ ಪ್ರಚಾರ ಮಾಡುತ್ತಾ ಧರ್ಮರಕ್ಷಣೆ ಮಾಡಿರುವ ಮಹಾತ್ಮರನ್ನು ಒಳಗೊಂಡಿರುವ ಈ ಅಂಕಣ ಈ ನೆಲದ ಆಧ್ಯಾತ್ಮಿಕ ಸಿರಿವಂತಿಕೆಯನ್ನು ಸಾರುವಂತಿದೆ.

'ಚಿತ್ರ ಮೃಗ' ಅಂಕಣವು ನಮ್ಮ ಪುರಾಣದಲ್ಲಿ ಕಂಡುಬರುವ ಚಿತ್ರ–ವಿಚಿತ್ರ ಮೃಗಗಳು, ಮಾಂಯಾ ಪ್ರಾಣಿ–ಪಕ್ಷಿಗಳ ಕಿನ್ನರ ಲೋಕದಂತಿದೆ. ಜೊತೆಗೆ ನಮ್ಮ ಮೈಸೂರು ಇಟ್ಟಿಗೆಗೂಡಿನ ಜೋಡಿ ಕರಗಕ್ಕೆ ಶತಮಾನ ಸಂದ ಸಂಭ್ರಮದ ಹಿನ್ನೆಲೆಯಲ್ಲಿ ಮಾರಮ್ಮ– ಚಾಮುಂಡೇಶ್ವರಿ ಜೋಡಿ ಕರಗ ಉತ್ಸವದ ಬೊಂಬೆಗಳನ್ನು ಹೊಸದಾಗಿ ತಯಾರಿಸಿರುವುದು ವಿಶೇಷವಾಗಿದೆ. ಕರಗ ಹೊತ್ತ ಯುವಕರು, ಅವರ ಬೆಂಗಾವಲಾಗಿರುವ ವೀರಕುಮಾರರು, ದೇವಿಯ ಒಡಪು ಹಾಡುಗಾರರು, ನಾದಸ್ವರ, ಚಂಡೆ, ಮದ್ದಳೆ ಮತ್ತು ಸಿಲಂಬು ವಾದಕರ ಪ್ರತಿರೂಪಗಳು ನಯನಮನೋಹರವಾಗಿವೆ.

ಬಾಲರಾಮನ ಬೊಂಬೆ ಬಿಂಬ: ಅಯೋಧ್ಯೆಯಲ್ಲಿ ಪ್ರತಿಷ್ಠಾಪಿಸಿರುವ ಬಾಲರಾಮ ಮೂರ್ತಿ ಮೈಸೂರಿನ ಮಗುವೆಂದೇ ಹೇಳಬಹುದು. ಶಿಲ್ಪಿ ಅರುಣ್ ಯೋಗಿರಾಜ್ ನೇತೃತ್ವದಲ್ಲಿ ಮೈಸೂರು ಕಲಾವಿದರ ಕೈಚಳಕದಲ್ಲಿ ರೂಪುಗೊಂಡ ಬಾಲರಾಮನ ಬೊಂಬೆ ಬಿಂಬಗಳನ್ನು ಇಲ್ಲಿ ಭಿನ್ನ–ವಿಭಿನ್ನ ರೀತಿಯಲ್ಲಿ ರಚಿಸಲಾಗಿದೆ. ಜೊತೆಗೆ ಬಹುದಿನದ ಬೇಡಿಕೆಯಂತೆ ಮೊದಲ ಬಾರಿಗೆ ಯಕ್ಷಗಾನದ ಬೊಂಬೆ ಸೇರ್ಪಡೆಯಾಗಿರುವುದು ಬೊಂಬೆ ಪ್ರಿಯರಿಗೆ ಮತ್ತಷ್ಟು ಮುದ ನೀಡಲಿವೆ.

ವರ್ಷವಿಡೀ ಪ್ರದರ್ಶನ: ಹೀಗೆ ನೂರಾರು ಕಲಾವಿದರಿಂದ ತಯಾರಾಗಿರುವ ಸಾವಿರಾರು ವಿಶಿಷ್ಟ ಬೊಂಬೆಗಳು ರಾಮ್‌ಸನ್ಸ್ ಬೊಂಬೆ ಮನೆಯಲ್ಲಿ ರಾರಾಜಿಸುತ್ತಿವೆ. ನವರಾತ್ರಿಯಲ್ಲಿ ಮನೆಯಲ್ಲಿ ಬೊಂಬೆ ಕೂರಿಸುವ ಸಂಪ್ರದಾಯ ಅನುಸರಿಸುತ್ತಾ ಬಂದಿರುವವರಿಗೆ ಈ ಬೊಂಬೆ ಮನೆ ನವೀನತೆಯನ್ನು ಉತ್ತೇಜಿಸುತ್ತದೆ. ಆ.24 ರಿಂದ ವರ್ಷಪೂರ್ತಿ ಬೆಳಗ್ಗೆ 10 ರಿಂದ ಸಂಜೆ 7 ರವರೆಗೆ ಬೊಂಬೆ ಮನೆ ವೀಕ್ಷಿಸಬಹುದಾಗಿದೆ.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ ಚಿತ್ರಮಂದಿರ	(ದೂ: 2521923)
ಮಿ. ಬಚ್ಚನ್ (ತೆ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಕೃಷ್ಣಂ ಪ್ರಣಯ ಸಖಿ (ಕ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಭೀಮಾ (ಕ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಕೃಷ್ಣಂ ಪ್ರಣಯ ಸಖಿ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಭೀಮಾ (ಕ)	4 ಪ್ರದರ್ಶನಗಳು
ರಾಜಕಮಲ್	
ತಂಗಾಲಾನ್ (ತ)	4 ಪ್ರದರ್ಶನಗಳು
ಸಂಗಂ	
ಭೀಮಾ (ಕ)	4 ಪ್ರದರ್ಶನಗಳು
ಲಿಡೋ	
ಗೌರಿ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಸ್ತ್ರೀ–2 (ಹಿ)	4 ಪ್ರದರ್ಶನಗಳು
ಪ್ರಭಾ	
ತಾಜ್ (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	ಹೆರಾಲ್ಡ್ ಅಂಡ್ ದಿ ಪರ್ಪಲ್ ಕ್ರಯಾನ್ (ಇಂ): ಬೆ.11ಕ್ಕೆ, ಕೃಷ್ಣಂ ಪ್ರಣಯ ಸಖಿ (ಕ): ಮ.1ಕ್ಕೆ, ಸಂ.4.05ಕ್ಕೆ, ಸ್ತ್ರೀ 2 (ಹಿಂ): ರಾ.7.10ಕ್ಕೆ, ರಾ.10.10ಕ್ಕೆ.
ಸ್ಕ್ರೀನ್ 2	ಕೃಷ್ಣಂ ಪ್ರಣಯ ಸಖಿ (ಕ): ಬೆ.10.45ಕ್ಕೆ, ಹೆರಾಲ್ಡ್ ಅಂಡ್ ದಿ ಪರ್ಪಲ್ ಕ್ರಯಾನ್ (ಇಂ): ಮ.2.10ಕ್ಕೆ, ಪೌಡರ್ (ಕ): ಸಂ.4.30ಕ್ಕೆ, ರಾ.7.15ಕ್ಕೆ, ವಾಝಾ ಬಯೋಪಿಕ್ ಆಫ್ ಎ ಬಿಲಿಯನ್ ಬಾಯ್ಸ್ (ಮ): ರಾ.10ಕ್ಕೆ.
ಸ್ಕ್ರೀನ್ 3	ಏಲಿಯನ್ ರೊಮುಲಸ್ (ಇಂ): ಬೆ.10.55ಕ್ಕೆ, ಸಂ.4.50ಕ್ಕೆ, ರಾ.7.30ಕ್ಕೆ, ತಂಗಲಾನ್ (ತ): ಮ.1.25ಕ್ಕೆ, ಭೀಮಾ (ಕ): ರಾ.10ಕ್ಕೆ.
ಸ್ಕ್ರೀನ್ 4	ಸ್ತ್ರೀ 2 (ಹಿಂ): ಬೆ.10.20ಕ್ಕೆ, ಸಂ.4.10ಕ್ಕೆ, ಭೀಮಾ (ಕ): ಮ.1.15ಕ್ಕೆ, ಕೃಷ್ಣಂ ಪ್ರಣಯ ಸಖಿ (ತ): ರಾ.7.05ಕ್ಕೆ, ರಾ.10.10ಕ್ಕೆ.

ಐನಾಕ್ಸ್ ಮೂವೀಸ್
INOX LIVE THE MOVIE
ದೂ : 2533444 / 2433456

ಸ್ಕ್ರೀನ್ 1	ಬ್ಯಾಡ್ ನ್ಯೂಸ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ.
ಸ್ಕ್ರೀನ್ 2	ಕಲ್ಕಿ 2898 ಎಡಿ (ಕ): ಬೆ.11.40ಕ್ಕೆ, ಸಂ.6.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.3.20ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 3	ಇಂಡಿಯನ್ 2 (ತ): ಬೆ.9.40ಕ್ಕೆ, ಸಂ.4.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.1.20ಕ್ಕೆ, ರಾ.7.45ಕ್ಕೆ, ಡಾರ್ಲಿಂಗ್ ವೈ ದಿಸ್ ಕೊಲವರಿ (ತೆ): ರಾ.10.30ಕ್ಕೆ.
ಸ್ಕ್ರೀನ್ 4	ವಿದ್ಯಾರ್ಥಿ ವಿದ್ಯಾರ್ಥಿನಿಯರೇ (ಕ): ಬೆ.11.30ಕ್ಕೆ, ಕಲ್ಕಿ 2898 ಎಡಿ (3ಡಿ)(ತೆ): ಮ.2.50ಕ್ಕೆ, ಹಿರಣ್ಯ (ಕ): ಸಂ.6.30ಕ್ಕೆ, ಕಲ್ಕಿ 2898 ಎಡಿ (ಹಿಂ): ರಾ.9.30ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	ಭೀಮಾ (ಕ): ಬೆ.10.50ಕ್ಕೆ, ಪೌಡರ್ (ಕ): ಮ.1.45ಕ್ಕೆ, ಸಂ.4.20ಕ್ಕೆ, ಫೂಟೇಜ್ (ಮ): ಸಂ.6.55ಕ್ಕೆ, ನುನಕ್ಕುಝಿ (ಮ): ರಾ.9.25ಕ್ಕೆ.
ಸ್ಕ್ರೀನ್ 2	ಕೃಷ್ಣಂ ಪ್ರಣಯ ಸಖಿ (ಕ): ಮ.12.25ಕ್ಕೆ, ಸಂ.6.25ಕ್ಕೆ, ರಾ.9.30ಕ್ಕೆ, ಭೀಮಾ (ಕ): ಮ.3.50ಕ್ಕೆ.
ಸ್ಕ್ರೀನ್ 3	ಸ್ತ್ರೀ 2 (ಹಿಂ): ಬೆ.10ಕ್ಕೆ, ಮ.12.50ಕ್ಕೆ, ಸಂ.6.50ಕ್ಕೆ, ಕೃಷ್ಣಂ ಪ್ರಣಯ ಸಖಿ (ಕ): ಮ.3.45ಕ್ಕೆ, ಹಂಟ್ (ಮ): ರಾ.9.40ಕ್ಕೆ.
ಸ್ಕ್ರೀನ್ 4	ಕೃಷ್ಣಂ ಪ್ರಣಯ ಸಖಿ (ಕ): ಬೆ.10.20ಕ್ಕೆ, ಭೀಮಾ (ಕ): ಮ.1.25ಕ್ಕೆ, ಸಂ.6.35ಕ್ಕೆ, ಹಂಟ್ (ಮ): ಸಂ.4.20ಕ್ಕೆ, ಸ್ತ್ರೀ 2 (ಹಿಂ): ರಾ.9.30ಕ್ಕೆ.

ಪಿವಿಆರ್ ಸಿನಿಮಾಸ್
ನೆಕ್ಸಸ್ ಸೆಂಟರ್‌ಸಿಟಿ ಮಾಲ್,
2ನೇ ಮಹಡಿ, ಮೊ.ನಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಇಂದು, ನಾಳೆ ಮೈಸೂರಲ್ಲಿ ಕ್ಯಾಂಪಸ್ ಕಾನ್ಫರೆನ್ಸ್

ಮೈಸೂರು, ಆ.23(ಜಿಎ)–ಕರ್ನಾಟಕ ರಾಜ್ಯ ಸುನ್ನೀ ಸ್ಟೂಡೆಂಟ್ಸ್ ಫೆಡರೇಷನ್ ವತಿಯಿಂದ ಆ. 24 ಮತ್ತು 25 ರಂದು ಮೈಸೂರಿನ ಈದ್ಗಾ ಮೈದಾನದಲ್ಲಿ ಕ್ಯಾಂಪಸ್ ಕಾನ್ಫರೆನ್ಸ್ ಎಂಬ ಯುವಜನರಿಗಾಗಿನ ಉಪಯುಕ್ತ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ರಾಜ್ಯಾಧ್ಯಕ್ಷ ಹಫೀಜ್ ಸುಫ್ಯಾನ್ ಸಕಾಫಿ ಅಲ್ಹಿಕಮಿ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸ್ವಾಭಿಮಾನಕ್ಕಾಗಿ ವಿದ್ಯಾರ್ಥಿಗಳು ಎಂಬ ಧ್ಯೇಯದೊಂದಿಗೆ ರಾಜ್ಯದ ವಿವಿಧ ಜಿಲ್ಲೆಗಳ ಐದು ಸಾವಿರ ಪ್ರತಿನಿಧಿಗಳು ಭಾಗವಹಿಸಲಿದ್ದು, ಇಂಡಿಯನ್ ಗ್ರಾಂಡ್ ಮುಫ್ತಿ ಸುಲ್ತಾನುಲ್ ಉಲಮಾ ಶೈಖ್ ಅಬೂಬಕರ್ ಅಹ್ಮದ್ ಉದ್ಘಾಟನೆ ಮಾಡಲಿದ್ದಾರೆ. 24 ರಂದು ಮಧ್ಯಾಹ್ನ 3ಗಂಟೆಗೆ ಎಸ್ಸೆಸ್ಸೆಫ್ ರಾಷ್ಟ್ರೀಯ ಸಮಿತಿ ಅಧ್ಯಕ್ಷ ನೌಷಾದ್ ಆಲಂ ಮಿಸ್ಬಾಹಿ ಒಡಿಸ್ಸಾ ಧ್ವಜಾರೋಹಣ ನೆರವೇರಿಸಲಿದ್ದು ಬಳಿಕ ಎರಡು ದಿನಗಳ ಕ್ಯಾಂಪಸ್ ಕಾನ್ಫರೆನ್ಸ್ ಚಾಲನೆಗೊಳ್ಳಲಿದೆ ಎಂದರು.

ಉದ್ಘಾಟನಾ ಸಮಾರಂಭದಲ್ಲಿ ಜಾಮಿಯಾ ಸಅದಿಯಾ ವಿದ್ಯಾ ಸಮುಚ್ಚಯದ ಅಧ್ಯಕ್ಷ ಸಯ್ಯದ್ ಆಟಕೋಯ ತಂಬಳ್ ಕುಂಬೋಳ್ ಆಶೀರ್ವಚನ ನೀಡಲಿದ್ದಾರೆ. ಮರ್ಕಝ್ ನಾಲೆಜ್ ಸಿಟಿ ಡೈರೆಕ್ಟರ್ ಡಾ.ಎ.ಪಿ.ಅಬ್ದುಲ್ ಹಕೀಂ ಅಝ್ಹರಿ, ಕರ್ನಾಟಕ ವಕ್ಫ್ ಮಂಡಳಿ ಮಾಜಿ ಅಧ್ಯಕ್ಷ ಶಾಫಿ ಸಅದಿ ಬೆಂಗಳೂರು, ಎಸ್ಸೆಸ್ಸೆಫ್ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಉಬೈದುಲ್ಲಾ ಸಖಾಫಿ ಕೇರಳ, ಫಖೀಹುಲ್ ಖಮರ್ ಸಖಾಫಿ ಬಿಹಾರ ಭಾಗವಹಿಸಲಿದ್ದು, ಎಸ್ಸೆಸ್ಸೆಫ್ ರಾಜ್ಯಾಧ್ಯಕ್ಷ ಹಾಫಿಝ್ ಸುಫ್ಯಾನ್ ಸಖಾಫಿ ಅಲ್ ಹಿಕಮಿ ಅಧ್ಯಕ್ಷತೆ ವಹಿಸಲಿದ್ದಾರೆ ಎಂದರು.

ನಾಳೆಯ ಪ್ರಜೆಗಳಾದ ವಿದ್ಯಾರ್ಥಿಗಳ ಉಜ್ವಲ ಭವಿಷ್ಯಕ್ಕೆ ಮಾರ್ಗದರ್ಶನ ನೀಡುವ ವಿವಿಧ ಶಿಬಿರಗಳು, ಸೆಮಿನಾರ್‌ಗಳು ಚರ್ಚಾ ಗೋಷ್ಠಿಗಳು ಹಾಗೂ ಪ್ರಶೋತ್ತರ ವೇದಿಕೆಗಳು ಶಿಬಿರದಲ್ಲಿ ನಡೆಯಲಿದ್ದು ಮರ್ಕಝ್ ಶ್ರೀ ಚಾನ್ಸಲರ್ ಅಡ್ವಕೇಟ್ ಡಾ. ಚುಳ್ಳಿಕ್ಕೋಡ್ ಹುಸೈನ್ ಸಖಾಫಿ, ಚಿಕ್ಕಬಳ್ಳಾಪುರ ಶಾಸಕ ಪ್ರದೀಪ್ ಈಶ್ವರ್, ಜಾಮಿಯ ಮಿಲ್ಲಿಯಾ ಪ್ರೊಫೆಸರ್ ಡಾ. ಫರ್ಖುಲುಲ್ಲಾಹ್ ಚಿಷ್ತಿ ದೆಹಲಿ, ಅಝೀಮ್ ಪ್ರೇಂ ಜೀ ವಿಶ್ವವಿದ್ಯಾಲಯದ ಪ್ರೊಫೆಸರ್ ಸುನಂದನ್ ಸಿ ಎನ್, ಡಾ. ಫಾರೂಖ್ ನಈಮಿ ಕೊಲ್ಲಂ, ಕರ್ನಾಟಕ ಮುಸ್ಲಿಂ ಜಮಾಅತ್ ಅಧ್ಯಕ್ಷ ಡಾ.ಮುಹಮ್ಮದ್ ಫಾಝಿಲ್ ರು ಕಾವಳಕಟ್ಟೆ, ಬರಹಗಾರ, ಸಾಹಿತಿ ಟಿ ಗುರುರಾಜ್, ಕರ್ನಾಟಕ ಉಲಮಾ ಒಕ್ಕೂಟದ ಕಾರ್ಯದರ್ಶಿ ಎಸ್ ಪಿ ಹಂಝ ಸಖಾಫಿ, ಮೌಲಾನಾ ಅಬೂ ಸುಫ್ಯಾನ್ ಮದನಿ, ಅಬ್ದುಲ್ ರಶೀದ್ ಝುನಿ ಕಾಮಿಲ್ ಸಖಾಫಿ, ತೋಕೆ ಮುಹೂದ್ದೀನ್ ಕಾಮಿಲ್ ಸಖಾಫಿ, ನೌಫಲ್ ಸಖಾಫಿ ಕಳಸ, ಹಮೀದ್ ಬಜ್ಪೆ ಸಂಪನ್ಮೂಲ ವ್ಯಕ್ತಿಗಳಾಗಿ ಭಾಗವಹಿಸಲಿದ್ದಾರೆ ಎಂದು ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಒಬೇದುಲ್ಲಾ, ಇರ್ಫಾನ್ ಮೈಸೂರು, ಮೊಹಮ್ಮದ್ ಮುಸ್ತಫಾ ಉಪಸ್ಥಿತರಿದ್ದರು.

ಮುಡಾ ಹಗರಣಕ್ಕೆ ಅಧಿಕಾರಿ ಕಾರಣವೇ ಹೊರತು ಪ್ರಾಧಿಕಾರ ಸಮಿತಿಯಲ್ಲ

ರಮೇಶ ಬಂಡಿಸಿದ್ದೇಗೌಡ ಸ್ಪಷ್ಟನೆ



ರಮೇಶ್ ಬಂಡಿಸಿದ್ದೇಗೌಡ

ಹಾಸನ: ಅಧಿಕಾರಿಗಳು 50:50 ನಿವೇಶನ ಕೊಡುವುದನ್ನು ಯಾವುದೇ ಕಾರಣಕ್ಕೂ ಸಭೆಗೆ ಮಂಡಿಸಲ್ಲ. ಅವರಿಗೆ ಆ ಅಧಿಕಾರವಿದೆ. ಮುಡಾ ಹಗರಣಕ್ಕೆ ಅಧಿಕಾರಿಗಳು ಕಾರಣವೇ ಹೊರತು, ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ಸಮಿತಿಯಲ್ಲ ಎಂದು ಶಾಸಕ ರಮೇಶ್ ಬಂಡಿಸಿದ್ದೇಗೌಡ ಹೇಳಿದರು.

ನಗರದಲ್ಲಿ ಮಾತನಾಡಿದ ಅವರು, ಸಿದ್ದರಾಮಯ್ಯ ಅವರು ನೇರ ಅರ್ಜಿದಾರರಲ್ಲ. ಸಿದ್ದರಾಮಯ್ಯ ಅವರ ಒಂದೇ ಒಂದು ಸಹಿ ಇಲ್ಲ. ಯಾರ ಗಮನಕ್ಕೂ ತರದೇ ಅಧಿಕಾರಿಗಳೇ ಇದನ್ನು ಮಾಡಿದ್ದಾರೆ. ಇದು ಮುಡಾ ಅಧ್ಯಕ್ಷರು ಮತ್ತು ಯಾವ ಸದಸ್ಯರ ಗಮನಕ್ಕೂ ಬರಲ್ಲ. ಅಧಿಕಾರ ದುರುಪಯೋಗಪಡಿಸಿಕೊಂಡಿರುವ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳಬೇಕು. ತಪ್ಪು ಮಾಡಿದವರಿಗೆ ಶಿಕ್ಷೆಯಾಗಲಿ. ಸವಲತ್ತು ಪಡೆದಿರುವ ಎಲ್ಲರ ಹೆಸರು ಹೇಳಬೇಕು. ತನಿಖೆ ನಡೆಯುತ್ತಿದೆ, ಸತ್ಯಾಂಶ ಹೊರಬರುತ್ತದೆ ಎಂದು ವಾಗ್ದಾಳಿ ನಡೆಸಿದರು.

ನಾನು ಒಬ್ಬ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ಸದಸ್ಯ, ಮೂರು ಬಾರಿ ಶಾಸಕನಾಗಿ ಮುಡಾದಲ್ಲಿ ಕೆಲಸ ಮಾಡಿದ್ದೇನೆ. ಅರ್ಜಿ ಇಲ್ಲದೇನೆ ಹೇಗೆ ಮಂಜೂರಾತಿ ಮಾಡಲು ಆಗುತ್ತೆ? ಅರ್ಜಿ ಇಲ್ಲ ಎಂದು ನಾವೇನು ಹೇಳಿಲ್ಲ ಮಂಜೂರಾತಿ ಮಾಡಿಕೊಡಿ ಎಂದು ಅರ್ಜಿ ಕೊಟ್ಟಿದ್ದಾರೆ. ತಪ್ಪು ಬರೆದಾಗ ವೈಟ್ನರ್ ಹಾಕೋದು ಸಹಜ. ನ್ಯಾಯಾಂಗ ತನಿಖೆಗೆ ಕೊಟ್ಟಿದ್ದೇವೆ ಪರಿಶೀಲನೆ ಮಾಡಲಿ ಎಂದು ತಿಳಿಸಿದರು.

ಯಡಿಯೂರಪ್ಪ ಅವರ ತಂಗಿ ಮಕ್ಕಳಿಗೆ ನಿವೇಶನಗಳನ್ನು ಕೊಟ್ಟಿಲ್ವಾ? 50:50ಯಲ್ಲಿ ನಿವೇಶನ ತಗೊಂಡಿಲ್ವಾ? ಪ್ರಾಮಾಣಿಕರಾಗಿದ್ದರೆ ಅವರು ತಿಳಿಸಲಿ. ಜೆಡಿಎಸ್ ಶಾಸಕರು 50:50 ಹಂಚಿಕೆ ಅಡಿಯಲ್ಲಿ ಎಷ್ಟು ನಿವೇಶನ ತೆಗೆದುಕೊಂಡಿದ್ದಾರೆ 1800–2000 ಸೈಟ್‌ಗಳನ್ನು ವ್ಯವಸ್ಥಿತವಾಗಿ ತೆಗೆದುಕೊಂಡಿದ್ದಾರಲ್ಲಾ ಅದು ಯಾರದ್ದು. ಇವರು, ಇವರ ತಮ್ಮನ ಮಕ್ಕಳು, ಅಕ್ಕನ ಮಕ್ಕಳು, ಚಿಕ್ಕಪ್ಪ, ದೊಡ್ಡಪ್ಪನ ಮಕ್ಕಳಿಗೆ ಕೊಟ್ಟಿಲ್ವಾ ಎಂದು ಕಿಡಿಕಾರಿದರು.

ಸಿಎಂ, ಡಿಸಿಎಂ ದೆಹಲಿ ಭೇಟಿಯ ವಿಚಾರ ತಿಳಿಸಿದ ಅವರು, ಎಲ್ಲಾ ಶಾಸಕರು ದೆಹಲಿಗೆ ಹೋಗಿಲ್ಲ. ಸಿಎಂ ಮತ್ತು ಡಿಸಿಎಂ ಅವರು ರಾಜ್ಯದ ಇವತ್ತಿನ ಪರಿಸ್ಥಿತಿ ಬಗ್ಗೆ ರಾಹುಲ್ ಗಾಂಧಿ ಮತ್ತು ಮಲ್ಲಿಕಾರ್ಜುನ ಖರ್ಗೆ ಅವರಿಗೆ ಮಾಹಿತಿ ನೀಡಲು ದೆಹಲಿಗೆ ಹೋಗಿದ್ದಾರೆ. ಅವರನ್ನು ದೆಹಲಿಗೆ ಹೋಗುವುದಕ್ಕೆ ಎಲ್ಲಾ ಶಾಸಕರು ಒತ್ತಾಯ ಮಾಡಿದ್ದೇವೆ ಎಂದು ಮಾಹಿತಿ ನೀಡಿದರು.

ರಾಷ್ಟ್ರಪತಿ ಅವರನ್ನು ಭೇಟಿ ಮಾಡೋಣ ಎಂದಿದ್ದೇವೆ. ಬಿಜೆಪಿ–ಜೆಡಿಎಸ್ ನವರು ಗದಾಪ್ರಹಾರ ಮಾಡುತ್ತಿದ್ದಾರೆ. ಅದನ್ನು ರಾಷ್ಟ್ರಪತಿಗಳಿಗೆ ಮನದಟ್ಟು ಮಾಡಿಕೊಡೋಣ ಎಂದು ಹೇಳಿದ್ದೇವೆ. ಆದಷ್ಟು ಬೇಗ ಎಲ್ಲಾ ಶಾಸಕರು ಹೋಗಿ ರಾಷ್ಟ್ರಪತಿಗಳನ್ನು ಭೇಟಿ ಮಾಡುತ್ತೇವೆ ಎಂದು ಹೇಳಿದರು.

ಸಂಸದ ಶ್ರೇಯಸ್ ಪಟೇಲ್‌ಗೆ ಹೈಕೋರ್ಟ್ ನೋಟಿಸ್

ಬೆಂಗಳೂರು, ಆ.23– ಹಾಸನ ಲೋಕಸಭಾ ಕ್ಷೇತ್ರದ ಸಂಸದ ಶ್ರೇಯಸ್ ಎಂ.ಪಟೇಲ್ ಆಯ್ಕೆ ಅಸಿಂಧು ಕೋರಿ ಹೈಕೋರ್ಟ್ ವಕೀಲ ಜಿ.ದೇವರಾಜೇಗೌಡ ಪುತ್ರ ಡಿ.ಚರಣ್ ಗೌಡ ಸಲ್ಲಿಸಿರುವ ಅರ್ಜಿಗೆ ಸಂಬಂಧಿಸಿದಂತೆ ಶ್ರೇಯಸ್ ಪಟೇಲ್‌ಗೆ ನೋಟಿಸ್ ಜಾರಿಗೊಳಿಸಲು ಹೈಕೋರ್ಟ್ ಆದೇಶಿಸಿದೆ.

ಈ ಕುರಿತಾದ ಚುನಾವಣಾ ತಕರಾರು ಅರ್ಜಿಯನ್ನು ನ್ಯಾಯಮೂರ್ತಿ ಅಶೋಕ್ ಎಸ್.ಕಿಣಗಿ ಅವರಿದ್ದ ಏಕಸದಸ್ಯ ನ್ಯಾಯಪೀಠ ಶುಕ್ರವಾರ ವಿಚಾರಣೆ ನಡೆಸಿತು. ಪ್ರತಿವಾದಿ ಸಂಸದ ಶ್ರೇಯಸ್ ಎಂ.ಪಟೇಲ್ ಅವರಿಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿ ವಿಚಾರಣೆಯನ್ನು ಸೆ.30ಕ್ಕೆ ಮುಂದೂಡಿತು. ಶ್ರೇಯಸ್ ಪಟೇಲ್ ಚುನಾವಣೆ ವೇಳೆ ಸಲ್ಲಿಸಿರುವ ಪ್ರಮಾಣ ಪತ್ರದಲ್ಲಿ ತಮ್ಮ ಆಸ್ತಿ ವಿವರಗಳನ್ನು ಪ್ರಾಮಾಣಿಕವಾಗಿ ನಮೂದಿಸಿಲ್ಲ. ಐದು ವರ್ಷಗಳ ಆದಾಯ ತೆರಿಗೆ ರಿಟರ್ನ್ಸ್ ಸಲ್ಲಿಸಿಲ್ಲ. ಅವರ ನಾಮಪತ್ರ ಕ್ರಮಬದ್ಧವಾಗಿಲ್ಲ. ಚುನಾವಣಾ ವೆಚ್ಚದ ಬಗ್ಗೆ ತಪ್ಪು ಮಾಹಿತಿ ನೀಡಿದ್ದಾರೆ. ಹಾಗಾಗಿ, ಅವರ ಆಯ್ಕೆ ರದ್ದುಗೊಳಿಸಬೇಕು ಎಂದು ಅರ್ಜಿದಾರರು ಕೋರಿದ್ದಾರೆ.

ಮೈಸೂರು ಮಿತ್ರ 45 ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

-ಜಾಹೀರಾತು ವ್ಯವಸ್ಥಾಪಕರು

CHANGE OF NAME

I, Sridhar Tantry R/at No. 944/A, Telecom Road, 12th Cross, Roopanagara, Mysuru have changed my name from SRIDHAR to SRIDHAR TANTRY. I here by confirm that both SRIDHAR as appearing in passport and SRIDHAR TANTRY in all other documents are same and belong to me only sworn in front of Notary R. Kusuma vide dated 7.8.2024.

Sd/- Sridhar Tantry

PUBLIC NOTICE

My client has agreed to purchase, the below mentioned Schedule Property from (1) SMT. M. MAHADEVAMMA, wife of Sri. B.P. Rajashekar and daughter of Sri. K.P. Madaiah, aged about 57 years, residing at No, 1236/1, AIISH Layout, Bogadi II Stage, Prashantha Nagara, Mysore - 570 026 (Owner). The Owner has represented that she is the absolute owner of the Schedule Property having absolute, clear, marketable right, title and interest therein and that there are no other person/s having any right, claim over the Schedule Property apart from her. The Owner has represented that she has not entered into any Agreement for Sale/MoU/Development Agreement/-Sale Deed with any other person/s regard to the Schedule Property. Any person/s having any objection or claims shall with documentary evidence lodge their objections/claims within 15 (Fifteen) days from the date of this notice to my office at situated at No. 1063/71A, F-3A, 2nd Main, 8th Cross, Vidyaranyapuram, Mysore- 570 008, failing which my client shall proceed with the above-mentioned transaction, without any reference and regard to such purported claim, interest, which shall be deemed to waive off for all claims and purposes.

SCHEDULE PROPERTY: All that piece and parcel of immovable residential Property bearing Site No. 181, situated at A and B Block, Kuvempunagar, Jayanagar connecting Saraswathipuram Thanchikoppal Extension, Chamaraja Mohalla, Mysore, measuring East to West: 20 Feet (6.096012 Meters) and North to South: 35 Feet (10.668021 Meters), totally measuring 700 Square Feet (65.032390 Square Meters), bearing PID No. 16-8-599-216 (Old No. 181) with a built up area of 46.4515 square meters constructed with Mosaic flooring and RCC ceiling. The Building has electricity, water and sanitary connections.

EAST BY: Site No. 180, WEST BY: Site No. 182, NORTH BY: Site No. 213
SOUTH BY: Road

Sd/- Smt. Sri Laxmi Y S Advocate
KAR/627/2016

Place: Mysore, Date: 23.08.2024

ಶ್ರೀ ಕನ್ಯಕಾಪರಮೇಶ್ವರೀ ಕೋ–ಆಪರೇಟಿವ್ ಬ್ಯಾಂಕ್ ಲಿ.,
ಕೆ. ಆರ್. ಸರ್ಕಲ್, ಮೈಸೂರು.

ಫೋನ್: 2423575 / 2434738 / 2421698 / 4000063

ಆಹ್ವಾನ ಪತ್ರಿಕೆ

ಬ್ಯಾಂಕಿನ 93ನೇ ಸರ್ವಸದಸ್ಯರ ವಾರ್ಷಿಕ ಮಹಾಸಭೆಯನ್ನು ದಿನಾಂಕ: 25–08–2024 ನೇ ಭಾನುವಾರ ಬೆಳಗ್ಗೆ 10 ಗಂಟೆಗೆ ಶ್ರೀ ನಂಜರಾಜ ಬಹದ್ದೂರ್ ಛತ್ರ, ಶಿವರಾಂಪೇಟೆ (ಮೆಟ್ರೊಪೋಲ್ ಹೋಟೆಲ್ ಹತ್ತಿರ) ಮೈಸೂರು, ಇಲ್ಲಿ ನಡೆಸಲು ಏರ್ಪಾಡು ಮಾಡಲಾಗಿರುತ್ತದೆ.

ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಹೆಚ್.ಎಂ. ಸಂದೀಪ್ ರವರು ಅಧ್ಯಕ್ಷತೆ ವಹಿಸುವರು. ಈಗಾಗಲೇ ಪ್ರತಿಯೊಬ್ಬ ಸದಸ್ಯರಿಗೂ ವಾರ್ಷಿಕ ಮಹಾಸಭೆಯ ಆಹ್ವಾನ ಪತ್ರಿಕೆಯನ್ನು ಕಳುಹಿಸಲಾಗಿರುತ್ತದೆ. ಆಹ್ವಾನ ಪತ್ರಿಕೆ ತಲುಪದೇ ಇರುವವರು ಇದನ್ನೇ ಆಹ್ವಾನವೆಂದು ತಿಳಿದು ದಯಮಾಡಿ ಭಾಗವಹಿಸಬೇಕೆಂದು ವಿನಂತಿ.

ಸಹಿ/– ಡೈರೆಕ್ಟರುಗಳ ಮಂಡಳಿ ಆದೇಶದ ಮೇರೆಗೆ
ಶ್ರೀ ನರೇಶ್.ವೈ.ಪಿ, ಮುಖ್ಯ ಕಾರ್ಯನಿರ್ವಹಣಾಧಿಕಾರಿ

ವಿಶೇಷ ಸೂಚನೆ:

1. ವಾರ್ಷಿಕ ಮಹಾಸಭೆಯಲ್ಲಿ ಭಾಗವಹಿಸುವುದಕ್ಕಾಗಿ ಸದಸ್ಯರುಗಳ ಮೆಂಬರುತನದ ಪಾಸ್ ಪುಸ್ತಕವನ್ನು (Membership Pass Book) ಹಾಜರುಪಡಿಸಬೇಕು. Identity Card ತರುವುದು ಅವಶ್ಯಕತೆ ಇಲ್ಲ.
2. ತಾ|| 25–08–2024 ರಂದು ವಾರ್ಷಿಕ ಮಹಾಸಭೆ ನಡೆಯುವ ಪ್ರಯುಕ್ತ ಸೋಮವಾರ ಬ್ಯಾಂಕಿಗೆ ರಜಾ ಕೊಡಲಾಗಿರುತ್ತದೆ.
3. ಇದುವರೆವಿಗೂ KYC ನವೀಕರಿಸದೇ ಇರುವ ಸದಸ್ಯರುಗಳು ಪೂರಕ ದಾಖಲಾತಿಗಳನ್ನು ಸಲ್ಲಿಸಿ ನವೀಕರಿಸಿಕೊಳ್ಳಲು ಕೋರಲಾಗಿದೆ.

ಸಾರ್ವಜನಿಕ ಪ್ರಕಟಣೆ

ಸಾರ್ವಜನಿಕರಿಗೆ ಈ ಪ್ರಕಟಣೆ ಮೂಲಕ ತಿಳಿಸುವುದೇನೆಂದರೆ, ನಮ್ಮ ಕಕ್ಷಿದಾರರಾದ ಶ್ರೀಮತಿ ಕೆ. ಎಂ. ಪೂರ್ಣಿಮಾ ಕೋಂ ಲೇಟ್ ಹೆಚ್ ಜೆ ಕುಮಾರಸ್ವಾಮಿ, ವಾಸ ಮನೆ ನಂಬರ್ 464, 1ನೇ ಹಂತ, ನಜರ್‌ಬಾದ್ ಮೊಹಲ್ಲಾ, ಗಾಯತ್ರಿಪುರಂ ಲೇಔಟ್, ಮೈಸೂರು.

ಇವರು ಷೆಡ್ಯೂಲ್ ಸ್ವತ್ತಿನ ಮಾಲೀಕರಾದ ಶ್ರೀ ಸಂಜಯ್ ಎಂ.ವಿ. ಬಿನ್ ವೆಂಕಟೇಶ್ ಎಂ.ವಿ. ವಾಸ ಮಿರ್ಲೆ ಗ್ರಾಮ, ಕೆ ಆರ್ ನಗರ ತಾಲ್ಲೂಕು, ಕ್ವಾಟ್ರಸ್ ರಸ್ತೆ, ಮಿರ್ಲೆ, ಮೈಸೂರು. ಈ ಕೆಳಗೆ ನಮೂದಿಸಿರುವ ಷೆಡ್ಯೂಲ್ ಸ್ವತ್ತಿನ ಮಾಲೀಕರು ಸ್ವತ್ತನ್ನು ಮಾರಾಟ ಮಾಡಲು ನಿರ್ಧರಿಸಿದ್ದು, ಸದರಿ ಸ್ವತ್ತನ್ನು ನನ್ನ ಕಕ್ಷಿದಾರರಾದ ಶ್ರೀಮತಿ ಕೆ.ಎನ್. ಪೂರ್ಣಿಮಾರವರು ಶುದ್ಧ ಕ್ರಯಕ್ಕೆ ಖರೀದಿಸಲು ಸಿದ್ಧರಿದ್ದು ಈ ಷೆಡ್ಯೂಲ್ ಸ್ವತ್ತಿನ ಸಂಬಂಧ ಯಾವುದೇ ವ್ಯಕ್ತಿಗಳು ಸದರಿ ಸ್ವತ್ತಿನ ಮೇಲೆ ತಮ್ಮ ಹಕ್ಕು, ಹಿತಾಸಕ್ತಿ ಹೊಂದಿದ್ದಲ್ಲಿ, ತಾವಾಗಲಿ ಅಥವಾ ತಮ್ಮ ವಕೀಲರ ಮೂಲಕ ಈ ಕೆಳಗೆ ಸಹಿ ಮಾಡಿರುವವರ ಕಚೇರಿ ವಿಳಾಸಕ್ಕೆ ಈ ಪ್ರಕಟಣೆಯ ದಿನದಿಂದ ಏಳು ದಿನಗಳ ಒಳಗಾಗಿ ಲಿಖಿತವಾಗಿ ತಿಳಿಸತಕ್ಕದ್ದು, ತಪ್ಪಿದ್ದಲ್ಲಿ ನಮ್ಮ ಕಕ್ಷಿದಾರರು ಷೆಡ್ಯೂಲ್ ಸ್ವತ್ತನ್ನು ಖರೀದಿಸಿದ ನಂತರ ಷೆಡ್ಯೂಲ್ ಸ್ವತ್ತಿನ ಮೇಲೆ ಬೇರೆ ಯಾರಿಗೂ ಯಾವುದೇ ಹಿತಾಸಕ್ತಿ ಇಲ್ಲವೆಂದು ಪರಿಗಣಿಸಿ ಸ್ವತ್ತನ್ನು ಶುದ್ಧ ಕ್ರಯಕ್ಕೆ ಪಡೆದು ನೊಂದಾಯಿತ ಕ್ರಯವನ್ನು ಪೂರ್ಣಗೊಳಿಸಲಾಗುವುದು.

ಷೆಡ್ಯೂಲ್ ಸ್ವತ್ತಿನ ವಿವರ: ಮೈಸೂರು ತಾಲ್ಲೂಕು, ಇಲವಾಲ ಹೋಬಳಿ, ಬೆಳವಾಡಿ ಗ್ರಾಮದ ಸರ್ವೆ ನಂಬರ್ (ಹಳೇ ನಂ. 27/4 ಒಟ್ಟು ವಿಸ್ತೀರ್ಣ 1–17.08 (1 ಎಕರೆ 17.5 ಗುಂಟೆ) ಪೈಕಿ ಶ್ರೀಮತಿ ಮಹದೇವಮ್ಮ ಕೋಂ ಲೇ. ಅಪ್ಪುಗೌಡರವರ ಬಾಬು ಹೊಸ ನಂ. 27/15ರಲ್ಲಿ ಬರುವ ವಿಸ್ತೀರ್ಣ 00.11.08 (ಹನ್ನೊಂದುವರೆ ಗುಂಟೆ) ಗುಂಟೆ ಖುಷ್ಕಿ ಜಮೀನಿಗೆ ಚೆಕ್ಕುಬಂದಿ: ಪೂರ್ವಕ್ಕೆ: ಜೋಗೀಗೌಡರವರ ಜಮೀನು ; ಪಶ್ಚಿಮಕ್ಕೆ: ರಸ್ತೆ ; ಉತ್ತರಕ್ಕೆ: ಸ್ವಾಮಿರವರ ಜಮೀನು ; ದಕ್ಷಿಣಕ್ಕೆ : ವೇಣುರವರ ಜಮೀನು. ಈ ಮಧ್ಯೆ ಇರುವ 00.11.08 (ಹನ್ನೊಂದುವರೆ ಗುಂಟೆ) ಗುಂಟೆ ಜಮೀನನ್ನು, ನಮ್ಮ ಕಕ್ಷಿದಾರರು ಖರೀದಿಸುವ ಜಮೀನಾಗಿರುತ್ತದೆ.

Sd/- B.H. Ganesh, B.B.M., M.D.P., LL.B, Advocate, No. #1, Room No. 3, Opp. govt. Higher Primary School, Near Railway Bridge, K.G. Koppal Circle, Mysore-14. Mob: 9448342405

ಪುರಸಭೆ ಕಾರ್ಯಾಲಯ, ವಿರಾಜಪೇಟೆ
ಕೊಡಗು ಜಿಲ್ಲೆ 571218

ದೂರವಾಣಿ : – 08274-257332 । ಇಮೇಲ್ – itstaff_ulb_virajpet@yahoo.com ।
ವೆಬ್‌ಸೈಟ್ :– www.virajpettown.mrc.gov.in

ಕ್ರ.ಸಂ.ಪು.ವಿ/ಸ್ವ.ಭಾ.ಮಿ. ಎಸ್.ಎಫ್.ಸಿ.ಕು.ನೀ.ಸಪ,ಅ,ಎಸ್.ಎಫ್.ಸಿ,15ನೇ ಹ.ಆ/ಟಿ–07/2024–25

ಟೆಂಡರ್ ಪ್ರಕಟಣೆ

(ಇ–ಪ್ರೋಕ್ಯೂರಮೆಂಟ್ ಪೋರ್ಟಲ್ ಮುಖಾಂತರ)

ವಿರಾಜಪೇಟೆ ಪುರಸಭೆಗೆ ಸ್ವಚ್ಛ ಭಾರತ್ ಯೋಜನೆಯಡಿ ಘನತ್ಯಾಜ್ಯ ವಸ್ತು ನಿರ್ವಹಣೆಗಾಗಿ ಅನುಮೋದಿತ ವಿಸ್ತೃತ ಯೋಜನಾ ವರದಿಯಂತೆ ಬಿಡುಗಡೆಯಾದ ಅನುದಾನದಡಿ ಯಂತ್ರೋಪಕರಣಗಳನ್ನು ಒದಗಿಸಲು,, ಸ್ವಚ್ಛ ಭಾರತ್ ಮಿಷನ್ (ನಗರ) 2.0 ಯೋಜನೆಯಡಿ ಅನುಮೋದಿತ ವಿಸ್ತೃತ ಯೋಜನಾ ವರದಿಯಂತೆ ಬಿಡುಗಡೆಯಾದ ಅನುದಾನದಡಿ ಸಿವಿಲ್ ಕಾಮಗಾರಿ ಮತ್ತು ಯಂತ್ರೋಪಕರಣಗಳನ್ನು ಒದಗಿಸಲು ಹಾಗೂ ವಿರಾಜಪೇಟೆ ಪುರಸಭೆಯ 2023–24 ನೇ ಸಾಲಿನ ಎಸ್.ಎಫ್.ಸಿ ಅನುದಾನದ ಕುಡಿಯುವ ನೀರಿನ ಸಮಸ್ಯೆ ಪರಿಹರಿಸುವ ಅನುದಾನ, 2024–25 ನೇ ಸಾಲಿನ ಎಸ್.ಎಫ್.ಸಿ ಮುಕ್ತ ನಿಧಿ ಅನುದಾನ ಮತ್ತು 2022–23, 2024–25 ನೇ ಸಾಲಿನ 15ನೇ ಹಣಕಾಸು ಆಯೋಗದ ಸಾಮಾನ್ಯ ಮೂಲ ಅನುದಾನದಡಿಯಲ್ಲಿ, ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕ ನಿಯಮ 2000 ಹಾಗೂ ತಿದ್ದುಪಡಿ ನಿಯಮ 2001ಕ್ಕೆ ಒಳಪಟ್ಟು ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತ ಗುತ್ತಿಗೆದಾರರಿಂದ/ ನೋಂದಾಯಿತ ತಯಾರಕರು / ಸರಬರಾಜುದಾರರಿಂದ ಕೆ.ಜಿ–2 ಮತ್ತು ಕೆ.ಡಬ್ಲ್ಯೂ 1ರ, ಕೆ.ಡಬ್ಲ್ಯೂ 2 ರ ನಿಯಮಗಳಗನುಸಾರ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟ್‌ಲ್ ಮುಖಾಂತರ ಟೆಂಡರ್ ಆಹ್ವಾನಿಸಲಾಗಿದೆ. ಆಸಕ್ತ ತಯಾರಕರು/ಸರಬರಾಜುದಾರರು ತಮಗೆ ಬೇಕಾದ ಟೆಂಡರ್ ವಿವರಗಳನ್ನು www.kppp.karnataka.gov.in ವೆಬ್‌ಸೈಟ್ ಮೂಲಕ ಪಡೆದುಕೊಂಡು, ಭರ್ತಿ ಮಾಡಿದ ಟೆಂಡರನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟ್‌ಲ್ ಮುಖಾಂತರ ಸಲ್ಲಿಸಬಹುದು.

1. ಟೆಂಡರ್ ಫಾರಂಗಳನ್ನು ಡೌನ್ ಲೋಡ್ ಮಾಡಿಕೊಳ್ಳುವ ದಿನಾಂಕ: 23/08/2024 ರಿಂದ 06/09/2024 ಸಂಜೆ 17:30 ಗಂಟೆಗೆ
2. ಟೆಂಡರ್ ಸ್ವೀಕರಿಸಲು ಕೊನೆಯ ದಿನಾಂಕ: 07/09/2024, 17:30 ಗಂಟೆವರೆಗೆ
3. ಟೆಂಡರ್ ತೆರೆಯುವ ದಿನಾಂಕ : 09/09/2024 ಬೆಳಗ್ಗೆ 11.00 ಗಂಟೆಯ ನಂತರ
4. ಟೆಂಡರುಗಳನ್ನು ತೆರೆಯುವ ಸ್ಥಳ : ವಿರಾಜಪೇಟೆ ಪುರಸಭೆ

ಕಾಮಗಾರಿಗಳ ವಿವರ, ಹಾಗೂ ಹೆಚ್ಚಿನ ಮಾಹಿತಿಗಾಗಿ ಈ ಕಛೇರಿಯ ವೆಬ್ ಸೈಟ್:-www.virajpettown.mrc.gov.in ನಲ್ಲಿ ಮತ್ತು ಕಛೇರಿಯ ಸೂಚನಾ ಫಲಕವನ್ನು ನೋಡ ಬಹುದಾಗಿದೆ.

ಸಹಿ/– (ಶ್ರೀ ವಿನಾಯಕ್ ನರ್ವಡೆ ಭಾ.ಆ.ಸೇ) ಆಡಳಿತಾಧಿಕಾರಿ, ಪುರಸಭೆ, ವಿರಾಜಪೇಟೆ,

ಸಹಿ/– (ಶ್ರೀ ಚಂದ್ರ ಕುಮಾರ್.ಎ) ಮುಖ್ಯಾಧಿಕಾರಿ, ಪುರಸಭೆ, ವಿರಾಜಪೇಟೆ.

ಸಪ್ತರ್ಷಿ ಸೌಹಾರ್ದ ಪತ್ತಿನ ಸಹಕಾರಿ ಸಂಘ ನಿಯಮಿತ

#48, 2ನೇ ಮುಖ್ಯರಸ್ತೆ, 18ನೇ ಅಡ್ಡರಸ್ತೆ, ಜಯನಗರ, ಮೈಸೂರು–570014 ದೂರವಾಣಿ–2567755
Email ID : saptharshimys@gmail.com

ರಜತ ಮಹೋತ್ಸವದ ಆಹ್ವಾನ ಪತ್ರಿಕೆ

ಸನ್ಮಾನ್ಯ ಸದಸ್ಯರೇ,

ನಮ್ಮ ಸಹಕಾರಿಯ ರಜತ ಮಹೋತ್ಸವವನ್ನು ದಿನಾಂಕ 25.08.2024ನೇ ಭಾನುವಾರ ಬೆಳಗ್ಗೆ 10.15ಗಂಟೆಗೆ ಸರಿಯಾಗಿ ಶಾರದಾ ವಿಲಾಸ ಕಾಲೇಜು ಶತಮಾನೋತ್ಸವ ಭವನದಲ್ಲಿ ಸಹಕಾರಿಯ ಅಧ್ಯಕ್ಷರಾದ ಶ್ರೀ ಎಂ.ಎಸ್.ಚಂದ್ರಶೇಖರ್ ಇವರ ಘನ ಅಧ್ಯಕ್ಷತೆಯಲ್ಲಿ ನಡೆಸಲು ತೀರ್ಮಾನಿಸಿರುತ್ತದೆ. ಈ ಕಾರ್ಯಕ್ರಮವನ್ನು ಶ್ರೀ ಶ್ರೀ ದತ್ತ ವಿಜಯಾನಂದ ತೀರ್ಥ ಸ್ವಾಮೀಜಿ–ರವರು ಉದ್ಘಾಟಿಸಲಿದ್ದು, ಶ್ರೀ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಲೋಕಸಭಾ ಸದಸ್ಯರು, ಮೈಸೂರು–ಕೊಡಗು ಲೋಕಸಭಾ ಕ್ಷೇತ್ರ, ಅತಿಥಿಗಳಾಗಿ ಶ್ರೀ ಜಿ.ಟಿ.ದೇವೇಗೌಡ, ಶಾಸಕರು, ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರ ಹಾಗೂ ಅಧ್ಯಕ್ಷರು, ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ, ಬೆಂಗಳೂರು, ಶ್ರೀ ಜಿ.ನಂಜನಗೌಡ ಅಧ್ಯಕ್ಷರು, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು, ಶ್ರೀ ಟಿ.ಎಸ್.ಶ್ರೀವತ್ಸ ಶಾಸಕರು, ಕೃಷ್ಣರಾಜ ವಿಧಾನಸಭಾಕ್ಷೇತ್ರ ಮತ್ತು ಡಾ.ಏಂಜಲ್ ರಾಜ್, ಐ.ಪಿ.ಓ.ಎಸ್ ಹಿರಿಯ ಅಂಚೆ ಅಧೀಕ್ಷಕರು, ಮೈಸೂರು ಅಂಚೆ ವಿಭಾಗ, ಶ್ರೀ ಹೆಚ್.ವಿ.ರಾಜೀವ್, ಅಧ್ಯಕ್ಷರು ಮೈಸೂರು ಜಿಲ್ಲಾ ಸಹಕಾರ ಯೂನಿಯನ್ ಇವರುಗಳು ಭಾಗವಹಿಸಲಿದ್ದು ಮಾನ್ಯ ಸದಸ್ಯರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕಾಗಿ ಈ ಮೂಲಕ ಕೋರಲಾಗಿದೆ.

ಕಾರ್ಯಕ್ರಮದ ನಂತರ ಲಘು ಉಪಹಾರದ ವ್ಯವಸ್ಥೆ ಇರುತ್ತದೆ.

ದಿನಾಂಕ 26.08.2024ನೇ ಸೋಮವಾರದಂದು ಸಹಕಾರಿಗೆ ರಜೆ ಘೋಷಿಸಲಾಗಿದೆ.

ದಿನಾಂಕ : 24.08.2024
ಸ್ಥಳ: ಮೈಸೂರು

ಆಡಳಿತ ಮಂಡಳಿಯ ಅಪ್ಪಣೆ ಮೇರೆಗೆ
ಸಹಿ/– ಹೆಚ್.ಎ.ಪುರುಷೋತ್ತಮ
ಮುಖ್ಯಕಾರ್ಯನಿರ್ವಹಣಾಧಿಕಾರಿಗಳು